ಸೋಮವಾರ, ಮೇ 24, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 144 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಇತ್ತೀಚೆಗೆ ಫ್ಯಾಷನ್ ಕಮ್ಯೂನಿಕೇಷನ್ ಕೋರ್ಸ್ ಜನಪ್ರಿಯವಾಗುತ್ತಿದೆ. ಬದಲಾಗುವ ಟ್ರೆಂಡ್‌ನ ಕುರಿತು ಆಸಕ್ತಿ ಹಾಗೂ ಜ್ಞಾನ ಹೊಂದಿರುವವರು ಈ ಪದವಿ ಕೋರ್ಸ್‌ಗೆ ಪ್ರವೇಶ ಪಡೆಯಬಹುದು.



ಆಳ-ಅಗಲ
ಚಂಡಮಾರುತ ಹೆಚ್ಚುತ್ತಿರುವುದೇಕೆ?

ಅಲೋಪತಿ ಔಷಧ: ಹೇಳಿಕೆ ಹಿಂಪಡೆದ ಬಾಬಾ ರಾಮ್‌ದೇವ್ 2
ಕರುಳಿನಲ್ಲೂ ಕಪ್ಪು ಶಿಲೀಂಧ್ರ ಪತ್ತೆ! 9

ಅಪಾಯದಲ್ಲಿ ಕಾರ್ಯ ನಿರ್ವಹಿಸುವ ಒತ್ತಡ
ಶಿಕ್ಷಕರಿಗೆ ಕೋವಿಡ್ ಕರ್ತವ್ಯದ 'ಹೊರೆ'! 5

ಕೋವಿಡ್: ಸ್ಟಿರಾಯ್ಡ್ ಬಳಕೆ, ಭಯದಿಂದ ದಿಢೀರ್ ಏರಿಕೆ • 40 ವರ್ಷ ಕೆಳಗಿನವರಲ್ಲೇ ಹೆಚ್ಚು

ರೋಗಿಗಳಲ್ಲಿ 'ಅಧಿಕ ಸಕ್ಕರೆ ಅಂಶ'

• ಎಸ್. ರವಿಪ್ರಕಾಶ್

ಬೆಂಗಳೂರು: ಕೋವಿಡ್–19 ರೋಗಿಗಳಲ್ಲಿ ಸ್ಟಿರಾಯ್ಡ್ ಬಳಕೆಯಿಂದ 'ಕಪ್ಪು ಶಿಲೀಂಧ್ರ' ಸಮಸ್ಯೆ ತಲೆದೋರಿರುವ ಬೆನ್ನಲ್ಲೇ, ಈ ಸೋಂಕಿನಿಂದ ಗುಣಮುಖರಾದ ಸಾಕಷ್ಟು ಜನರ ರಕ್ತದಲ್ಲಿ ಅಧಿಕ ಪ್ರಮಾಣದ ಸಕ್ಕರೆ ಅಂಶ (ಹೈಪರ್ ಗ್ಲೈಸಿಮಿಯಾ) ಕಾಣಿಸಿಕೊಳ್ಳುತ್ತಿದೆ.

ಎರಡನೇ ಅಲೆಯಲ್ಲಿ 40 ವರ್ಷ ಕೆಳಗಿನವರಲ್ಲಿ ಹೈಪರ್ ಗ್ಲೈಸಿಮಿಯಾ ಕಾಡುತ್ತಿದೆ.

ಕೋವಿಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದವರು ಮತ್ತು ಮನೆಯಲ್ಲಿ ಪ್ರತ್ಯೇಕವಾಗಿದ್ದವರಲ್ಲೂ 'ಹೈಪರ್ ಗ್ಲೈಸಿಮಿಯಾ' ಕಾಣಿಸಿಕೊಂಡಿದೆ. ಇದಕ್ಕೆ ಕೋವಿಡ್ ಸೋಂಕು ಪ್ರಧಾನ ಕಾರಣ. ಮಧುಮೇಹದ ಹಿನ್ನೆಲೆ ಇಲ್ಲದವರೂ ಈಗ ಇದಕ್ಕಿದ್ದ ಹಾಗೆ ಮಧುಮೇಹಿಗಳಾಗುತ್ತಿದ್ದಾರೆ. ಕೆಲವರಲ್ಲಿ ಸಾಮಾನ್ಯ ಸ್ವರೂಪದಲ್ಲಿದ್ದರೆ, ಹಲವರಲ್ಲಿ ಗಂಭೀರ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ.

ಸ್ಟಿರಾಯ್ಡ್ ಜೀವರಕ್ಷಕವೇನೊ ಹೌದು. ಆದರೆ, ಅದರ ಬಳಕೆ ಕೋವಿಡ್ ರೋಗಿಗಳನ್ನು ಹೆಚ್ಚು ಹೆಚ್ಚು ಸವಾಲುಗಳಿಗೆ ಒಡ್ಡುತ್ತಿದೆ. ವೈರಾಣುವಿನ ದಾಳಿ, ಸ್ಟಿರಾಯ್ಡ್ ಬಳಕೆ, ಕೋವಿಡ್‌ನಿಂದ ಸಾವಿನ ಭೀತಿ ಮತ್ತು ಮಾನಸಿಕ ಒತ್ತಡವೇ ರಕ್ತದಲ್ಲಿ ಸಕ್ಕರೆ ಅಂಶ ಏರುಪೇರಾಗಲು ಕಾರಣ ಎಂದು 'ಡಯಾಬಿಟೀಸ್ ಇಂಡಿಯಾ' ಬಹಿರಂಗಪಡಿಸಿದೆ.

ಪ್ರಜಾವಾಣಿ ವಿಶೇಷ

ಕೋವಿಡ್ ರೋಗಿಗಳಲ್ಲಿ ಸ್ಟಿರಾಯ್ಡ್ ಬಳಕೆಯ ಸಂದರ್ಭ, ಡೋಸೇಜ್ ಪ್ರಮಾಣ ಮತ್ತು ಎಷ್ಟು ಅವಧಿಯವರೆಗೆ ಬಳಕೆ ಮಾಡಬೇಕು ಎಂಬುದನ್ನು ವೈಜ್ಞಾನಿಕವಾಗಿ ನಿರ್ಧರಿಸುವಲ್ಲಿ ವೈದ್ಯರು ಎಡವುತ್ತಿದ್ದಾರೆ. ಇದರ ಪರಿಣಾಮ, ಕೋವಿಡ್‌ನಿಂದ ಬಳಲುತ್ತಿರುವವರಲ್ಲಿ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಆದ್ದರಿಂದ, ಸ್ಟಿರಾಯ್ಡ್ ಬಳಕೆಯಿಂದ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾದಾಗ ಅದನ್ನು ತ್ವರಿತಗತಿಯಲ್ಲಿ ನಿಭಾಯಿಸುವುದು ಹೇಗೆ ಎಂಬುದನ್ನು ವೈದ್ಯರು ತಕ್ಷಣವೇ ತಿಳಿದುಕೊಂಡು ಚಿಕಿತ್ಸೆ ನೀಡಬೇಕಿದೆ ಎಂದು ಅಧ್ಯಯನ ತಿಳಿಸಿದೆ.

5ನೇ ಪುಟ ನೋಡಿ

ಹೈಪರ್ ಗ್ಲೈಸಿಮಿಯಾಕ್ಕೆ ಕಾರಣವೇನು?

- ಸ್ಟಿರಾಯ್ಡ್ ಬಳಕೆಯಿಂದ ಜಠರದಲ್ಲಿ ಗ್ಲುಕೋಸ್ ಅಧಿಕ ಉತ್ಪಾದನೆ ಆಗುತ್ತದೆ. ಇದರಿಂದ ಪ್ರತಿ ನಿಯಂತ್ರಕ ಹಾರ್ಮೋನುಗಳ ಮೇಲೆ ಪರಿಣಾಮ ಉಂಟಾಗುತ್ತದೆ.
- ದೇಹದಲ್ಲಿ ಇನ್ಸುಲಿನ್ ಉತ್ಪಾದನೆಯನ್ನು ತಡೆಯುತ್ತದೆ, ಇನ್ಸುಲಿನ್ ನಿರೋಧಕತೆಯನ್ನು ಹೆಚ್ಚಿಸುತ್ತದೆ.
- ಮಾಂಸಖಂಡಗಳು ಮತ್ತು ಅಡಿಪೋಸ್ ಅಂಗಾಂಶಗಳು ಗ್ಲುಕೋಸ್ ಪಡೆದುಕೊಳ್ಳುವುದು ಕಡಿಮೆ ಮಾಡುತ್ತದೆ. ದಾಳಿಗೊಳಗಾದ ಬಿಟಾ ಕೋಶಗಳು ಕಾರ್ಯನಿರ್ವಹಿಸುವುದನ್ನು ತಗ್ಗಿಸುತ್ತವೆ.
- ರೋಗದಿಂದ ಉಂಟಾಗುವ ಒತ್ತಡ, ಭಯಭೀತಿಗೊಳ್ಳುವುದರಿಂದ ಒತ್ತಡದ ಹಾರ್ಮೋನುಗಳು ಹೆಚ್ಚು ಪ್ರಚೋದನೆಗೆ ಒಳಗಾಗುತ್ತವೆ. ಇದರಿಂದ ರಕ್ತದಲ್ಲಿ ಸಕ್ಕರೆ ಅಂಶ ಅಧಿಕ ಪ್ರಮಾಣದಲ್ಲಿ ಹೆಚ್ಚಾಗುತ್ತದೆ.



ರೋಗಿಗಳು ಮಾಡಬೇಕಾಗಿದ್ದೇನು?

- ಕೋವಿಡ್ ರೋಗಿಗಳು ಮನೆಯಲ್ಲಿದ್ದಾಗ ಗ್ಲೂಕೊಮೀಟರ್ ಮೂಲಕ 2 ರಿಂದ 3 ಬಾರಿ ಪರೀಕ್ಷೆ ಮಾಡಿಕೊಳ್ಳಬೇಕು
- ರೋಗಿಗಳ ಆಹಾರ ಪದ್ಧತಿ ಮತ್ತು ಜೀವನ ಶೈಲಿ ಬದಲಿಸಬೇಕು
- ಯೋಗ, ವ್ಯಾಯಾಮ, ನಡಿಗೆ, ಪ್ರಾಣಾಯಾಮ ಮತ್ತು ಧ್ಯಾನ ಮಾಡಬೇಕು

ಮುಖ್ಯಾಂಶಗಳು

- ದೇಶದಲ್ಲಿ 7.7 ಕೋಟಿ ಜನರಲ್ಲಿ ಮಧುಮೇಹ
- 2.5 ಕೋಟಿ ಜನ ಮಧುಮೇಹ ಪೂರ್ವದ ಸ್ಥಿತಿಯಲ್ಲಿದ್ದಾರೆ
- 4 ಕೋಟಿ ಜನಕ್ಕೆ ಮಧುಮೇಹ ಇರುವುದರ ಅರಿವಿಲ್ಲ



ಕೋವಿಡ್ ರೋಗಿಗಳ ಸಾವಿಗೆ ನಿಖರ ಕಾರಣ ಪತ್ತೆ ಮಾಡುತ್ತಿಲ್ಲ. ಸಾಕಷ್ಟು ಪ್ರಕರಣಗಳಲ್ಲಿ ರಕ್ತದಲ್ಲಿ ಸಕ್ಕರೆ ಅಂಶ ಏರುಪೇರಾಗುತ್ತಿರುವುದೂ ಕಾರಣವಾಗಿದೆ

ಡಾ. ಎಸ್.ಆರ್.ಅರವಿಂದ್
ಅಧ್ಯಕ್ಷ, ಡಯಾಬಿಟೀಸ್ ಇಂಡಿಯಾ

ಸುಶೀಲ್ ಕುಮಾರ್ ನ್ಯಾಯಾಲಯಕ್ಕೆ ಹಾಜರು

ನವದೆಹಲಿ (ಪಿಟಿಐ): ಕೊಲೆ ಆರೋಪದಲ್ಲಿ ಬಂಧನವಾಗಿರುವ ಒಲಿಂಪಿಯನ್ ಕುಸ್ತಿಪಟು ಸುಶೀಲ್ ಕುಮಾರ್ ಅವರನ್ನು ದೆಹಲಿ ಪೊಲೀಸರು ನ್ಯಾಯಾಲಯಕ್ಕೆ ಭಾನುವಾರ ಹಾಜರುಪಡಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಗ್ರವಾಗಿ ವಿಚಾರಣೆ ಮಾಡಲು ಸುಶೀಲ್ ಅವರನ್ನು 12 ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ನೀಡಬೇಕು ಎಂದು ಸರ್ಕಾರಿ ಅಭಿಯೋಜಕ ಅತುಲ್ ಶ್ರೀವಾಸ್ತವ ಮನವಿ ಸಲ್ಲಿಸಿದರು.



ಸುಶೀಲ್ ಕುಮಾರ್

ವಾದ ಆಲಿಸಿದ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ದಿವ್ಯಾ ಮಲ್ಹೋತ್ರಾ ಅವರು ಮನವಿಯನ್ನು ಕಾಯ್ದಿಟ್ಟಿದ್ದಾರೆ. ಇದೇ ಸಂದರ್ಭದಲ್ಲಿ ಸುಶೀಲ್ ಅವರನ್ನು ವಿಚಾರಣೆ ನಡೆಸಲು ಪೊಲೀಸರಿಗೆ 30 ನಿಮಿಷಗಳ ಅವಕಾಶವನ್ನೂ ನೀಡಿದ್ದರು.

ಈಚೆಗೆ ಛತ್ರಸಾಲಾ ಕ್ರೀಡಾಂಗಣದಲ್ಲಿ ನಡೆದಿದ್ದ ಜಗಳದಲ್ಲಿ ಹಲ್ಲೆಗೊಳಗಾಗಿದ್ದ 23 ವರ್ಷದ ಕುಸ್ತಿಪಟು ಸಾಗರ್ ಧನಕರ್ ಅಸುನೀಗಿದ್ದರು. ಹಲ್ಲೆ ಮಾಡಿದವರೊಂದಿಗೆ ಸುಶೀಲ್ ಕೂಡ ಇದ್ದರು ಎನ್ನಲಾಗಿದೆ.

ವಿವರ 10

ಬುಧವಾರ ಅಪ್ಪಳಿಸಲಿದೆ ಚಂಡಮಾರುತ

ನವದೆಹಲಿ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ಸೃಷ್ಟಿಯಾಗಿರುವ ವಾಯು ಭಾರ ಕುಸಿತವು ತೀವ್ರ ಚಂಡಮಾರುತವಾಗಿ ಪರಿವರ್ತನೆ ಆಗಲಿದೆ. ಇದು ಪಶ್ಚಿಮ ಬಂಗಾಳ ಮತ್ತು ಒಡಿಶಾ ಕರಾವಳಿಗೆ ಬುಧವಾರ ಅಪ್ಪಳಿಸಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. 9

ಹಳ್ಳಿಗಳಿಗೆ ಇನ್ನು 'ಮೊಬೈಲ್ ಕ್ಲಿನಿಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ನಿಯಂತ್ರಿಸುವ ಉದ್ದೇಶದಿಂದ ಪ್ರತಿಯೊಬ್ಬರನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಲು ಅನುಕೂಲ ಆಗುವಂತೆ 'ವೈದ್ಯರ ನಡೆ ಹಳ್ಳಿಯ ಕಡೆ' (ಮೊಬೈಲ್ ಕ್ಲಿನಿಕ್) ಕಾರ್ಯಕ್ರಮ ಹಮ್ಮಿಕೊಳ್ಳಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಬಗ್ಗೆ ಮಾರ್ಗಸೂಚಿ ಹೊರಡಿಸಲಾಗಿದ್ದು, ವೈದ್ಯರ ತಂಡದ ಜೊತೆ ತರಬೇತಿ ಅವಧಿಯಲ್ಲಿರುವ ವೈದ್ಯರು, ವೈದ್ಯಕೀಯ ಸಿಬ್ಬಂದಿಯನ್ನೂ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ. ಕಾರ್ಯಕ್ರಮ ಆರಂಭಿಸುವುದಕ್ಕೂ ಎರಡು ದಿನ ಮೊದಲು ಗ್ರಾಮ ಪಂಚಾಯಿತಿಗಳು ಜನರಿಗೆ ಮಾಹಿತಿ ನೀಡುವಂತೆ ತಿಳಿಸಲಾಗಿದೆ.

ಮೊಬೈಲ್ ಕ್ಲಿನಿಕ್ ತಂಡ ಒಂದು ವಾರದಲ್ಲಿ ತಾಲ್ಲೂಕಿನಲ್ಲಿರುವ ಎಲ್ಲ ಗ್ರಾಮಗಳಿಗೆ ಭೇಟಿ ನೀಡಬೇಕು. ಪ್ರತಿ ದಿನ 3 ರಿಂದ 4 ಹಳ್ಳಿಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಬೇಕು. ಸೋಂಕಿನ ಲಕ್ಷಣ ಇದ್ದವರಿಗೆ ಈ ತಂಡ ಆರ್‌ಎಟಿ ಪರೀಕ್ಷೆ ನಡೆಸಲಿದೆ. ಸೋಂಕು ದೃಢಪಟ್ಟರೆ, ಟ್ರಯಾಜಿಂಗ್ ಮಾಡಬೇಕು. ರೋಗಲಕ್ಷಣದ ಆಧಾರದಲ್ಲಿ ಕೋವಿಡ್ ಆರೈಕೆ ಕೇಂದ್ರಕ್ಕೆ ಸೇರಿಸಬೇಕೇ ಅಥವಾ ಆಸ್ಪತ್ರೆಗೆ ದಾಖಲಿಸಬೇಕೇ ಎಂದು ವೈದ್ಯರು ತೀರ್ಮಾನ ತೆಗೆದುಕೊಂಡು, ವೈದ್ಯಕೀಯ ಕಿಟ್ ನೀಡಬೇಕು. ಸೋಂಕು ದೃಢಪಟ್ಟವರ ಸಂಪರ್ಕದಲ್ಲಿ ಇದ್ದವರನ್ನೂ ತಪಾಸಣೆಗೆ ಒಳಪಡಿಸಬೇಕು. ರೋಗಲಕ್ಷಣಗಳಿದ್ದು ಆರ್‌ಎಟಿ ವರದಿ ನೆಗೆಟಿವ್ ಬಂದರೆ, ಗಂಟಲು ಮತ್ತು ಮೂಗಿನ ದ್ರವ ಸಂಗ್ರಹಿಸಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಬೇಕು. ಅಲ್ಲದೆ, ಕನಿಷ್ಠ ವೈದ್ಯಕೀಯ ಚಿಕಿತ್ಸೆ ಆರಂಭಿಸಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಈ ತಂಡ ನಿತ್ಯದ ವರದಿಯನ್ನು ಆಯಾ ತಾಲ್ಲೂಕು ಆರೋಗ್ಯ ಅಧಿಕಾರಿಗೆ ನೀಡಬೇಕು. ತಂಡಕ್ಕೆ ಪಿಪಿಇ ಕಿಟ್ ಸೇರಿದಂತೆ ಎಲ್ಲ ವೈದ್ಯಕೀಯ ಪರಿಕರಗಳನ್ನು ಒದಗಿಸಲಾಗುವುದು. ಸ್ಥಳೀಯ ಆಶಾ ಕಾರ್ಯಕರ್ತೆಯರು ಎನ್ 95 ಮಾಸ್ಕ್ ಮತ್ತು ಪಿಪಿಇ ಕಿಟ್ ಧರಿಸಿ ಮನೆ ಮನೆಗಳಿಗೆ ಭೇಟಿ ನೀಡಿ ಸೋಂಕು ಲಕ್ಷಣ ಇರುವವರನ್ನು ಈ ತಂಡಕ್ಕೆ ಶಿಫಾರಸು ಮಾಡಬೇಕು. ಸೋಂಕಿತರನ್ನು ಕರೆದೊಯ್ಯಲು ಆಂಬುಲೆನ್ಸ್ ಅಥವಾ ಅದೇ ಮಾದರಿಯ ವಾಹನವನ್ನು ಸಿದ್ಧಪಡಿಸಿಕೊಳ್ಳಬೇಕು. ಮೊಬೈಲ್ ಕ್ಲಿನಿಕ್‌ನ ಸಿಬ್ಬಂದಿ ಗ್ರಾಮಮಟ್ಟದಲ್ಲಿ ರಚಿಸಲಾಗಿರುವ ಕಾರ್ಯಪಡೆಯ ಸಮನ್ವಯದಲ್ಲಿ ಕೆಲಸ ಮಾಡಬೇಕು ಎಂದೂ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

24,24,904 ▲	ಒಟ್ಟು ಸೋಂಕಿತರು (23,98,925 ನಿನ್ನೆಯ ವಿವರ)
4,72,986 ▼	ಸಕ್ರಿಯ ಪ್ರಕರಣಗಳು
19,26,615 ▲	ಗುಣಮುಖರಾದವರು
25,282 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	25,979 ▼
ಗುಣಮುಖ	35,573 ▼
ಸಾವು	626 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-4

'ದ್ವಿತೀಯ ಪಿಯು ಪರೀಕ್ಷೆ ನಡೆಸುವುದು ಸೂಕ್ತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪದವಿಪೂರ್ವ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ದ್ವಿತೀಯ ಪಿಯು ಪರೀಕ್ಷೆಗಳನ್ನು ನಡೆಸುವುದು ಒಳ್ಳೆಯದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ಆಯೋಜಿಸಿದ್ದ ಎಲ್ಲ ರಾಜ್ಯಗಳ ಶಿಕ್ಷಣ ಸಚಿವರ ಸಭೆಯಲ್ಲಿ ಮಾತನಾಡಿದ ಅವರು, 'ವೃತ್ತಿಪರ ಶಿಕ್ಷಣಕ್ಕೆ ಸನ್ನದ್ಧರಾಗುವ ಹಂತದಲ್ಲಿರುವ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಯಾವುದಾದರೂ ಮಾದರಿಯಲ್ಲಿ ಪರೀಕ್ಷೆಗಳನ್ನು ನಡೆಸಬೇಕಾದ್ದು ಅನಿವಾರ್ಯ. ಕೋವಿಡ್ ನಿಯಂತ್ರಣಕ್ಕೆ ಬಂದ ನಂತರ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿಯಾದರೂ ಪರೀಕ್ಷೆಗಳನ್ನು ನಡೆಸುವುದು ಸೂಕ್ತ' ಎಂದು ಪ್ರತಿಪಾದಿಸಿದರು.

'ಕರ್ನಾಟಕದಲ್ಲಿ ಎರಡನೇ ಅಲೆ ನಿಯಂತ್ರಣಕ್ಕೆ ಬಂದ ಕೂಡಲೇ 15-20 ದಿನಗಳ ಕಾಲಾವಕಾಶ ನೀಡಿ ಪರೀಕ್ಷೆಗಳ ದಿನಾಂಕ ಪ್ರಕಟಿಸಲು ಸದ್ಯಕ್ಕೆ ತೀರ್ಮಾನಿಸಲಾಗಿದೆ. ಕೋವಿಡ್ ಕಾರಣಕ್ಕಾಗಿ ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಳ್ಳಲು ವಿಫಲರಾಗುವ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಹೊಸತಾಗಿ ಪರೀಕ್ಷೆ ಬರೆಯಲು ಇದೇ ಸಾಲಿನಲ್ಲಿ ಅವಕಾಶ ಕಲ್ಪಿಸಲು ಕೂಡಾ ಸರ್ಕಾರವು ಯೋಜಿಸಿದೆ' ಎಂದು ಭಾನುವಾರ ತಿಳಿಸಿದರು.

'ಕರ್ನಾಟಕದಲ್ಲಿ ದ್ವಿತೀಯ ಪಿಯು ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವ ಕಾರ್ಯ ಪೂರ್ಣಗೊಳಿಸಲಾಗಿದೆ. ಸುರಕ್ಷಿತವಾಗಿ ಪರೀಕ್ಷೆಗಳನ್ನು ನಡೆಸಲು ಎಲ್ಲ ಪೂರ್ವಸಿದ್ಧತೆ ಮಾಡಿಕೊಳ್ಳಲಾಗಿದೆ. ಜುಲೈ ತಿಂಗಳಲ್ಲಿ ಪರೀಕ್ಷೆಗಳನ್ನು ನಡೆಸಲು ಸಾಧ್ಯವಾದರೆ ಆಗಸ್ಟ್‌ನಲ್ಲಿ ಫಲಿತಾಂಶ ಘೋಷಿಸಬಹುದು. ನೀಟ್, ಜೆಇಇ, ಸಿಇಟಿ, ಐಸಿಎಆರ್ ಅಂಥ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆಗಸ್ಟ್ ತಿಂಗಳ ಸೂಕ್ತ ದಿನಾಂಕಗಳಂದು ಆಯೋಜಿಸಬಹುದು' ಎಂದು ಸುರೇಶ್ ಕುಮಾರ್ ಸಲಹೆ ನೀಡಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪರೀಕ್ಷಾ ಪ್ರಕ್ರಿಯೆ ಸರಳೀಕರಣಗೊಳ್ಳಬೇಕೆಂದು ಸಭೆಯಲ್ಲಿ ಹಲವರು ಪ್ರತಿಪಾದಿಸಿದರು. ಸರಳೀಕೃತ ಮಾದರಿಯಲ್ಲಿ ಪರೀಕ್ಷಾ ಪ್ರಕ್ರಿಯೆ ಪೂರ್ಣಗೊಳಿಸಲು 45 ದಿನಗಳ ಕಾಲಾವಕಾಶ ಅಗತ್ಯವಿದೆ. ಕಡಿಮೆ ಅವಧಿಯ ಪರೀಕ್ಷೆಗಳನ್ನು ನಡೆಸುವ ಯೋಜನೆ ಬಗ್ಗೆ ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ಸಲಹೆ ನೀಡಿದೆ ' ಎಂದರು.

12ನೇ ತರಗತಿ: ಆಯ್ದ ವಿಷಯಗಳಲ್ಲಿ ಮಾತ್ರ ಪರೀಕ್ಷೆ?

ನವದೆಹಲಿ: 12ನೇ ತರಗತಿಯ ವಿದ್ಯಾರ್ಥಿಗಳಿಗೆ ಕೆಲವು ವಿಷಯಗಳಲ್ಲಿ ಮಾತ್ರ ಪರೀಕ್ಷೆಗಳನ್ನು ನಡೆಸಬೇಕು ಮತ್ತು ಹಂತ ಹಂತವಾಗಿ ನಡೆಸಬೇಕು ಎಂಬ ಸಲಹೆಯನ್ನು ಬಹುತೇಕ ಎಲ್ಲಾ ರಾಜ್ಯಗಳು ಸ್ವೀಕರಿಸಿವೆ.

ವಿವಿಧ ರಾಜ್ಯಗಳ ಶಿಕ್ಷಣ ಇಲಾಖೆಗಳ ಪ್ರತಿನಿಧಿಗಳ ಜತೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಈ ವಿಚಾರದಲ್ಲಿ ಒಮ್ಮತ ವ್ಯಕ್ತವಾಗಿದೆ.

'ಪರೀಕ್ಷೆ ನಡೆಸುವ ವಿಚಾರದಲ್ಲಿ ಕೇಂದ್ರವು ಅಂತಿಮ ತೀರ್ಮಾನ ಕೈಗೊಳ್ಳುವುದಕ್ಕೂ ಮುನ್ನ, ಮೇ 25 ರೊಳಗಾಗಿ ತಮ್ಮ ಅಭಿಪ್ರಾಯಗಳನ್ನು ಲಿಖಿತರೂಪದಲ್ಲಿ ಸಲ್ಲಿಸುವಂತೆ ರಾಜ್ಯಗಳಿಗೆ ಸೂಚಿಸಲಾಗಿದೆ' ಎಂದು ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ತಿಳಿಸಿದ್ದಾರೆ.

ಕೆಲವೇ ಕೆಲವು ವಿಷಯಗಳಲ್ಲಿ ಪರೀಕ್ಷಾ ಕೇಂದ್ರಗಳಲ್ಲೇ ಪರೀಕ್ಷೆ ನಡೆಸುವುದು ಮತ್ತು ಬಹು ಆಯ್ಕೆ ಮಾದರಿಯಲ್ಲಿ ಎಲ್ಲಾ ವಿಷಯಗಳಿಗೂ ಗರಿಷ್ಠ ತಲಾ 90 ನಿಮಿಷಗಳ ಪರೀಕ್ಷೆ ನಡೆಸುವುದು ಎಂಬ ಎರಡು ಪ್ರಸ್ತಾವಗಳನ್ನು ರಾಜ್ಯಗಳ ಮುಂದಿಡಲಾಗಿತ್ತು. ಭೌತಿಕ ಅಂತರ ಕಾಯ್ದುಕೊಳ್ಳುವ ಸಲುವಾಗಿ ಪರೀಕ್ಷಾ ಕೇಂದ್ರಗಳನ್ನು ಹೆಚ್ಚಿಸುವ ಬಗ್ಗೆಯೂ ಮಂಡಳಿಯು ಪ್ರಸ್ತಾಪಿಸಿತ್ತು. ಕರ್ನಾಟಕ ಹಾಗೂ ತಮಿಳುನಾಡಿನ ಪ್ರತಿನಿಧಿಗಳು 12ನೇ ತರಗತಿಗೆ ಪರೀಕ್ಷೆಗಳನ್ನು ನಡೆಸುವುದರ ಪರವಾಗಿ ಮಾತನಾಡಿದರೆ, ದೆಹಲಿ ಹಾಗೂ ಮಹಾರಾಷ್ಟ್ರ ಪ್ರತಿನಿಧಿಗಳು ಪರೀಕ್ಷೆಗೂ ಮುನ್ನ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಲಸಿಕೆಗಳನ್ನು ನೀಡಬೇಕು ಎಂದು ಒತ್ತಾಯಿಸಿದವು.

ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆ ನಡೆಸುವ ಬಗ್ಗೆ ಜೂನ್ 1ರಂದು ನಿರ್ಧಾರ ತೆಗೆದುಕೊಳ್ಳಲಾಗುವುದು.

ಪ್ರೀತಿಯ ನೆಪದಲ್ಲಿ ಅತ್ಯಾಚಾರ, ಕೊಲೆ ಆರೋಪ; ಮೂವರ ಬಂಧನ

ಇಬ್ಬರು ಬಾಲಕಿಯರ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ವಿಜಯಪುರ: ಬಸವನ ಬಾಗೇವಾಡಿ ತಾಲ್ಲೂಕಿನ ಗ್ರಾಮವೊಂದರ ಬಾಲಕಿಯರ ಅನುಮಾನಾಸ್ಪದ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಭಾನುವಾರ ಪೊಲೀಸರು ತಿಳಿಸಿದ್ದಾರೆ.

ಅತ್ಯಾಚಾರ ಎಸಗಿ, ಕೊಲೆ ಮಾಡಲಾಗಿದೆ ಎಂದು ಗ್ರಾಮದ ಯುವಕನ ಹೆಸರನ್ನು ಉಲ್ಲೇಖಿಸಿ ಬಾಲಕಿಯರ ಪೋಷಕರು ಬಸವನ ಬಾಗೇವಾಡಿ ಠಾಣೆಯಲ್ಲಿ ಮೇ 14ರಂದು ದೂರು ದಾಖಲಿಸಿದ್ದರು.

ಚಿತ್ರದುರ್ಗದ ಮಾದಾರ ಚನ್ನಯ್ಯ ಸ್ವಾಮೀಜಿ ಸೇರಿದಂತೆ ವಿಜಯಪುರ ಜಿಲ್ಲೆಯ ವಿವಿಧ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿ, ದುಷ್ಕರ್ಮಿಗಳ ಬಂಧನಕ್ಕೆ ಆಗ್ರಹಿಸಿದ್ದರು.

ಇನ್ನೊಂದೆಡೆ, ಎರಡು ಬೇರೆ ಕೋಮಿಗೆ ಸೇರಿದ ಹುಡುಗ ಮತ್ತು ಹುಡುಗಿಯರ ನಡುವಿನ ಪ್ರೇಮ ಪ್ರಕರಣವಿದು. ಇದನ್ನು ವಿರೋಧಿಸಿ ಮರ್ಯಾದೆಗೇಡು ಹತ್ಯೆ ಮಾಡಲಾಗಿದೆ ಎಂದೂ ಗ್ರಾಮಸ್ಥರು ಅನುಮಾನ ವ್ಯಕ್ತಪಡಿಸಿದ್ದರು.

'ಬಾಲಕಿಯರ ಮೇಲೆ ಅತ್ಯಾಚಾರ ನಡೆದಿಲ್ಲ ಮತ್ತು ಕೊಲೆಯೂ ಆಗಿಲ್ಲ. ಇದು ಆತ್ಮಹತ್ಯೆ ಎಂದು ಮರಣೋತ್ತರ ಪರೀಕ್ಷೆಯು ದೃಢಪಡಿಸಿದೆ' ಎಂದು ಉನ್ನತ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಪ್ರಕರಣದ ವಿವರ: ಮೇ 12ರಂದು ಊರಿನಿಂದ ನಾಪತ್ತೆಯಾಗಿದ್ದ ಇಬ್ಬರು ಬಾಲಕಿಯರು ಮೇ 14ರಂದು ನೆರೆಯ ತಾಲ್ಲೂಕಿನ ಗ್ರಾಮದ ಬಳಿಯ ಬಾವಿಯೊಂದರಲ್ಲಿ ಶವವಾಗಿ ಪತ್ತೆಯಾಗಿದ್ದರು.

'ಐದಾರು ತಿಂಗಳಿಂದ ಬಾಲಕಿಯೊಬ್ಬಳ ಹಿಂದೆ ಬಿದ್ದಿದ್ದ ಆರೋಪಿಯೊಬ್ಬ ಪ್ರೀತಿಸುವಂತೆ ಪೀಡಿಸಿ ಕಿರುಕುಳ ನೀಡಿದ್ದ. ಮೇ 12ರಂದು ಆ ಬಾಲಕಿಯ ಜೊತೆ ಮತ್ತೊಬ್ಬ ಬಾಲಕಿ (ಹತ್ತಿರದ ಸಂಬಂಧಿ)ಯನ್ನು ಪುಸಲಾಯಿಸಿ, ಇಬ್ಬರನ್ನು ಕರೆದುಕೊಂಡು ಹೋಗಿ, ಅತ್ಯಾಚಾರ ಎಸಗಿ, ಕೊಲೆ ಮಾಡಿ ಬಾಲಕಿಯರ ಕೈಗಳನ್ನು ಕಟ್ಟಿ ಬಾವಿಗೆ ಎಸೆದಿದ್ದಾನೆ' ಎಂದು ಆರೋಪಿಸಿ ಬಸವನ ಬಾಗೇವಾಡಿ ಠಾಣೆಗೆ ಬಾಲಕಿಯರ ಪೋಷಕರು ದೂರು ನೀಡಿದ್ದರು.


9ನೇ ಪುಟ ನೋಡಿ

ಮೂತ್ರ ನೆಕ್ಕಿಸಿದ ಆರೋಪ: ಪಿಎಸ್‌ಐ ಅಮಾನತು- ಸಿಐಡಿಗೆ ತನಿಖೆ ಹೊಣೆ

ಚಿಕ್ಕಮಗಳೂರು: 'ವಿಚಾರಣೆ ನೆಪದಲ್ಲಿ ಠಾಣೆಗೆ ಕರೆದೊಯ್ದು ಮೂತ್ರ ನೆಕ್ಕಿಸಿದ್ದಾರೆ' ಎಂದು ಮೂಡಿಗೆರೆ ತಾಲ್ಲೂಕಿನ ಕಿರುಗುಂದ ಗ್ರಾಮದ ಪರಿಶಿಷ್ಟ ಜಾತಿಯ ಕೆ.ಎಲ್.ಪುನೀತ್ ದಾಖಲಿಸಿರುವ ದೂರಿಗೆ ಸಂಬಂಧಿಸಿ, ಗೋಣಿಬೀಡು ಠಾಣೆಯ ಪಿಎಸ್‌ಐ ಅರ್ಜುನ್ ಅವರನ್ನು ಅಮಾನತುಗೊಳಿಸಲಾಗಿದ್ದು, ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ.

'ಪಶ್ಚಿಮ ವಲಯ ಐಜಿಪಿ ಅವರು ಪಿಎಸ್‌ಐ ಅರ್ಜುನ್ ಅವರನ್ನು ಅಮಾನತುಗೊಳಿಸಿ, ಉಡುಪಿ ಜಿಲ್ಲೆಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಿದ್ದಾರೆ. ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಕ್ಷಯ್ ಎಂ.ಹಾಕೆ 'ಪ್ರಜಾವಾಣಿ'ಗೆ ತಿಳಿಸಿದರು. ಇಲಾಖಾ ತನಿಖೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಡಿವೈಎಸ್ಪಿ ಅವರಿಗೆ ವಹಿಸಲಾಗಿದೆ ಎಂದು ಅವರು ತಿಳಿಸಿದರು.

'ಎಲ್ಲಾ ಆರೋಪಿಗಳನ್ನು ಬಂಧಿಸಿ'



ಚಿತ್ರದುರ್ಗ: ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಗ್ರಾಮವೊಂದರ ಇಬ್ಬರು ಬಾಲಕಿಯರ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿದ ಕೃತ್ಯದಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಬಗ್ಗೆ ಅನುಮಾನಗಳಿವೆ. ಎಲ್ಲ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಒತ್ತಾಯಿಸಿದ್ದಾರೆ.

9ನೇ ಪುಟ ನೋಡಿ


ಚಿನಕುರಳಿ

ಪ್ರಕಾಶ್ ಶೆಟ್ಟಿ





ಅಲೋಪಥಿ ಔಷಧ: ಹೇಳಿಕೆ ಹಿಂಪಡೆದ ಬಾಬಾ ರಾಮ್‌ದೇವ್



ನವದೆಹಲಿ (ಪಿಟಿಐ): ಅಲೋಪಥಿ ಔಷಧಗಳ ಕುರಿತು ತಾವು ನೀಡಿದ್ದ ಹೇಳಿಕೆ ವಿವಾದಕ್ಕೀಡಾಗಿ, ಭಾರಿ ಆಕ್ಷೇಪ ವ್ಯಕ್ತವಾಗುತ್ತಿರುವಂತೆಯೇ, ಯೋಗ ಗುರು ಬಾಬಾ ರಾಮ್‌ದೇವ್ ಅವರು ತಮ್ಮ ಹೇಳಿಕೆಯನ್ನು ಹಿಂಪಡೆದಿದ್ದಾಗಿ ಭಾನುವಾರ ತಿಳಿಸಿದ್ದಾರೆ.

'ಈ ಕುರಿತು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರು ಬರೆದ ಪತ್ರ ತಲುಪಿದೆ. ನಾನು ವಿಷಾದ ವ್ಯಕ್ತಪಡಿಸುವ ಜೊತೆಗೆ, ಈ ವಿಷಯಕ್ಕೆ ಅಂತ್ಯ ಹಾಡಬೇಕು ಎಂದು ಮನವಿ ಮಾಡುತ್ತೇನೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ರಾಮ್‌ದೇವ್ ಅವರು, 'ಆಧುನಿಕ ವೈದ್ಯಕೀಯ ಪದ್ಧತಿಯನ್ನು 'ಅವಿವೇಕಿ ವಿಜ್ಞಾನ' ಎಂದು ಕರೆದಿದ್ದರು' ಎನ್ನಲಾದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿತ್ತು. ಅವರ ಈ ಹೇಳಿಕೆಯನ್ನು ಭಾರತೀಯ ವೈದ್ಯಕೀಯ ಸಂಸ್ಥೆ (ಐಎಂಎ) ಖಂಡಿಸಿತ್ತು.

ಅಲ್ಲದೇ, ದೆಹಲಿ ವೈದ್ಯಕೀಯ ಸಂಘವು (ಡಿಎಂಎ) ದೆಹಲಿಯ ದರಿಯಾಗಂಜ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿತ್ತು.

'ಬಿಜೆಪಿಯವರು ಬಾಯಿಗೆ ಬೀಗ ಹಾಕಿಕೊಳ್ಳಲಿ'

ಬೆಂಗಳೂರು: 'ಆರೋಗ್ಯ ಮತ್ತು ಇತರೆ ಇಲಾಖೆಗಳಿಗೆ ಸಂಬಂಧಿಸಿದಂತೆ ಹಳಿ ತಪ್ಪಿದ ಆಡಳಿತವನ್ನು ಸರಿದಾರಿಗೆ ತರುವ ಪ್ರಯತ್ನವನ್ನು ಬಿಜೆಪಿಯವರು ಮಾಡಲಿ. ಇಲ್ಲದಿದ್ದರೆ ತಮ್ಮ ಬಾಯಿಗೆ ಬೀಗ ಹಾಕಿಕೊಂಡು ಕುಳಿತುಕೊಳ್ಳಲಿ' ಎಂದು ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜೇಶ್ ದಾಸಪ್ಪನವರ್ ಟೀಕಿಸಿದ್ದಾರೆ.

'ಪ್ರಪಂಚವೇ ಕೊರೊನಾ ಸೋಂಕಿನಿಂದ ಬಳಲುತ್ತಿರುವ ಈ ತುರ್ತು ಪರಿಸ್ಥಿತಿಯಲ್ಲಿ ಬಿಜೆಪಿಯವರು ಧರ್ಮಾಂಧತೆ ಮತ್ತು ನಿರಂಕುಶ ಸ್ವಭಾವದ ಮಾನಸಿಕ ಸೋಂಕಿನಿಂದ ಬಳಲುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಮೊದಲು ಬಿಜೆಪಿಯವರಿಗೆ ಆದ್ಯತೆಯ ಮೇರೆಗೆ ಮಾನಸಿಕ ಸೋಂಕಿನ ಲಸಿಕೆ ನೀಡಬೇಕು' ಎಂದೂ ಹೇಳಿದ್ದಾರೆ.

ಶಿವನಹಳ್ಳಿ ಸರ್ವೆ ನಂಬರ್ 69ರಲ್ಲಿ ಅರಣ್ಯಕ್ಕಾಗಿ ಜಾಗ ನೀಡಲು ಕಂದಾಯ ಇಲಾಖೆ ಸಿದ್ಧತೆ

ಆನೆ ದಾರಿಗೆ ಸಾವಿರ ಎಕರೆ– ಇಂದಿನಿಂದ ಸರ್ವೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯ ಆನೆ ಕಾರಿಡಾರ್ ವಿಸ್ತರಿಸಿ ಮಾನವ–ವನ್ಯಜೀವಿ ಸಂಘರ್ಷಕ್ಕೆ ಇತಿಶ್ರೀ ಹಾಡುವ ಸಲುವಾಗಿ ಕಂದಾಯ ಇಲಾಖೆ 1 ಸಾವಿರ ಎಕರೆಯನ್ನು ಅರಣ್ಯ ಇಲಾಖೆಗೆ ಬಿಟ್ಟುಕೊಡಲು ಮುಂದಾಗಿದೆ.

ಆನೇಕಲ್ ತಾಲ್ಲೂಕಿನ ಶಿವನಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 69ರಲ್ಲಿ 1 ಸಾವಿರ ಎಕರೆಯನ್ನು ಆನೆ ಕಾರಿಡಾರ್ ಅಭಿವೃದ್ಧಿಗಾಗಿ ಬಿಟ್ಟುಕೊಡುವ ಬಗ್ಗೆ ಅರಣ್ಯ ಅಧಿಕಾರಿಗಳ ಜೊತೆ ಜಂಟಿ ಸರ್ವೆ ನಡೆಸುವಂತೆ ತಹಸೀಲ್ದಾರ್ ದಿನೇಶ್ ಅವರಿಗೆ ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಪತ್ರ ಬರೆದಿದ್ದಾರೆ.

'ಬನ್ನೇರುಘಟ್ಟ ಆಸುಪಾಸಿನ ಗ್ರಾಮಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷ ಕೊನೆಗಾಣಿಸಬೇಕಾದರೆ ಆನೆ ಕಾರಿಡಾರ್ ಬಲುಮುಖ್ಯ. ಶಿವನಹಳ್ಳಿಯಲ್ಲಿ ಸರ್ಕಾರಿ ಗೋಮಾಳ ಇದೆ. ಆನೆ ಕಾರಿಡಾರ್‌ಗಾಗಿ ಇದನ್ನು ಬಿಟ್ಟುಕೊಡುವಂತೆ ಅರಣ್ಯ ಇಲಾಖೆಯವರು ಪ್ರಸ್ತಾವನೆ ಸಲ್ಲಿಸಿದ್ದರು. ಇಲ್ಲಿ ಎಷ್ಟು ಜಾಗ ಲಭ್ಯ ಇದೆ, ಒತ್ತುವರಿಗಳೇನಾದರೂ ಇವೆಯೇ, ಸರ್ಕಾರ ಯಾರಿಗಾದರೂ ಜಮೀನು ಮಂಜೂರು ಮಾಡಿದೆಯೇ ಎಂಬುದನ್ನು ಪರಿಶೀಲಿಸಿ ನಂತರವಷ್ಟೇ ಹಸ್ತಾಂತರ ಪ್ರಕ್ರಿಯೆ ಕೈಗೊಳ್ಳಬಹುದು. ಈ ಸಲುವಾಗಿ ಅರಣ್ಯ ಇಲಾಖೆ ಜೊತೆ ಸೇರಿ ಸರ್ವೆ ನಂಬರ್ 69ರ ಜಾಗದ ಸಮಗ್ರ ಸರ್ವೆ ನಡೆಸುವಂತೆ ಆನೇಕಲ್ ತಹಸೀಲ್ದಾರ್‌ಗೆ ಸೂಚನೆ ನೀಡಿದ್ದೇನೆ' ಎಂದು ಜೆ.ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು

'ಸರ್ವೆ ನಂಬರ್ 69ರಲ್ಲಿ 16 ಹಳ್ಳಿಗಳು ಬರುತ್ತವೆ. ಇಲ್ಲಿ 1970ರಲ್ಲಿ ಅನೇಕರಿಗೆ ಜಮೀನು ಮಂಜೂರಾಗಿದ್ದು, ಜನವಸತಿ ಎಷ್ಟಿದೆ ಎಂದು ನೋಡಬೇಕಿದೆ. ಈ ಚಿತ್ರಣ ಸಿಕ್ಕಿದರೆ ಅವರ ಪುನರ್ವಸತಿಗೂ ಕ್ರಮಕೈಗೊಳ್ಳಲು ಅನುಕೂಲವಾಗಲಿದೆ. ಅವರಿಗೆ ಪರ್ಯಾಯ ಜಮೀನು ಅಥವಾ ನಗದು ಪರಿಹಾರ ನೀಡುವ ಬಗ್ಗೆ ನಿರ್ಣಯ ತಳೆಯಲು ಇಂತಹ ಮಾಹಿತಿ ಅಗತ್ಯವಿದೆ' ಎಂದು ಅವರು ವಿವರಿಸಿದರು.

'ಕಂದಾಯ ಭೂಮಿ ಒತ್ತುವರಿ ಮಾಡಿಕೊಂಡಿರುವ ದೂರುಗಳೂ ಇವೆ. ಒತ್ತುವರಿಗಳನ್ನು ತೆರವುಗೊಳಿಸುವಂತೆ ಸೂಚನೆ ನೀಡಿದ್ದೇನೆ. ಕೆಲವು ಜಮೀನುಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವ್ಯಾಜ್ಯಗಳಿವೆ. ಅವುಗಳ ಬಗ್ಗೆಯೂ ಮಾಹಿತಿ ಕಲೆ ಹಾಕುವಂತೆ ಹೇಳಿದ್ದೇನೆ' ಎಂದರು.

'1 ಸಾವಿರ ಎಕರೆಯಲ್ಲಿ ಬಹುತೇಕ ಕಡೆ ಕಾಡಿನ ವಾತಾವರಣವೇ ಇದೆ. ಹಾಗಾಗಿ ಸರ್ವೆಗೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಜೊತೆಗೆ ಕೋವಿಡ್ ನಿಯಂತ್ರಣ ಕಾರ್ಯದ ಬಗ್ಗೆಯೂ ಗಮನ ಹರಿಸಬೇಕಿದೆ. ನಾವು ಸೋಮವಾರದಿಂದಲೇ ಸಮಗ್ರ ಸರ್ವೆ ಕಾರ್ಯ ಆರಂಭಿಸಲಿದ್ದೇವೆ. ವರದಿ ಸಿದ್ಧಪಡಿಸಿ ಶೀಘ್ರವೇ ಸಲ್ಲಿಸಲಿದ್ದೇವೆ' ಎಂದು ತಹಸೀಲ್ದಾರ್ ದಿನೇಶ್ ಮಾಹಿತಿ ನೀಡಿದರು.

ಪ್ರಜಾವಾಣಿ ವಿಶೇಷ

ರಾಷ್ಟ್ರೀಯ ಉದ್ಯಾನ–ಅಗಲ ತೀರಾ ಕಿರಿದು

'ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಉತ್ತರದಿಂದ ದಕ್ಷಿಣದವರೆಗೆ 59 ಕಿ.ಮೀ ಉದ್ದಕ್ಕೆ ವ್ಯಾಪಿಸಿದೆ. ಆದರೆ, ಅಗಲ ಬಹಳ ಕಡಿಮೆ ಇದೆ. ಎಲ್ಲ ಕಡೆ ವಸತಿಗಳು ಬಂದಿವೆ. ಕೃಷಿ ಚಟುವಟಿಕೆ ಹೆಚ್ಚಿದೆ. ರಸ್ತೆಗಳು ನಿರ್ಮಾಣವಾಗಿವೆ. ಹಾಗಾಗಿ ಆನೆಗಳು ಅಡೆತಡೆ ಇಲ್ಲದೇ ಅಡ್ಡಾಡಲು ಅವಕಾಶ ಕಡಿಮೆ ಇದೆ. 1 ಸಾವಿರ ಎಕರೆಯನ್ನು ಆನೆ ಕಾರಿಡಾರ್‌ಗೆ ನೀಡುವುದು ಮಾನವ–ವನ್ಯಜೀವಿ ಸಂಘರ್ಷ ತಡೆಯುವಲ್ಲಿ ಮಹತ್ತರ ಪಾತ್ರ ವಹಿಸಲಿದೆ' ಎಂದು ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.



ಸಾಂದರ್ಭಿಕ ಚಿತ್ರ

'1 ಸಾವಿರ ಎಕರೆ ಪ್ರದೇಶದಲ್ಲಿ ಕಾಡನ್ನಾಗಿ ಉಳಿಸಿಕೊಳ್ಳಬಹುದಾದ ಜಾಗ ಬಹಳಷ್ಟಿದೆ. ಒತ್ತುವರಿ ಸಮಸ್ಯೆಯಿಂದಾಗಿ ಈ ಕಾಡಿನ ಪ್ರಮಾಣ ವರ್ಷದಿಂದ ವರ್ಷಕ್ಕೆ ಕುಸಿಯುತ್ತಲೇ ಇದೆ. ಈ ಜಾಗ ಡೀಮ್ಡ್ ಫಾರೆಸ್ಟ್ ಎಂದು ಅಧಿಕೃತವಾಗಿ ಗುರುತಿಸದ ಕಾರಣ ಒತ್ತುವರಿ ತಡೆಯಲು ಅರಣ್ಯ ಇಲಾಖೆಯವರಿಗೆ ಸಾಧ್ಯವಾಗುತ್ತಿಲ್ಲ. 1 ಸಾವಿರ ಎಕರೆಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿದರೆ ಅದನ್ನು ಕಾಡಿನ ರೂಪದಲ್ಲೇ ಕಾಪಾಡಬಹುದು' ಎಂದು ಅವರು ವಿವರಿಸಿದರು.

'ಹಸ್ತಕ್ಷೇಪ ಹೆಚ್ಚಿದಷ್ಟೂ ಸಂಘರ್ಷ ಹೆಚ್ಚು'

'ಆನೆಗಳು ಅಡ್ಡಾಡುವ ಹಾದಿಗೆ ನೂರಾರು ವರ್ಷಗಳ ನಂಟು ಇರುತ್ತದೆ. ನಿರ್ದಿಷ್ಟ ಋತುವಿನಲ್ಲಿ ಸಿಗುವ ಆಹಾರದ ಕಾರಣಕ್ಕೆ, ಸಂಗಾತಿಯ ಹುಡುಕಾಟ ಹೀಗೆ ನಾನಾ ಕಾರಣಗಳಿಗಾಗಿ ಆನೆಗಳು ಒಂದೆಡೆಯಿಂದ ಮತ್ತೊಂದೆಡೆ ಸಾಗುತ್ತವೆ' ಎನ್ನುತ್ತಾರೆ ವನ್ಯಜೀವಿ ಕಾರ್ಯಕರ್ತ ವಿಜಯ್ ನಿಶಾಂತ್.

'ರಾಷ್ಟ್ರೀಯ ಉದ್ಯಾನದ ಆಸುಪಾಸಿನ ಗ್ರಾಮಗಳಲ್ಲಿ ರೆಸಾರ್ಟ್‌ಗಳು ಅಕ್ರಮವಾಗಿ ತಲೆ ಎತ್ತುತ್ತಿವೆ. ಇದು ಈ ಪರಿಸರದಲ್ಲಿ ಜನರ ಹಾಗೂ ವಾಹನಗಳ ಓಡಾಟ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಆನೆಗಳ ಸಹಜ ಹಾದಿ ಛಿದ್ರಗೊಂಡು ಮಾನವ ಹಸ್ತಕ್ಷೇಪ ಹೆಚ್ಚಿದಷ್ಟೂ ಸಂಘರ್ಷ ಹೆಚ್ಚಲಿದೆ. ಇದನ್ನು ತಪ್ಪಿಸಬೇಕಿದೆ' ಎಂದರು.

ತುರ್ತಾಗಿ ಸರ್ವೆ ಕಾರ್ಯ ಪೂರ್ಣಗೊಳಿಸಿ ಆನೆ ಕಾರಿಡಾರ್‌ಗೆ ಆದಷ್ಟು ಬೇಗ ಜಾಗ ಬಿಟ್ಟುಕೊಡಬೇಕು

ವಿಜಯ ನಿಶಾಂತ್
ವನ್ಯಜೀವಿ ಕಾರ್ಯಕರ್ತ

ಆನೆಗಳ ಸಾವು

ರಾಗಿಹಳ್ಳಿ ಸಮೀಪ 2020ರ ಮಾರ್ಚ್‌ನಲ್ಲಿ ಆನೆ ಮರಿಯೊಂದು ತಾಯಿಯಿಂದ ಬೇರ್ಪಟ್ಟು ಅಲೆದಾಡುತ್ತಿತ್ತು. ಅದನ್ನು ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಣೆ ಮಾಡಿದ್ದರು. ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಆರೈಕೆ ಮಾಡಿದರೂ ಅದು ಉಳಿಯಲಿಲ್ಲ. ಒಂದೇ ವರ್ಷದಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಆಸುಪಾಸಿನ ಪ್ರದೇಶಗಳಲ್ಲಿ ಮೂರು ಆನೆಗಳು ಮಾನವ ಕೃತ್ಯದಿಂದಾಗಿ ಕೊನೆಯುಸಿರೆಳೆದಿವೆ.

3 ವರ್ಷಗಳಿಗೊಮ್ಮೆ ಸಮ್ಮೇಳನ ನಡೆಯಲಿ: ಡಾ.ಪಿ.ಎಸ್. ಶಂಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿ ಮೂರು ವರ್ಷಗಳಿಗೊಮ್ಮೆ ಕನ್ನಡ ವೈದ್ಯಕೀಯ ಸಾಹಿತ್ಯ ಸಮ್ಮೇಳನ ನಡೆಸಬೇಕು. ಪ್ರಾದೇಶಿಕ ಮಟ್ಟದಲ್ಲಿ ಪ್ರತಿವರ್ಷ ಕಮ್ಮಟಗಳನ್ನು ಆಯೋಜಿಸಬೇಕು' ಎಂದು ಕನ್ನಡ ವೈದ್ಯಕೀಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ.ಪಿ.ಎಸ್. ಶಂಕರ್ ಆಗ್ರಹಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ರಜತ ಮಹೋತ್ಸವ ಪ್ರಯುಕ್ತ ಆಯೋಜಿಸಿದ್ದ ಕನ್ನಡ ವೈದ್ಯಕೀಯ ಸಾಹಿತ್ಯ ಸಮ್ಮೇಳದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

'ವೈದ್ಯಕೀಯ ಸಾಹಿತ್ಯ ಹಾಗೂ ಪ್ರಕಟಣೆಗೆ ಕೂಡ ಹೆಚ್ಚಿನ ಆದ್ಯತೆ ನೀಡಬೇಕಿದೆ. ವೈದ್ಯ ಬರಹಗಾರರಿಗೆ ಸನ್ಮಾನ, ಉತ್ತಮ ಪುಸ್ತಕಕ್ಕೆ ಪ್ರೋತ್ಸಾಹ, ಪ್ರಸಾರಾಂಗದ ಮೂಲಕ ಪ್ರಕಟಣೆ, ಪುಸ್ತಕಗಳ ಪ್ರದರ್ಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯವು ಪ್ರತಿವರ್ಷ ಹಾಕಿಕೊಳ್ಳಬೇಕು' ಎಂದರು.

'ವೈದ್ಯರು ಪ್ರಾದೇಶಿಕ ಭಾಷಾ ಜ್ಞಾನ ಹೊಂದಿರಬೇಕು. ಚಾಮರಾಜನಗರದ ವೈದ್ಯ ಬೀದರ್‌ಗೆ ವರ್ಗಾವಣೆಯಾದಲ್ಲಿ ರೋಗಿಯ ಜತೆಗೆ ಪರಿಣಾಮಕಾರಿಯಾಗಿ ಸಂವಹನ ನಡೆಸಲು ಅಲ್ಲಿನ ಕನ್ನಡ ತಿಳಿದಿರಬೇಕಾಗುತ್ತದೆ. ಪುಸ್ತಕಗಳನ್ನು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಭಾಷಾಂತರ ಮಾಡುವ ಜತೆಗೆ ಕನ್ನಡದಲ್ಲಿಯೇ ಹೊಸ ಕೃತಿಗಳನ್ನು ಸೃಷ್ಟಿಸಬೇಕು. ಚಿಕಿತ್ಸೆ, ಆಹಾರ, ವ್ಯಾಯಾಮ ಸೇರಿದಂತೆ ದೈನಂದಿನ ಬದುಕಿಗೆ ಸಹಕಾರಿಯಾಗುವ ವಿವಿಧ ವಿಷಯಗಳ ಬಗ್ಗೆ ಹೆಚ್ಚಾಗಿ ಬರೆಯಬೇಕು. ವೈರಾಣು ರೋಗ, ಸುಟ್ಟಗಾಯ, ಹೃದಯ ಸಮಸ್ಯೆ, ಪೌಷ್ಟಿಕ ಆಹಾರ ಸೇರಿದಂತೆ ಕೆಲವೊಂದು ವಿಷಯಗಳನ್ನು ವಿದ್ಯಾರ್ಥಿಯ ವ್ಯಾಸಂಗದ ವಿವಿಧ ಹಂತದಲ್ಲಿ ಅಳವಡಿಸಬೇಕು' ಎಂದರು.

ಪತ್ರಿಕೆಗಳಲ್ಲಿ ಆದ್ಯತೆ: 'ವಿಶ್ವವಾಣಿ' ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, '50 ವರ್ಷಗಳ ಹಿಂದೆ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಸುದ್ದಿಗಳು ಕನ್ನಡ ಪತ್ರಿಕೆಗಳಲ್ಲಿ ಬರುತ್ತಿರಲಿಲ್ಲ. ಈಗ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ಶಸ್ತ್ರಚಿಕಿತ್ಸೆ, ವೈದ್ಯಕೀಯ ಕ್ಷೇತ್ರದ ಬೆಳವಣಿಗೆಗಳು ಮುಖಪುಟದಲ್ಲಿ ಬರುತ್ತಿವೆ' ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ಸಚ್ಚಿದಾನಂದ, 'ವೈದ್ಯಕೀಯ ಸಾಹಿತ್ಯ ಸಮ್ಮೇಳನಕ್ಕೆ ನಾನು ಬುನಾದಿ ಹಾಕಿಕೊಟ್ಟಿದ್ದೇನೆ. ಇದನ್ನು ನಡೆಸಿಕೊಂಡು ಹೋಗುವುದು ಮುಂದಿನ ಕುಲಪತಿಗಳ ಮೇಲೆ ಅವಲಂಬಿತವಾಗಿರುತ್ತದೆ. ವೈದ್ಯಕೀಯ ಲೇಖಕರಿಗೆ ಸನ್ಮಾನ, ಪುಸ್ತಕಗಳ ಪ್ರಕಟಣೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ವಿಶ್ವವಿದ್ಯಾಲಯ ಸಿದ್ಧವಿದೆ' ಎಂದರು.

ರೌಡಿ ನಾಗ್ ಸಹಚರರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ದರೋಡೆ ಸಂಚು ರೂಪಿಸಿದ್ದ ಆರೋಪದಡಿ ರೌಡಿ ನಾಗ್ ಗ್ಯಾಂಗ್‌ನಲ್ಲಿದ್ದ ನಾಲ್ವರು ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಜಾನ್ ವಿಲಿಯಂ ಅಲಿಯಾಸ್ ಅಪ್ಪು (29), ಶಶಿಧರ್ ಅಲಿಯಾಸ್ ಗುಂಡ (31), ಪಾರ್ತಿಬನ್ (33) ಹಾಗೂ ಮೈಕಲ್ ಅಲಿಯಾಸ್ ಜಾನ್ಸನ್ (23) ಬಂಧಿತರು. ಅವರಿಂದ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ವಿಲ್ಸನ್ ಗಾರ್ಡನ್ ಠಾಣೆಯ ರೌಡಿ ಪಟ್ಟಿಯಲ್ಲಿ ಹೆಸರಿರುವ ನಾಗ್‌ನ ಸಹಚರರಾದ ಆರೋಪಿಗಳು, ಶಾಂತಿನಗರದ ಬರ್ಲಿ ಸ್ಟ್ರೀಟ್ ರಸ್ತೆಯಲ್ಲಿರುವ ಸೆಮೆಟ್ರಿ ಬಳಿ ಶನಿವಾರ ನಿಂತಿದ್ದರು. ರಸ್ತೆಯಲ್ಲಿ ಒಂಟಿಯಾಗಿ ಬರುವ ಸಾರ್ವಜನಿಕರನ್ನು ಕಾಯುತ್ತ ಮಾರಕಾಸ್ತ್ರ ಹಿಡಿದುಕೊಂಡು ನಿಂತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದೂ ತಿಳಿಸಿದರು.



ಬಂಧಿತ ಆರೋಪಿಗಳು

'ಬಂಧಿತರಾದ ಜಾನ್ ವಿಲಿಯಂ ಹಾಗೂ ಮೈಕಲ್ ಹೆಸರು ಸಹ ವಿಲ್ಸನ್ ಗಾರ್ಡನ್ ಠಾಣೆಯ ರೌಡಿ ಪಟ್ಟಿಯಲ್ಲಿದೆ. ಶಶಿಧರ್ ವಿರುದ್ಧ ಅಶೋಕನಗರ ಠಾಣೆ ಹಾಗೂ ಪಾರ್ತಿಬನ್ ವಿರುದ್ಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ. ಎಲ್ಲರೂ ಒಟ್ಟಿಗೆ ಸೇರಿ ದರೋಡೆ ಮಾಡಲು ಸಂಚು ರೂಪಿಸಿದ್ದರು' ಎಂದೂ ಅಧಿಕಾರಿ ಹೇಳಿದರು.

ಕೊರೊನಾ ಸೋಂಕಿತರ ಸ್ನೇಹಿತನಿಗೆ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರಿಗೆ ಪೇಯಿಂಗ್ ಗೆಸ್ಟ್ ಕಟ್ಟಡ ಖಾಲಿ ಮಾಡುವಂತೆ ತಾಕೀತು ಮಾಡಿದ್ದ ಮಾಲೀಕನನ್ನು ಪ್ರಶ್ನಿಸಲು ಹೋದ ಸೋಂಕಿತರ ಸ್ನೇಹಿತನಿಗೆ ಚಾಕುವಿನಿಂದ ಇರಿಯಲಾಗಿದ್ದು, ಈ ಸಂಬಂಧ ಮೈಕೊ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


'ಹಲ್ಲೆ ಬಗ್ಗೆ ಜೆ.ಪಿ. ನಗರದ ಅತುಲ್ ದೂರು ನೀಡಿದ್ದಾರೆ. ಆರೋಪಿ ಸಿಜೊ ಜಾರ್ಜ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಮೂವರು, ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಉಳಿದುಕೊಂಡಿದ್ದರು. ಇತ್ತೀಚೆಗೆ ಅವರಿಗೆ ಕೊರೊನಾ ಸೋಂಕು ತಗುಲಿತ್ತು. ಅದು ಗೊತ್ತಾಗುತ್ತಿದ್ದಂತೆ ಕಟ್ಟಡದ ಮಾಲೀಕ, ಕೊಠಡಿ ಖಾಲಿ ಮಾಡುವಂತೆ ತಾಕೀತು ಮಾಡಿದ್ದ. ದಿಕ್ಕು ತೋಚದಂತಾದ ಮೂವರು, ಸ್ನೇಹಿತ ಅತುಲ್‌ಗೆ ಮಾಹಿತಿ ನೀಡಿದ್ದರು'

'ಸ್ಥಳಕ್ಕೆ ಬಂದಿದ್ದ ಅತುಲ್, ಸ್ನೇಹಿತ ಪರವಾಗಿ ಮಾತನಾಡಿದ್ದರು. ಇಂಥ ಸಂದರ್ಭದಲ್ಲಿ ಕಟ್ಟಡ ಖಾಲಿ ಮಾಡುವುದು ಹೇಗೆ ಎಂದು ಪ್ರಶ್ನಿಸಿದ್ದರು. ಅಷ್ಟಕ್ಕೆ ಮಾತಿಗೆ ಮಾತು ಬೆಳೆದು ಜಗಳ ಶುರುವಾಗಿತ್ತು. ಕಟ್ಟಡದ ಮಾಲೀಕರ ಸಂಬಂಧಿ ಸಿಜೊ ಜಾರ್ಜ್, ಅತುಲ್ ಅವರ ಹೊಟ್ಟೆಗೆ ಚಾಕುವಿನಿಂದ ಇರಿದಿದ್ದಾರೆ ಎನ್ನಲಾಗಿದೆ. ಆರೋಪಿಯನ್ನು ವಿಚಾರಣೆ ನಡೆಸಬೇಕಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ನಿಧನ ವಾರ್ತೆ

ಎಚ್.ಎನ್.ರಂಗೇಗೌಡ



ಹೆಸರಘಟ್ಟ: ಹನಿಯೂರು ಗ್ರಾಮದ ಕಾಂಗ್ರೆಸ್ ಮುಖಂಡ ಎಚ್.ಎನ್.ರಂಗೇಗೌಡ (77) ಅವರು ಕಪ್ಪು ಶಿಲೀಂಧ್ರ ಸೋಂಕಿನಿಂದ ಶನಿವಾರ ಮೃತಪಟ್ಟಿದ್ದಾರೆ. ಅವರಿಗೆ ಪತ್ನಿ ಮತ್ತು ಮೂವರು ಮಕ್ಕಳಿದ್ದಾರೆ.

ಹೆಸರಘಟ್ಟ ಗ್ರಾಮದ ರೈತ ಸೇವಾ ಸಹಕಾರ ಸಂಘದ ಉಪಾಧ್ಯಕ್ಷರಾಗಿ, ಕಿಸಾನ್ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾಗಿ ಅವರು ಸೇವೆ ಸಲ್ಲಿಸಿದ್ದರು.

ಮೂರು ದಿನಗಳ ಹಿಂದೆ ಉಸಿರಾಟದ ತೊಂದರೆಯಿಂದ ಆಸ್ಪತ್ರೆ ಸೇರಿದ್ದರು. ಕಪ್ಪು ಶಿಲೀಂಧ್ರ ಸೋಂಕು ಇರುವುದು ದೃಢಪಟ್ಟಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಮೃತರ ಅಂತ್ಯಕ್ರಿಯೆಯು ಶನಿವಾರ ಸಂಜೆ ಹನಿಯೂರು ಗ್ರಾಮದಲ್ಲಿ ನೆರವೇರಿತು.

'ಗಣ್ಯರ ಅಗಲಿಕೆ: ಸಾಂಸ್ಕೃತಿಕ ಲೋಕಕ್ಕೆ ಭರಿಸಲಾಗದ ನಷ್ಟ'

ಬೆಂಗಳೂರು: 'ಕೋವಿಡ್‌ನಿಂದಾಗಿ ಸಾವಿನ ಸಂಖ್ಯೆ ಹೆಚ್ಚುತ್ತಿದೆ. ಗಣ್ಯರ ಅಗಲಿಕೆಯಿಂದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಲೋಕ ಬಡವಾಗುತ್ತಿದೆ. ಆಪ್ತರನ್ನು ಕಳೆದುಕೊಂಡವರಿಗೆ ಅನಾಥ ಭಾವ ಕಾಡುತ್ತಿದೆ' ಎಂದು ವಿವಿಧ ಕ್ಷೇತ್ರಗಳ ಗಣ್ಯರು ವಿಷಾದ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘವು ಭಾನುವಾರ ಆನ್‌ಲೈನ್ ಮೂಲಕ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ನಿಘಂಟು ತಜ್ಞ ಜಿ. ವೆಂಕಟಸುಬ್ಬಯ್ಯ, ಚುಟುಕು ಸಾಹಿತಿ ಜರಗನಹಳ್ಳಿ ಶಿವಶಂಕರ್, ಹಿರಿಯ ಪತ್ರಕರ್ತ ಮಹದೇವ ಪ್ರಕಾಶ್, ಮೈಸೂರು ಧರ್ಮಕ್ಷೇತ್ರದ ಫಾದರ್ ಜೆ.ಬಿ. ಝೇವಿಯರ್, ಫ್ರಾನ್ಸಿಸ್ ಗುಂಟಪಲ್ಲಿ, ಪಿ.ಜೋನಾಸ್, ದೀಪಕ್ ರಾಯಪ್ಪ, ಕನ್ನಡ ಹೋರಾಟಗಾರ ಕೋ.ವೆಂ. ರಾಮಕೃಷ್ಣೇಗೌಡ, ಸಿ.ಮೋಸೆಸ್, ಎ.ಎಸ್.ಅಂತೋನಿಸ್ವಾಮಿ, ಮಾರ್ಟಿನ್ ಅಂತೋನಿ, ಬಿ.ಐಸಾಕ್, ಪ್ರವೀಣ್ ಹೃದಯರಾಜ್, ಕ್ಲೆಮೆಂಟ್ ಫ್ರಾಂಕ್ ಅಂತೋನಿ, ಜೇಮ್ಸ್ ಅಲೆಕ್ಸಾಂಡರ್ ಹಾಗೂ ರವಿ ಜೋಸೆಫ್ ಅವರಿಗೆ ನುಡಿನಮನ ಸಲ್ಲಿಸಲಾಯಿತು.

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, 'ವೆಂಕಟಸುಬ್ಬಯ್ಯನವರು ಸರಸ್ವತಿಯ ವರಪುತ್ರರು. ಶ್ರೇಷ್ಠ ಗುರುಪರಂಪರೆಯಲ್ಲಿ ಶಿಕ್ಷಣ ಪಡೆದ ಅವರು ಶ್ರೇಷ್ಠ ಗುರುವಾಗಿ ನಮ್ಮಂತಹವರ ಬದುಕಿಗೆ ಬೆಳಕಾದರು' ಎಂದು ಹೇಳಿದರು.

ಭೂವಿಜ್ಞಾನಿ ವೆಂಕಟಸ್ವಾಮಿ, ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್, ಮಹಾಧರ್ಮಾಧ್ಯಕ್ಷ ಪೀಟರ್ ಮಚಾಡೊ ಇದ್ದರು.

ಲಾಕ್‌ಡೌನ್; ಅನಗತ್ಯವಾಗಿ ಸುತ್ತಾಡುವವರ ವಿರುದ್ಧ ಪ್ರಕರಣ ದಾಖಲು

628 ಮಂದಿ ಬಂಧನ, 3,821 ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ನಗರದ ಪೊಲೀಸರು ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಿದ್ದಾರೆ. ಪ್ರತಿ ರಸ್ತೆಯಲ್ಲೂ ತಪಾಸಣೆ ಚುರುಕುಗೊಳಿಸಿದ್ದಾರೆ.

ತುರ್ತು ಸೇವೆಗಳನ್ನು ಹೊರತುಪಡಿಸಿ ಅನಗತ್ಯವಾಗಿ ಸುತ್ತಾಡುವವರನ್ನು ಪತ್ತೆ ಮಾಡುತ್ತಿರುವ ಪೊಲೀಸರು, ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳುತ್ತಿದ್ದಾರೆ.

ಮೆಜೆಸ್ಟಿಕ್, ಕೆ.ಆರ್.ವೃತ್ತ, ಕಾರ್ಪೊರೇಷನ್ ವೃತ್ತ, ಸ್ಯಾಟ್‌ಲೈಟ್ ಬಸ್ ನಿಲ್ದಾಣ, ನಾಯಂಡನಹಳ್ಳಿ, ಮಾಗಡಿ ರಸ್ತೆ, ಓಕಳಿಪುರ, ಯಶವಂತಪುರ, ಮಲ್ಲೇಶ್ವರ, ಮತ್ತೀಕೆರೆ, ಬಳ್ಳಾರಿ ರಸ್ತೆ ಹಾಗೂ ಸುತ್ತಮುತ್ತಲ ರಸ್ತೆಗಳಲ್ಲಿ ಪೊಲೀಸರು ಚೆಕ್‌ಪೋಸ್ಟ್‌ಗಳನ್ನು ತೆರೆದಿದ್ದಾರೆ. ಅಲ್ಲಿಯೇ ಪ್ರತಿಯೊಂದು ವಾಹನಗಳನ್ನು ತಡೆದು ಪರಿಶೀಲನೆ ನಡೆಸುತ್ತಿದ್ದಾರೆ.

ಶನಿವಾರ ನಗರದಲ್ಲಿ ಚುರುಕಿನ ತಪಾಸಣೆ ನಡೆಸಿದ್ದ ಪೊಲೀಸರು, ಲಾಕ್‌ಡೌನ್ ನಿಯಮ ಉಲ್ಲಂಘಿಸಿದ್ದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಶನಿವಾರ ಬೆಳಿಗ್ಗೆ 10 ಗಂಟೆಯಿಂದ ಭಾನುವಾರ ರಾತ್ರಿ 8 ಗಂಟೆಯವರೆಗೆ 628 ಮಂದಿಯನ್ನು ಬಂಧಿಸಿದ್ದಾರೆ. ಆ ಪೈಕಿ 160 ಮಂದಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. 467 ಮಂದಿಗೆ ನೋಟಿಸ್ ನೀಡಿದ್ದಾರೆ.

'ಕೆಲವರು ಅನಗತ್ಯವಾಗಿ ರಸ್ತೆಗೆ ಬರುತ್ತಿದ್ದಾರೆ. ಪೊಲೀಸರ ಜೊತೆಗೆ ಗಲಾಟೆ ಮಾಡಿ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಇಂಥವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಖರೀದಿಯೂ ಜೋರು: ನಗರದ ಕೆ.ಆರ್. ಮಾರುಕಟ್ಟೆ, ಯಶವಂತಪುರ, ರಾಜಾಜಿನಗರ, ವಿಜಯನಗರ, ಚಾಮರಾಜಪೇಟೆ, ಶಿವಾಜಿನಗರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಭಾನುವಾರ ಬೆಳಿಗ್ಗೆ ವ್ಯಾಪಾರವೂ ಜೋರಾಗಿತ್ತು.

ಬೆಳಿಗ್ಗೆ 6ರಿಂದ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಲಾಗಿತ್ತು. ಇದೇ ಸಮಯದಲ್ಲಿ ಮಾರುಕಟ್ಟೆಗೆ ಬಂದಿದ್ದ ಜನ, ವಸ್ತುಗಳನ್ನು ಖರೀದಿಸಿಕೊಂಡು ಹೋದರು. ಬೆಳಿಗ್ಗೆ 9.45ಕ್ಕೆ ಬಹುತೇಕ ಕಡೆ ಅಂಗಡಿಗಳನ್ನು ಬಂದ್ ಮಾಡಲಾಯಿತು. ಶಿವಾಜಿನಗರ, ಚಾಮರಾಜಪೇಟೆಯಲ್ಲಿ ವ್ಯಾಪಾರ ಮುಂದುವರಿದಿತ್ತು. ಪೊಲೀಸರು ಪ್ರತಿ ಅಂಗಡಿಗಳಿಗೂ ಹೋಗಿ ಬಾಗಿಲು ಮುಚ್ಚಿಸಿದರು. ಕೆಲವರ ವಿರುದ್ಧ ಪ್ರಕರಣ ದಾಖಲಿಸಿಕೊಂಡರು.

ವಾಹನಗಳ ಜಪ್ತಿ: ಶನಿವಾರ ಬೆಳಿಗ್ಗೆಯಿಂದ ಭಾನುವಾರ ರಾತ್ರಿ 8 ಗಂಟೆಯವರೆಗೆ 3,821 ವಾಹನಗಳನ್ನು ಜಪ್ತಿ ಮಾಡಲಾಗಿದೆ.

'3,270 ದ್ವಿಚಕ್ರ ವಾಹನ, 225 ಮೂರು ಚಕ್ರ ವಾಹನ ಹಾಗೂ 326 ನಾಲ್ಕು ಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ತುಮಕೂರು ರಸ್ತೆಯಲ್ಲಿ ಭಾನುವಾರ ಅನಗತ್ಯವಾಗಿ ಸುತ್ತಾಡುತ್ತಿದ್ದ ದ್ವಿಚಕ್ರ ವಾಹನ ಸವಾರರನ್ನು ತಡೆದ ಪೊಲೀಸರು, ಮಾಲೆ ಹಾಕಿ ಮಂಗಳಾರತಿ ಮಾಡಿದರು

ನಡೆದುಕೊಂಡು ಹೋದ ನವದಂಪತಿ

ನಗರದ ದೇವಸ್ಥಾನವೊಂದರಲ್ಲಿ ಭಾನುವಾರ ಮದುವೆ ಮಾಡಿಕೊಳ್ಳಲು ವಧು–ವರ ನಡೆದುಕೊಂಡೇ ಹೋದರು. ಮದುವೆ ಮುಗಿಸಿ ಕುಟುಂಬ ಸಮೇತರಾಗಿ ವಾಪಸು ನಡೆದುಕೊಂಡೇ ಮನೆ ಸೇರಿದರು.

ಮದುವೆ ಬಟ್ಟೆಯಲ್ಲಿ ಹಾರ ಹಾಕಿಕೊಂಡು ನೃಪತುಂಗ ರಸ್ತೆಯಲ್ಲಿ ಹೊರಟಿದ್ದ ನವದಂಪತಿಯನ್ನು ಪೊಲೀಸರು ಮಾತನಾಡಿಸಿದರು. ನಡೆದುಕೊಂಡು ಹೊರಟಿದ್ದ ಬಗ್ಗೆ ವಿಚಾರಿಸಿದರು.

'ಲಾಕ್‌ಡೌನ್‌ನಿಂದಾಗಿ ಹಲವು ಬಾರಿ ಮದುವೆ ಮುಂದೂಡಲಾಗಿತ್ತು. ಲಾಕ್‌ಡೌನ್ ಇದ್ದಿದ್ದೇ ಎಂದು ತಿಳಿದು ಕುಟುಂಬದವರೆಲ್ಲರೂ ಸೇರಿ ಇಂದು ಮದುವೆ ಮಾಡಿದರು. ಓಡಾಡಲು ಯಾವುದೇ ವಾಹನ ಸಿಗಲಿಲ್ಲ. ಹೀಗಾಗಿ, ನಡೆದುಕೊಂಡೇ ಮನೆಗೆ ಹೊರಟಿದ್ದೇವೆ' ಎಂದು ನವದಂಪತಿ ಹೇಳಿದರು.

ಮಾಲೆ ಹಾಕಿ ಆರತಿ ಎತ್ತಿದ ಪೊಲೀಸರು

ರಸ್ತೆಯಲ್ಲಿ ಅನಗತ್ಯವಾಗಿ ಸಂಚರಿಸುತ್ತಿದ್ದ ಜನರನ್ನು ತಡೆದ ಪೊಲೀಸರು, ಹೂವಿನ ಮಾಲೆ ಹಾಕಿ ಮಂಗಳಾರತಿ ಬೆಳಗಿದರು. ಮುಜುಗರಕ್ಕೀಡಾದ ಜನ, 'ಇನ್ನೊಮ್ಮೆ ರಸ್ತೆಗೆ ಬರುವುದಿಲ್ಲ' ಎಂದು ಹೇಳಿ ಕ್ಷಮೆಯಾಚಿಸಿದರು.

ತುಮಕೂರು ರಸ್ತೆಯಲ್ಲಿ ದ್ವಿಚಕ್ರ ವಾಹನ ತಡೆದ ಪೊಲೀಸರು, ಸವಾರರನ್ನು ಕೆಳಗೆ ಇಳಿಸಿ ಮಂಗಳಾರತಿ ಮಾಡಿದರು.

ಬಿಜೆಪಿಯ ಸುಳ್ಳಿನ ಸೌಧ ಕುಸಿದಿದೆ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: 'ಕೊರೊನಾ ಸಂಕಷ್ಟದ ಪರಿಸ್ಥಿತಿ ನಿಭಾಯಿಸಲು ಸೋತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರ, ಕಾಂಗ್ರೆಸ್ ಮೇಲೆ ಗೂಬೆ ಕೂರಿಸಿ, ಪಲಾಯನ ಮಾಡಲು ಹೊರಟಿವೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಹೇಳಿದರು.

ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಹಾಗೂ ಯುವ ಕಾಂಗ್ರೆಸ್ ಭಾನುವಾರ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಆಯೋಜಿಸಿದ್ದ ಉಚಿತ ಆಂಬುಲೆನ್ಸ್ ಸೇವೆಗೆ ಚಾಲನೆ ನೀಡಿ ಮಾತನಾಡಿದರು.

'ಕೊರೊನಾ ಹರಡಲು ಕಾಂಗ್ರೆಸ್ ಕಾರಣ ಎಂದು ಬಿಜೆಪಿ ನಾಯಕರು ಹಸಿ ಸುಳ್ಳಿನ ಸೋಂಕು ಹರಡಲು ಮುಂದಾಗಿದ್ದಾರೆ. ತಜ್ಞರ ಸಮಿತಿ ಎರಡನೇ ಅಲೆಯ ಮಾಹಿತಿಯನ್ನು ಸಾಕಷ್ಟು ಮುಂಚಿತವಾಗಿ ನೀಡಿದ್ದರೂ, ನಿರ್ಲಕ್ಷ್ಯ ವಹಿಸಿ, ಕುಂಭಮೇಳ, ಚುನಾವಣೆಯಲ್ಲಿ ಮುಳುಗಿದ್ದು ಜನತೆಗೆ ಅರಿವಾಗಿದೆ, ತಟ್ಟೆ-ಜಾಗಟೆ ಬಡಿಯುವಷ್ಟು ಜನ ಮೂರ್ಖರಾಗಿಲ್ಲ' ಎಂದರು.

ಶಾಸಕಿ ಸೌಮ್ಯರೆಡ್ಡಿ, 'ಬೊಮ್ಮನಹಳ್ಳಿ ಭಾಗದಲ್ಲಿ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರು ಹಸಿದವರಿಗೆ ಅನ್ನ ನೀಡುವ ಕಾಯಕವನ್ನು ತಿಂಗಳಿನಿಂದ ಮಾಡುತ್ತಿದ್ದಾರೆ. ನಿತ್ಯ ಎರಡು ಸಾವಿರ ಜನರಿಗೆ ಊಟ ನೀಡಲಾಗುತ್ತಿದೆ' ಎಂದರು.

ಬೊಮ್ಮನಹಳ್ಳಿ ವಲಯ ಯುವ ಕಾಂಗ್ರೆಸ್ ಅಧ್ಯಕ್ಷ ಅನಿಲ್ ರೆಡ್ಡಿ ಅವರು 'ಪ್ರತಿದಿನ ಇಲ್ಲಿನ ಸ್ಥಳೀಯ ಕಾಂಗ್ರೆಸ್ ಮುಖಂಡರ ಸಹಭಾಗಿತ್ವದಲ್ಲಿ ಸಾವಿರಾರು ಜನರಿಗೆ ಊಟದ ವ್ಯವಸ್ಥೆಯನ್ನು ಬೆಳಿಗ್ಗೆ ಹಾಗೂ ಸಂಜೆ ಸಮಯದಲ್ಲಿ ಮಾಡುತ್ತಿದ್ದೇವೆ, ಊಟದ ಅಗತ್ಯ ಇರುವವರು ಇದರ ಪ್ರಯೋಜನ ಪಡೆಯಬೇಕು' ಎಂದು ಹೇಳಿದರು.

ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಟಿ.ವಾಸುದೇವರೆಡ್ಡಿ, ದಕ್ಷಿಣ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸುನ ಮಿಲಾಂದ್ ಇದ್ದರು.



ಉಚಿತ ಆಂಬುಲೆನ್ಸ್ ಸೇವೆಯನ್ನು ರಾಮಲಿಂಗಾ ರೆಡ್ಡಿ ಉದ್ಘಾಟಿಸಿದರು. ಶಾಸಕಿ ಸೌಮ್ಯರೆಡ್ಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಾಸುದೇವರೆಡ್ಡಿ, ಯುವ ಕಾಂಗ್ರೆಸ್ ಅಧ್ಯಕ್ಷ ಅನಿಲ್ ರೆಡ್ಡಿ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಸುನ ಮಿಲಾಂದ್ ಇದ್ದಾರೆ

ಲಾಕ್‌ಡೌನ್: ಹಣ್ಣು, ತರಕಾರಿ ದರ ಏರುಪೇರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಹಾಗೂ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ ತರಕಾರಿ ಮತ್ತು ಹಣ್ಣಿನ ದರಗಳು ಏರುಪೇರಾಗಿವೆ. ಸೂಕ್ತ ಮಾರುಕಟ್ಟೆಗಳು ಇಲ್ಲದಿರುವುದರಿಂದ ವ್ಯಾಪಾರಿಗಳು ಮನಬಂದಂತೆ ದರಗಳನ್ನು ಏರಿಸಿದ್ದಾರೆ.

ಮೇ ಮೊದಲ ವಾರದಲ್ಲಿ ಲಾಕ್‌ಡೌನ್ ಜಾರಿಯಾದ ಪರಿಣಾಮ ಅಗತ್ಯ ಸೇವೆಯಡಿ ಹಣ್ಣು ಮತ್ತು ತರಕಾರಿ ಮಾರಾಟಕ್ಕೆ ಅವಕಾಶ ನೀಡಿತು. ಬಳಿಕ ಪರಿಷ್ಕೃತ ಮಾರ್ಗಸೂಚಿಯೊಂದಿಗೆ ತಳ್ಳುವ ಗಾಡಿಗಳಲ್ಲಿ ಸಂಜೆ 6 ಗಂಟೆಯವರೆಗೆ ಹಣ್ಣು ಮತ್ತು ತರಕಾರಿ ಮಾರಾಟಕ್ಕೆ ಅನುವು ಮಾಡಿಕೊಡಲಾಗಿದೆ.

ಕೊರೊನಾ ಭೀತಿಯಿಂದ ಗ್ರಾಹಕರು ಮನೆಯಿಂದ ಹೊರಬರಲು ಹಿಂದೇಟು ಹಾಕುತ್ತಿದ್ದಾರೆ. ಇದರಿಂದ ಕೆಲ ವ್ಯಾಪಾರಿಗಳು ಮನೆಗಳ ಸಮೀಪವೇ ತರಕಾರಿ–ಹಣ್ಣು ಮಾರಾಟ ಮಾಡುತ್ತಿದ್ದಾರೆ. ಗ್ರಾಹಕರು ಅವರು ನಿಗದಿ ಪಡಿಸಿದ ದರಕ್ಕೇ ಉತ್ಪನ್ನಗಳನ್ನು ಖರೀದಿಸುತ್ತಿದ್ದಾರೆ.

ಒಂದು ವಾರದಿಂದ ಸುರಿದ ಅಕಾಲಿಕ ಮಳೆಯ ಪರಿಣಾಮ ತರಕಾರಿ ಬೆಳೆಗಳು ಹಾನಿಗೊಂಡಿವೆ. ಇದರಿಂದ ಮಾರುಕಟ್ಟೆಗೆ ಬರುವ ಆವಕ ಪ್ರಮಾಣ ಕಡಿಮೆಯಾಗಿದೆ. ಹಾಗಾಗಿ, ಕೆಲ ತರಕಾರಿಗಳ ದರ ದಿಢೀರ್ ಏರಿಕೆಯಾಗಿದೆ.

ಹಣ್ಣುಗಳ ಸೇವನೆಯೂ ಹೆಚ್ಚಾಗಿರುವುದರಿಂದ ಹಣ್ಣಿಗೆ ಬೇಡಿಕೆ ಹೆಚ್ಚಾಗಿದೆ. ಹಾಗಾಗಿ, ದರಗಳೂ ಏರಿಕೆ ಕಂಡಿವೆ.

₹50ರ ಆಸುಪಾಸಿನಲ್ಲಿದ್ದ ಬೀನ್ಸ್ ದರ ಪ್ರತಿ ಕೆ.ಜಿ.ಗೆ ಈಗ ₹80ರವರೆಗೆ ಮಾರಾಟ ಆಗುತ್ತಿದೆ. ಬೆಳ್ಳುಳ್ಳಿ, ಕ್ಯಾರೆಟ್, ಬೆಂಡೆಕಾಯಿ ದರಗಳು ತುಸು ಏರಿವೆ. ಉಳಿದಂತೆ ಈರುಳ್ಳಿ, ಆಲೂಗಡ್ಡೆ, ಮೂಲಂಗಿ, ಬದನೆ, ಹೂಕೋಸು, ಎಲೆಕೋಸು, ಟೊಮೆಟೊ ದರಗಳು ಕಡಿಮೆ ಇವೆ.

'ಮಳೆಯಿಂದ ತರಕಾರಿ ಪೂರೈಕೆ ದಿಢೀರ್ ಕಡಿಮೆಯಾಗಿದೆ. ಇದರಿಂದ ಕೆಲವು ತರಕಾರಿ ಬೆಲೆಗಳು ಏರಿವೆ. ಬಹುತೇಕ ತರಕಾರಿ ದರಗಳು ಸ್ಥಿರವಾಗಿವೆ' ಎಂದು ತರಕಾರಿ ವ್ಯಾಪಾರಿ ವೆಂಕಟೇಶ್ ತಿಳಿಸಿದರು.

ಸೊಪ್ಪಿನ ದರಗಳು ಏರಿಕೆ: ಮೆಂತ್ಯೆ ಹಾಗೂ ಸಬ್ಬಕ್ಕಿ ದರಗಳು ಕಳೆದ ವಾರ ಪ್ರತಿ ಕಟ್ಟಿಗೆ ₹10ರಿಂದ ₹15ರಂತೆ ಇತ್ತು. ನಾಲ್ಕು ದಿನಗಳಿಂದ ದರ ಏರಿದ್ದು, ಈಗ ಪ್ರತಿ ಕಟ್ಟಿಗೆ ₹25ರಂತೆ ಮಾರಾಟ ಆಗುತ್ತಿದೆ. ದಂಟು ಹಾಗೂ ಪಾಲಕ್ ದರ ಕಡಿಮೆ ಇದೆ.



ಸಾಂದರ್ಭಿಕ ಚಿತ್ರ

ದರ ಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತರಕಾರಿ	ಸಗಟು ದರ	ಹಾಪ್‌ಕಾಮ್ಸ್ ದರ
ಬೀನ್ಸ್	80	62
ಬೆಳ್ಳುಳ್ಳಿ	60	154
ಕ್ಯಾರೆಟ್	40	45
ಬೆಂಡೆಕಾಯಿ	40	39
ಶುಂಠಿ	30	38
ಈರುಳ್ಳಿ	20	28
ಆಲೂಗಡ್ಡೆ	20	28
ಮೂಲಂಗಿ	20	32
ಬದನೆ	20	46
ಹೂಕೋಸು	15	30
ಎಲೆಕೋಸು	10	18
ಟೊಮೆಟೊ	10	12

ಹಣ್ಣುಗಳು	ಹಾಪ್‌ಕಾಮ್ಸ್ ದರ	ಚಿಲ್ಲರೆ ದರ
ಸೇಬು	180	160
ಮೂಸಂಬಿ	168	150
ಕಿತ್ತಳೆ	148	130
ದ್ರಾಕ್ಷಿ	144	120
ಮಾವು	88	100
ಸಪೋಟ	55	50
ಪಪ್ಪಾಯ	40	35
ಕಲ್ಲಂಗಡಿ	20	20

ಸೊಪ್ಪು	ಸಗಟು (ಕಟ್ಟಿಗೆ)	ಹಾಪ್‌ಕಾಮ್ಸ್ (ಕೆ.ಜಿ.ಗೆ)
ಮೆಂತ್ಯೆ	25	92
ಸಬ್ಬಕ್ಕಿ	25	82
ಕೊತ್ತಂಬರಿ	20	64
ದಂಟು	10	38
ಪಾಲಕ್	8	40

ಗೌರವಧನ ತಕ್ಷಣ ಬಿಡುಗಡೆ ಮಾಡಿ: ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ನಿರ್ವಹಣೆಯಲ್ಲಿ ಪ್ರಾಣದ ಹಂಗು ತೊರೆದು ಹೋರಾಡುತ್ತಿರುವ ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರ ಬಾಕಿ ಇರುವ ಗೌರವಧನವನ್ನು ತಕ್ಷಣ ಬಿಡುಗಡೆ ಮಾಡಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಆಶಾ ಕಾರ್ಯಕರ್ತೆಯರಿಗೆ ಮೂರು ತಿಂಗಳಿಂದ ಗೌರವಧನ ಬಂದಿಲ್ಲ. ಸಂಬಳವನ್ನೇ ನಂಬಿರುವ ಅವರ ಬದುಕು ದುಸ್ತರವಾಗಿದೆ. ಕೋವಿಡ್ ಮೊದಲ ಅಲೆಯಲ್ಲಿ ದುಡಿದ ಆಶಾ ಕಾರ್ಯಕರ್ತೆಯರಿಗೆ ಗೌರವ ಧನದ ಜೊತೆಗೆ ತಲಾ ₹ 3 ಸಾವಿರ ಪ್ರೋತ್ಸಾಹಧನ ನೀಡುವುದಾಗಿ ಘೋಷಿಸಿದ್ದ ಸರ್ಕಾರ, ಶೇ 50ರಷ್ಟು ಮಂದಿಗೆ ಕೊಟ್ಟು ಉಳಿದವರಿಗೆ ವಂಚಿಸಿದೆ' ಎಂದಿದ್ದಾರೆ.

'ಕೋವಿಡ್ ನಿಯಂತ್ರಣಕ್ಕಾಗಿ ಶ್ರಮಿಸಿದ 16 ಮಂದಿ ಆಶಾ ಕಾರ್ಯಕರ್ತೆಯರು ಈವರೆಗೆ ಸಾವನ್ನಪ್ಪಿದ್ದಾರೆ. ಸಾವಿರಕ್ಕೂ ಅಧಿಕ ಮಂದಿ ಕೊರೊನಾ ಸೋಂಕಿತರಾಗಿದ್ದಾರೆ. ಮಾಸಿಕ ಗೌರವಧನ ಕೊಡುವಲ್ಲಿ ಸೋತಿರುವ ಸರ್ಕಾರ, ಆಶಾ ಕಾರ್ಯಕರ್ತೆಯರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ' ಎಂದು ಆರೋಪಿಸಿದ್ದಾರೆ.



ಎಚ್‌.ಡಿ. ಕುಮಾರಸ್ವಾಮಿ

'ದುಡಿದವರಿಗೆ ಗೌರವಧನ ಕೊಡಲು ಮೀನಾಮೇಷ ಎಣಿಸುತ್ತಿರುವ ಸರ್ಕಾರ ₹ 1,250 ಕೋಟಿ ರೂಗಳ ಪ್ಯಾಕೇಜ್ ಅನುಷ್ಠಾನಗೊಳಿಸುತ್ತದೆ ಎಂಬುದು ಭ್ರಮೆ ಅಲ್ಲದೆ ಮತ್ತೇನು' ಎಂದೂ ಅವರು ಪ್ರಶ್ನಿಸಿದ್ದಾರೆ.

'ಕೊರೊನಾ ವಾರಿಯರ್ಸ್ ಎಂದು ಹಣೆಪಟ್ಟಿ ಹಚ್ಚಿದ ಸರ್ಕಾರ ಒಬ್ಬ ಆಶಾ ಕಾರ್ಯಕರ್ತೆಗೆ ಮಾತ್ರ ₹ 50 ಲಕ್ಷ ಪರಿಹಾರ ನೀಡಿದೆ. ಉಳಿದವರಿಗೆ ಪರಿಹಾರ ಕೊಟ್ಟಿಲ್ಲ. ಸರ್ಕಾರದ ಇಂಥ ಬೇಜವಾಬ್ದಾರಿಗಳಿಂದ ಬೇಸತ್ತು ಆಶಾ ಕಾರ್ಯಕರ್ತೆಯರು ದೂರ ಉಳಿದರೆ ಕೋವಿಡ್ ನಿಯಂತ್ರಣ ಕೈಮೀರುತ್ತದೆ. ಸರ್ಕಾರಕ್ಕೆ ಇದು ಎಚ್ಚರಿಕೆಯ ಗಂಟೆಯಾಗಿದೆ' ಎಂದಿದ್ದಾರೆ.

ಎಚ್ಚೆತ್ತ ಸರ್ಕಾರ: 'ಕಪ್ಪು ಶಿಲೀಂಧ್ರದ ಚಿಕಿತ್ಸೆಗೆ ಔಷಧ ಪೂರೈಕೆಯಲ್ಲಿನ ಕೇಂದ್ರದ ತಾರತಮ್ಯ, ಔಷಧ ಸಂಗ್ರಹಿಸಲು ತೆಲಂಗಾಣ ಕೈಗೊಂಡ ಕ್ರಮಗಳ ಕುರಿತು ಇದೇ 22ರಂದು ಟ್ವೀಟ್ ಮಾಡಿದ್ದೆ. ಅದರ ಮರುದಿನವೇ ಔಷಧ ಪೂರೈಕೆಗೆ ಕಂಪನಿಗಳಿಂದ ದರ ಪಟ್ಟಿ ಆಹ್ವಾನಿಸಿದ್ದು, ತಡವಾಗಿ ಯಾದರೂ ಎಚ್ಚೆತ್ತುಕೊಂಡಿದೆ' ಎಂದೂ ಅವರು ಹೇಳಿದ್ದಾರೆ.

ಅಗತ್ಯ ಸೇವೆಗಳ ಸರಕು ಸಾಗಣೆ ವಾಹನ ಸಂಚಾರಕ್ಕೆ ಮಾತ್ರ ಅವಕಾಶ

ಬೆಂಗಳೂರು: ಕೋವಿಡ್ ನಿಯಂತ್ರಿಸಲು ರಾಜ್ಯದಲ್ಲಿ ಹೇರಲಾಗಿರುವ ಲಾಕ್‌ಡೌನ್ ಅವಧಿಯನ್ನು ಜೂನ್ 7ರವರೆಗೆ ಸರ್ಕಾರ ವಿಸ್ತರಿಸಿದ್ದು, ಈ ಅವಧಿಯಲ್ಲಿ ಈಗಾಗಲೇ (ಮೇ 7) ಹೊರಡಿಸಿರುವ ಮಾರ್ಗಸೂಚಿಯಂತೆ ಅಗತ್ಯ ಸೇವೆಗಳನ್ನು ಒದಗಿಸುವ ಸರಕು ಸಾಗಣೆ ವಾಹನಗಳ ಅಂತರ್ ಜಿಲ್ಲಾ ಓಡಾಟಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿದೆ.

ಸಾರ್ವಜನಿಕ ವಾಹನಗಳ ಓಡಾಟಕ್ಕೆ ನಿರ್ಬಂಧ ವಿಧಿಸಲಾಗಿದೆ. ಆದರೆ, ಅಗತ್ಯ ಸೇವೆ ನೀಡುವ ಉದ್ದೇಶದಿಂದ ಓಡಾಡುವ ವಾಹನಗಳು ಮತ್ತು ಸಿಬ್ಬಂದಿಯ ವಾಹನಗಳ ಸಂಚಾರಕ್ಕೆ ಈಗಾಗಲೇ ಅನುಮತಿ ನೀಡಲಾಗಿದ್ದು, ಆ ನಿಯಮ ಮುಂದುವರಿಯಲಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

ಕೋವಿಡ್ ನಿಯಂತ್ರಿಸುವ ವಿಚಾರದಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ವಿಡಿಯೊ ಸಂವಾದದಲ್ಲಿ ಸಲಹೆ ನೀಡಿದ್ದಾರೆ. ಅದರಂತೆ ಜಿಲ್ಲಾಧಿಕಾರಿಗಳಿಗೆ ಪರಮಾಧಿಕಾರ ನೀಡಲಾಗಿದೆ. ಹೀಗಾಗಿ, ರಾಜ್ಯ ಸರ್ಕಾರದ ಲಾಕ್‌ಡೌನ್ ಮಾರ್ಗಸೂಚಿಯಲ್ಲಿ ಪ್ರತಿ ದಿನ ಬೆಳಿಗ್ಗೆ 6 ಗಂಟೆಯಿಂದ 10 ಗಂಟೆಯವರೆಗೆ ಮಾತ್ರ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಿದ್ದರೂ ಅದನ್ನು ಬದಲಿಸಲು ಅವಕಾಶವಿದೆ ಎಂದು ಮೂಲಗಳು ಹೇಳಿವೆ.

ಲಾಕ್‌ಡೌನ್ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮೇ 7ರಂದು ಹೊರಡಿಸಿರುವ ಮಾರ್ಗಸೂಚಿಯಲ್ಲಿರುವ ಅಂಶಗಳನ್ನು ಮೀರಿಯೂ, ಜಿಲ್ಲೆಯ ಪರಿಸ್ಥಿತಿಗೆ ಅನುಗುಣವಾಗಿ ಪ್ರತ್ಯೇಕವಾದ ಮಾರ್ಗಸೂಚಿಯನ್ನು ಹೊರಡಿಸಲು ಜಿಲ್ಲಾಧಿಕಾರಿಗಳಿಗೆ ಅವಕಾಶ ನೀಡಲಾಗಿದೆ. ಹೀಗಾಗಿ, ಕೆಲವು ಜಿಲ್ಲೆಗಳಲ್ಲಿ ಸಂಪೂರ್ಣ 5 ದಿನ ಲಾಕ್‌ಡೌನ್ ಹೇರಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ ಎಂದೂ ತಿಳಿಸಿವೆ.

'ಕೋವಿಡ್‌ನಿಂದ ಉಸಿರುಗಟ್ಟಿಸುವ ವಾತಾವರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಂಕಷ್ಟ ಕಾಲದಲ್ಲಿ ದೇಶದೊಂದಿಗೆ ಕೈಜೋಡಿಸಿ ಕೆಲಸ ಮಾಡುವ ಬದಲು ಟೂಲ್ ಕಿಟ್ ಮೂಲಕ ಸರ್ಕಾರ ಪ್ರತಿ ನಡೆಯನ್ನೂ ವಿರೋಧಿಸುವ ಕೆಲಸವನ್ನು ಪ್ರತಿಪಕ್ಷ ಮಾಡುತ್ತಿದೆ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಕಾಂಗ್ರೆಸ್ ವಿರುದ್ಧ ಹರಿಹಾಯ್ದಿದ್ದಾರೆ.

ಕರ್ನಾಟಕ ಪ್ರಜ್ಞಾ ಪ್ರವಾಹ ಏರ್ಪಡಿಸಿದ್ದ ವರ್ಚುವಲ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

'ನಮ್ಮ ಮಕ್ಕಳ ಲಸಿಕೆಯನ್ನು ವಿದೇಶಗಳಿಗೆ ಏಕೆ ಕೊಟ್ಟರಿ ಎಂದು ಕೆಲವರು ಪ್ರಶ್ನಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಲಸಿಕೆಗೆ ₹32 ಸಾವಿರ ಕೋಟಿ ಮೀಸಲಿಟ್ಟಾಗ, ವಕೀಲ ಪ್ರಶಾಂತ್ ಭೂಷಣ್ ಅವರು ಇಷ್ಟು ಹಣ ಲಸಿಕೆಗೆ ಏಕೆ ಇಟ್ಟಿದ್ದೀರಿ? ಲಸಿಕೆಯ ಅಗತ್ಯವಿಲ್ಲ, ಆ ಹಣವನ್ನು ಕಾರ್ಮಿಕರಿಗೆ ಹಂಚಿಬಿಡಿ ಎಂದು ಹೇಳಿದ್ದರು'.

'ಲಸಿಕೆ ವಿಷಯದಲ್ಲಿ ರಾಜ್ಯಗಳಿಗೆ ಸ್ವಾತಂತ್ರ್ಯ ನೀಡಬೇಕು ಎಂದು ಕೆಲವರು ವಾದಿಸಿದರು. ಸ್ವಾತಂತ್ರ್ಯ ನೀಡಿದಾಗ ಹೊಣೆ ನಿಭಾಯಿಸದೇ ಕೈಚೆಲ್ಲಿ ಕುಳಿತರು. ಪ್ರಧಾನಿ ಮೋದಿಯವರಿಗೆ ಸಿಗುತ್ತಿರುವ ಬೆಂಬಲದ ಕಾರಣ ಕೆಲವರು ಪಿಎಂ ಕೇರ್ಸ್ ಫಂಡ್ ಬಗ್ಗೆ ಅಸೂಯೆಯಿಂದ ಮಾತನಾಡುತ್ತಿದ್ದಾರೆ' ಎಂದರು.

'ಕೋವಿಡ್‌ನಿಂದ ದೇಶದಲ್ಲಿ ಉಸಿರುಗಟ್ಟಿಸುವ ವಾತಾವರಣವಿದೆ. ಎಲ್ಲೂ ಹೋಗಲು ಆಗುತ್ತಿಲ್ಲ, ಬೇಕಾದಂತೆ ನಡೆದುಕೊಳ್ಳಲು ಆಗುತ್ತಿಲ್ಲ. ಸಣ್ಣ ವ್ಯಾಪಾರಿಗಳ ಮೇಲೆ ದೊಡ್ಡ ಪರಿಣಾಮ ಬೀರಿದೆ' ಎಂದು ಸಂತೋಷ್ ಹೇಳಿದರು.

ಅಂತರರಾಜ್ಯ ಸಾರಿಗೆ ನಿರ್ಬಂಧ ಪರಿಣಾಮ

ಕುಸಿದ ಬೆಲೆ: ನಷ್ಟದಲ್ಲಿ ಟೊಮೆಟೊ ಬೆಳೆಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್‌ನಿಂದಾಗಿ ಮುಚ್ಚಿರುವ ಹೋಟೆಲ್‌ಗಳು, ನಿರ್ಬಂಧಿತ ಕಾರ್ಯಕ್ರಮಗಳು ಹಾಗೂ ಅಂತರರಾಜ್ಯ ಸಾರಿಗೆಗೆ ನಿರ್ಬಂಧ ಇರುವ ಪರಿಣಾಮ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಭಾಗದ ಟೊಮೆಟೊ ಬೆಳೆಗಾರರು ನಷ್ಟದ ಕೂಪಕ್ಕೆ ಸಿಲುಕಿದ್ದಾರೆ.

ಟೊಮೆಟೊ ಉತ್ಪಾದನೆ ಜಾಸ್ತಿಯಾಗಿರುವ ಪರಿಣಾಮ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದ ಟೊಮೆಟೊ ಆವಕವಾಗಿದೆ. ಇದರಿಂದ ಬೇಡಿಕೆ ತುಸು ಕಡಿಮೆಯೂ ಆಗಿದೆ. ಕೊರೊನಾ ಕರಿನೆರಳಿನಿಂದಾಗಿ ಈ ವರ್ಷವೂ ನಷ್ಟ ಖಚಿತ ಎಂದು ಟೊಮೆಟೊ ಬೆಳೆಗಾರರು ಅಳಲು ತೋಡಿಕೊಳ್ಳುತ್ತಾರೆ.

'ಬೆಳೆದ ಶೇ 30ಕ್ಕೂ ಹೆಚ್ಚು ಪ್ರಮಾಣದ ಟೊಮೊಟೊ ಎರಡು ತಿಂಗಳಿನಿಂದ ಮಾರಾಟವಾಗಿಲ್ಲ. ಕೋಲಾರದ ಸಿಎಂಆರ್ ಮಂಡಿಯಲ್ಲಿ ಟೊಮೊಟೊ ಹರಾಜು ಕರೆಯದೇ ಇರುವುದರಿಂದ ವಾರಾಂತ್ಯದಲ್ಲಿ ಕನಿಷ್ಠ 10 ಸಾವಿರ ಬಾಕ್ಸ್‌ನಷ್ಟು ಟೊಮೆಟೊ ವ್ಯರ್ಥವಾಗುತ್ತಿದೆ' ಎನ್ನುವುದು ಟೊಮೊಟೊ ಬೆಳೆಗಾರ ನೋವಿನ ಮಾತು.

ಬೆಳೆಗೆ ಹಾಕಿದ ಬಂಡವಾಳ ಹಾಗೂ ಕೆಲಸದವರಿಗೆ ಕೂಲಿಯ ಹಣವೂ ಸಿಗದೇ ಇರುವುದರಿಂದ ಬೆಲೆಯಿಲ್ಲದ ಟೊಮೆಟೊಗಳನ್ನು ಗಿಡದಲ್ಲೇ ಬಿಟ್ಟುಬಿಡಲು ಈ ಭಾಗದ ರೈತರು ನಿರ್ಧರಿಸಿದ್ದಾರೆ.

'ಆರು ಎಕರೆ ಪ್ರದೇಶದಲ್ಲಿ ಟೊಮೊಟೊ ಬೆಳೆಯಲು ₹8 ಲಕ್ಷದವರೆಗೆ ಖರ್ಚಾಗಿದೆ. ಖಾಸಗಿ ಮಂಡಿಗಳಲ್ಲಿ 15 ಕೆ.ಜಿಗೆ ಗರಿಷ್ಠ ₹50 ನೀಡುತ್ತಿದ್ದಾರೆ. ಇದರಿಂದ ಎರಡು ಎಕರೆಯಷ್ಟು ಟೊಮೆಟೊ ತೋಟದಲ್ಲೇ ಉಳಿದಿದೆ' ಎಂದು ಕೋಲಾರದ ರೈತ ಪೆದ್ದೂರು ಜನಾರ್ದನ ಗೌಡ ತಿಳಿಸಿದರು.

'ಕೋಲಾರ ಎಪಿಎಂಸಿಗೆ ಕೋಲಾರ ಹಾಗೂ ಅಕ್ಕಪಕ್ಕದ ಜಿಲ್ಲೆಗಳಿಂದ ಪ್ರತಿದಿನ 13ರಿಂದ 10 ಸಾವಿರ ಕ್ವಿಂಟಲ್ ಟೊಮೆಟೊ ಆವಕವಾಗುತ್ತಿದ್ದು, ಕಳೆದ ವರ್ಷಕ್ಕಿಂತ ಆವಕ ಪ್ರಮಾಣ ಹೆಚ್ಚಾಗಿದೆ' ಎಂದು ಪೆಎಂಸಿ ಕಾರ್ಯದರ್ಶಿ ಟಿ.ಎಸ್. ರವಿಕುಮಾರ್ ತಿಳಿಸಿದರು.

'ಸ್ಥಳೀಯವಾಗಿ ಟೊಮೆಟೊ ಬಳಕೆ ಕಡಿಮೆ. ಬೇರೆ ರಾಜ್ಯಗಳಲ್ಲಿ ಎಪಿಎಂಸಿಗಳನ್ನು ಮುಚ್ಚಿರುವುದರಿಂದ ವ್ಯಾಪಾರ ನೆಲಕಚ್ಚಿದೆ. ಚಿಲ್ಲರೆ ವ್ಯಾಪಾರದ ಮೇಲೂ ಪರಿಣಾಮ ಬೀರಿರುವುದರಿಂದ ಟೊಮೊಟೊ ದರ ಭಾರಿ ಇಳಿಮುಖ ಕಂಡಿದೆ' ಎಂದೂ ಹೇಳಿದರು.

'ಬೇರೆ ರಾಜ್ಯಗಳಲ್ಲಿ ಮುಂದಿನ ವಾರದಲ್ಲಿ ಟೊಮೆಟೊಗೆ ಬೇಡಿಕೆ ಹೆಚ್ಚಾಗುವ ನಿರೀಕ್ಷೆ ಇದೆ. ಸದ್ಯ 15 ಕೆ.ಜಿ ಟೊಮೊಟೊ ಬಾಕ್ಸ್ ₹60ರವರೆಗೆ ಮಾರಾಟವಾಗುತ್ತಿದ್ದು, ಜೂನ್ ವೇಳೆಗೆ ₹200ಕ್ಕೆ ಏರಿಕೆ ಕಾಣುವ ನಿರೀಕ್ಷೆಯಿದೆ' ಎಂದು ಮಾಹಿತಿ ನೀಡಿದರು.

'ರಾಜ್ಯದಾದ್ಯಂತ ಟೊಮೆಟೊ ಸೇರಿದಂತೆ ಹಲವು ತರಕಾರಿ ದರಗಳು ಕುಸಿದಿವೆ. ಲಾಕ್‌ಡೌನ್ ಜಾರಿಯಿಂದ ನೆರೆ ರಾಜ್ಯಗಳಿಗೂ ಪೂರೈಕೆಯಾಗುತ್ತಿಲ್ಲ. ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರ ಕನಿಷ್ಠ ಬೆಂಬಲ ಬೆಲೆ ನಿಗದಿ ಪಡಿಸಬೇಕು' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹಿಸಿದರು.



ಕೋಲಾರದ ಎಪಿಎಂಸಿ ಮಾರುಕಟ್ಟೆ (ಸಾಂದರ್ಭಿಕ ಚಿತ್ರ)

ಸೈಬರ್ ವಂಚನೆಗೆ 'ಕೋವಿಡ್' ಬಂಡವಾಳ!

• ಸಂತೋಷ ಜಿಗಳಿಕೊಪ್ಪ



ಬೆಂಗಳೂರು: ಕೊರೊನಾ ಸೋಂಕಿನ ಎರಡನೇ ಅಲೆ ನಿತ್ಯವೂ ಸಾವು–ನೋವುಗಳ ಸುದ್ದಿಯನ್ನೇ ನೀಡುತ್ತಿದೆ. ಒಂದೆಡೆ ಜನರು ಜೀವ ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದರೆ, ಇದರ ನಡುವೆಯೇ ಸೈಬರ್ ವಂಚಕರು, 'ಕೋವಿಡ್'ನಿಂದ ಎದುರಾದ ಅಸಹಾಯಕತೆಯನ್ನೇ ವಂಚನೆಗೆ ಬಂಡವಾಳವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ.

'ಜೀವ ಉಳಿದರೆ ಸಾಕಪ್ಪಾ' ಎಂದು ಹಂಬಲಿಸುವ ಸಾವಿರಾರು ಮಂದಿ, ತಮಗೆ ಅರಿವಿಲ್ಲದಂತೆ ಸೈಬರ್ ವಂಚಕರ ಜಾಲದಲ್ಲಿ ಸಿಲುಕಿ ಹಣ ಕಳೆದುಕೊಳ್ಳುತ್ತಿದ್ದಾರೆ. ಆಮ್ಲಜನಕ, ಲಸಿಕೆ, ಆಸ್ಪತ್ರೆಗಳಲ್ಲಿ ಹಾಸಿಗೆ, ವೈದ್ಯರ ಸಂಪರ್ಕ, ರೆಮ್‌ಡಿಸಿವಿರ್ ಚುಚ್ಚುಮದ್ದು, ಔಷಧಿಗಳ ಮಾರಾಟದ ಹೆಸರಿನಲ್ಲಿ ಜನರನ್ನು ಸಂಪರ್ಕಿಸುವ ವಂಚಕರು, ವೈಯಕ್ತಿಕ ಹಾಗೂ ಬ್ಯಾಂಕ್ ಖಾತೆಗಳ ವಿವರ ಪಡೆದು ಹಣ ದೋಚುತ್ತಿದ್ದಾರೆ.

ಒನ್ ಟೈಂ ಪಾಸ್‌ವರ್ಡ್ (ಒಟಿಪಿ), ಫೇಸ್‌ಬುಕ್ ನಕಲಿ ಖಾತೆ, ಮೊಬೈಲ್ ಸೇವಾ ಕಂಪನಿಗಳ ಪ್ರತಿನಿಧಿಗಳ ಸೋಗು, ಒಎಲ್‌ಎಕ್ಸ್, ಮನೆ ಬಾಡಿಗೆ, ಆನ್‌ಲೈನ್ ಬ್ಯಾಂಕಿಂಗ್ ಮುಂತಾದ ನಾನಾ ಸೋಗುಗಳನ್ನು ಧರಿಸಿ ಮುಗ್ಧ ಜನರನ್ನು ವಂಚಿಸುತ್ತಿದ್ದ ಪ್ರಕರಣಗಳು ಇದುವರೆಗೂ ವರದಿಯಾಗುತ್ತಿದ್ದವು. ಆದರೆ, ಈಗ 'ಕೋವಿಡ್' ಹೆಸರಿನಲ್ಲಿ ನಡೆಯುತ್ತಿರುವ ವಂಚನೆ ಬಗ್ಗೆಯೇ ನಿತ್ಯವೂ ಹತ್ತಾರು ಪ್ರಕರಣಗಳು ದಾಖಲಾಗುತ್ತಿವೆ.

ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ ಜಾಹೀರಾತು ಹಾಗೂ ಮೊಬೈಲ್‌ಗೆ ಬರುವ ಸಂದೇಶಗಳನ್ನು ನಂಬುತ್ತಿರುವ ಜನ, ಅವುಗಳನ್ನು ಪರಿಶೀಲಿಸದೇ ಬೇರೆಯವರಿಗೆ ಕಳುಹಿಸುತ್ತಿದ್ದಾರೆ. ಸ್ನೇಹಿತರು ಹಾಗೂ ಪರಿಚಯಸ್ಥರು ಕಳುಹಿಸಿದರೆಂಬ ಕಾರಣಕ್ಕೆ ಅಂಥ ಸಂದೇಶಗಳನ್ನು ನಂಬುವವರ ಸಂಖ್ಯೆಯೂ ಅಧಿಕವಾಗಿದೆ.

ಜಾಹೀರಾತು ಹಾಗೂ ಸಂದೇಶದಲ್ಲಿರುವ ಮೊಬೈಲ್ ನಂಬರ್‌ಗೆ ಕರೆ ಮಾಡುತ್ತಿರುವ ಜನ, ತಮಗೆ ಬೇಕಾದ ಸೌಲಭ್ಯಗಳ ಬಗ್ಗೆ ವ್ಯವಹಾರ ಮಾಡುತ್ತಿದ್ದಾರೆ. ಕರೆ ಮಾಡುವವರ ಜೊತೆ ನಯವಾಗಿ ಮಾತನಾಡುವ ವಂಚಕರು, ಸೋಂಕಿತರು ಹಾಗೂ ಅವರ ಸಂಬಂಧಿಕರ ದಾಖಲೆಗಳನ್ನು ಪಡೆಯುತ್ತಿದ್ದಾರೆ. ಸೌಲಭ್ಯ ಒದಗಿಸಲು ಮುಂಗಡವಾಗಿ ಹಣ ನೀಡಬೇಕು ಹಾಗೂ ಕೆಲ ಶುಲ್ಕ ಪಾವತಿಸಬೇಕೆಂದು ಹೇಳಿ ಬ್ಯಾಂಕ್ ಖಾತೆಗಳಿಗೆ ಹಣ ಹಾಕಿಸಿಕೊಂಡು ನಾಪತ್ತೆಯಾಗುತ್ತಿದ್ದಾರೆ.

ಇನ್ನೂ ಕೆಲ ವಂಚಕರು, ಜನರ ಬ್ಯಾಂಕ್ ಖಾತೆ ವಿವರ ಪಡೆದು ಅದರಲ್ಲಿರುವ ಹಣವನ್ನು ತಮ್ಮ ಬೇರೊಂದು ಖಾತೆಗೆ ವರ್ಗಾಯಿಸಿಕೊಳ್ಳುತ್ತಿದ್ದಾರೆ. ಅಂಥ ಖಾತೆಗಳು ಹೊರ ರಾಜ್ಯದವರ ಹೆಸರಿನಲ್ಲಿವೆ. ಅದರ ಜಾಡು ಹಿಡಿದು ಹೊರಟ ಪೊಲೀಸರು ವಂಚಕರನ್ನು ಪತ್ತೆ ಹಚ್ಚುವುದೂ ಕಷ್ಟವಾಗುತ್ತಿದೆ.

ಔಷಧಿ ಪೂರೈಕೆ ಕಂಪನಿಗಳ ಹೆಸರಿನಲ್ಲೂ ಸೈಬರ್ ವಂಚಕರು ಕೃತ್ಯ ಎಸಗುತ್ತಿದ್ದಾರೆ. ರೆಮ್‌ಡಿಸಿವಿರ್ ಚುಚ್ಚುಮದ್ದು, ಕಪ್ಪು ಶಿಲೀಂಧ್ರ ರೋಗಕ್ಕೆ ಔಷಧ, ಮಾಸ್ಕ್... ಹೀಗೆ ನಾನಾ ಸಾಮಗ್ರಿಗಳ ಮಾರಾಟದ ಸೋಗಿನಲ್ಲಿ ವಂಚಕರು ಜಾಹೀರಾತು ನೀಡುತ್ತಿದ್ದಾರೆ. ಔಷಧಿ ವಿತರಕರು ಹಾಗೂ ಉದ್ಯಮಿಗಳು, ಜಾಹೀರಾತು ನಂಬಿ ಆರೋಪಿಗಳನ್ನು ಸಂಪರ್ಕಿಸಿ ಲಕ್ಷಾಂತರ ರೂಪಾಯಿ ಕಳೆದುಕೊಳ್ಳುತ್ತಿದ್ದಾರೆ.

ಲಾಕ್‌ಡೌನ್‌ನಿಂದ ಆರ್ಥಿಕ ತೊಂದರೆಗೀಡಾಗಿ 'ಕೋವಿಡ್' ಚಿಕಿತ್ಸೆಗೆಂದು ಜೀವಮಾನದ ಗಳಿಕೆಯನ್ನೆಲ್ಲಾ ಖರ್ಚು ಮಾಡುವ ಜನ, ವಂಚಕರ ಜಾಲಕ್ಕೆ ಸಿಲುಕಿ ಮತ್ತಷ್ಟು ಹಣ ಕಳೆದುಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಕೆಲ ನಿಮಿಷಗಳಲ್ಲೇ ತಮ್ಮ ಬ್ಯಾಂಕ್ ಖಾತೆಯಲ್ಲಿರುವ ಹಣವೆಲ್ಲವೂ ವಂಚಕರ ಕೈ ಸೇರುತ್ತಿದ್ದಂತೆ ಪೊಲೀಸರ ಮೊರೆ ಹೋಗುತ್ತಿದ್ದಾರೆ.

'ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗಿ ಸಾವುಗಳು ಸಂಭವಿಸುತ್ತಿರುವುದರಿಂದ ಜನರಲ್ಲಿ ಆತಂಕ ಮನೆಮಾಡಿದೆ. ಅದನ್ನೇ ಬಂಡವಾಳ ಮಾಡಿಕೊಂಡ ಸೈಬರ್ ವಂಚಕರು, ಜನರನ್ನು ನಂಬಿಸಿ ಕೃತ್ಯ ಎಸಗುತ್ತಿದ್ದಾರೆ. ಕೋವಿಡ್ ಸಂಬಂಧಿತ ವಂಚನೆಗಳ ಬಗ್ಗೆಯೇ ಇತ್ತೀಚೆಗೆ ಹೆಚ್ಚಿನ ದೂರುಗಳು ಬರುತ್ತಿವೆ' ಎಂದು ನಗರದ ಸೈಬರ್ ಕ್ರೈಂ ಠಾಣೆಯೊಂದರ ಇನ್‌ಸ್ಪೆಕ್ಟರ್ ಹೇಳಿದರು.

'ಪ್ರತಿಯೊಂದು ಪ್ರಕರಣದಲ್ಲೂ ಜನರೇ ವಂಚಕರನ್ನು ಸಂಪರ್ಕಿಸಿ ಹಣ ಕಳೆದುಕೊಂಡಿದ್ದಾರೆ. ಆ ಪೈಕಿ ಕೆಲವರಷ್ಟೇ ಠಾಣೆಗೆ ಬಂದು ದೂರು ನೀಡುತ್ತಾರೆ. ಹಲವರು ದೂರು ಸಹ ನೀಡುವುದಿಲ್ಲ' ಎಂದೂ ತಿಳಿಸಿದರು.


ಉತ್ತರ ಭಾರತದ ಗ್ಯಾಂಗ್‌ಗಳು: 'ಜಾರ್ಖಂಡ್, ಬಿಹಾರ್, ಉತ್ತರ ಪ್ರದೇಶ, ಮಧ್ಯಪ್ರದೇಶ, ಒಡಿಶಾ, ರಾಜಸ್ಥಾನ್ ಹಾಗೂ ಇತರೆ ರಾಜ್ಯಗಳ ಗ್ಯಾಂಗ್‌ಗಳು ಸೈಬರ್ ಅಪರಾಧ ಎಸಗುತ್ತಿರುವ ಮಾಹಿತಿ ಇದೆ. ಈಗಾಗಲೇ ಕೆಲ ಗ್ಯಾಂಗ್‌ಗಳ ಸದಸ್ಯರನ್ನು ಸೆರೆ ಹಿಡಿಯಲಾಗಿದ್ದು, ಮತ್ತಷ್ಟು ಗ್ಯಾಂಗ್‌ಗಳು ಇದೀಗ ಕೃತ್ಯದಲ್ಲಿ ಸಕ್ರಿಯವಾಗಿವೆ' ಎಂದು ಇನ್‌ಸ್ಪೆಕ್ಟರ್ ಹೇಳಿದರು.

'ನಿರುದ್ಯೋಗಿಗಳು ಹಾಗೂ ಅರ್ಧಕ್ಕೆ ಶಾಲೆ ಬಿಟ್ಟವರನ್ನು ಗ್ಯಾಂಗ್‌ಗೆ ಸೇರಿಸಿಕೊಂಡು ಸೈಬರ್ ಪರಿಣಿತರಿಂದ ತರಬೇತಿ ಕೊಡಿಸಲಾಗುತ್ತಿದೆ. ಅಂಥವರೇ ಸೈಬರ್ ಕೃತ್ಯ ಎಸಗುತ್ತಿದ್ದು, ಕೆಲ ಗ್ರಾಮಗಳಲ್ಲಿ ಸಾಫ್ಟ್‌ವೇರ್ ಕಂಪನಿ ರೀತಿಯಲ್ಲೇ ದೊಡ್ಡ ಕಚೇರಿಗಳನ್ನೇ ತೆರೆಯಲಾಗಿದೆ. ಇತ್ತೀಚೆಗೆ ಕರ್ನಾಟಕದ ಪೊಲೀಸರು, ಜಾರ್ಖಂಡ್‌ಗೆ ಹೋದಾಗ ಅಂಥದ್ದೇ ಕಚೇರಿ ಮೇಲೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಿ ಕರೆತಂದಿದ್ದರು' ಎಂದೂ ಅವರು ಮಾಹಿತಿ ನೀಡಿದರು.

'ಸ್ಥಳೀಯರ ದಾಖಲಾತಿಗಳನ್ನು ಹಣ ಕೊಟ್ಟು ಖರೀದಿಸುತ್ತಿರುವ ವಂಚಕರು, ಅದನ್ನೇ ಬಳಸಿಕೊಂಡು ಬ್ಯಾಂಕ್‌ಗಳಲ್ಲಿ ಖಾತೆ ತೆರೆಯುತ್ತಿದ್ದಾರೆ. ಪ್ರತಿಯೊಂದು ಗ್ಯಾಂಗ್ ಬಳಿ ಸಾವಿರಾರು ಬ್ಯಾಂಕ್ ಖಾತೆಗಳಿರುವ ಮಾಹಿತಿ ಇದೆ. ಜನರಿಂದ ದೋಚುವ ಹಣವನ್ನು ಅದೇ ಖಾತೆಗೆ ವರ್ಗಾಯಿಸಿಕೊಳ್ಳುತ್ತಿದ್ದಾರೆ. ಕೆಲದಿನಗಳ ನಂತರ, ಖಾತೆಗಳನ್ನು ನಿಷ್ಕ್ರಿಯಗೊಳಿಸುತ್ತಿದ್ದಾರೆ. ಹಣದ ವಹಿವಾಟಿಗಾಗಿ ಖಾತೆದಾರನಿಗೂ ಕಮಿಷನ್ ನೀಡುತ್ತಿರುವ ಮಾಹಿತಿಯೂ ಲಭ್ಯವಿದೆ' ಎಂದೂ ಇನ್‌ಸ್ಪೆಕ್ಟರ್ ತಿಳಿಸಿದರು.

'ಸೈಬರ್ ವಂಚಕರ ಜಾಲದಲ್ಲಿ ಸಿಲುಕಿ ಸಾವಿರದಿಂದ ಲಕ್ಷಾಂತರ ರೂಪಾಯಿ ಕಳೆದುಕೊಂಡವರು ನಮ್ಮಲ್ಲಿದ್ದಾರೆ. ಪ್ರತಿಯೊಂದು ಪ್ರಕರಣಗಳಲ್ಲಿ ಆಳವಾದ ತನಿಖೆ ಮಾಡಲು ಆಗುತ್ತಿಲ್ಲ. ಕೆಲ ಪ್ರಕರಣಗಳಲ್ಲಿ ಮಾತ್ರ ಆರೋಪಿಗಳ ಬಂಧನವಾಗಿದೆ. ವಿಶೇಷ ತಂಡಗಳನ್ನು ಹೊರ ರಾಜ್ಯಕ್ಕೆ ಕಳುಹಿಸಿ, ಸ್ಥಳೀಯವಾಗಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿ ತರುವುದು ಅಷ್ಟು ಸುಲಭದ ಕೆಲಸವಲ್ಲ. ಸಮಯ ಹಾಗೂ ಆರ್ಥಿಕ ಬೆಂಬಲವೂ ಬೇಕಾಗುತ್ತದೆ. ಸೈಬರ್ ಕ್ರೈಂ ನಿಯಂತ್ರಣ ಕುರಿತ ಪ್ರತಿ ಸಭೆಯಲ್ಲೂ ಈ ಬಗ್ಗೆ ಚರ್ಚೆಯಾಗುತ್ತದೆ' ಎಂದೂ ಅವರು ಹೇಳಿದರು.

ಬೆಂಗಳೂರಿನಲ್ಲಿ ಸೈಬರ್ ಕ್ರೈಂ ಪ್ರಕರಣಗಳು
(ವರ್ಷವಾರು ವಿವರ - ದಾಖಲಾದ ಪ್ರಕರಣ)



ಸೈಬರ್ ಕ್ರೈಂ ತಡೆಗೆ ಎಚ್ಚರಿಕೆಯೊಂದೇ ಅಸ್ತ್ರ

'ಸೈಬರ್ ಕ್ರೈಂ ಆದ ನಂತರ ಹೆಚ್ಚಾಗಿ ಹಣ ವಾಪಸು ಬರುವುದಿಲ್ಲ. ಆರೋಪಿಗಳೂ ಸಿಗುವುದಿಲ್ಲ. ಹೀಗಾಗಿ, ಯಾವುದೇ ಅಪರಿಚಿತರ ಸಂದೇಶ ಬಂದಾಗಲೇ ಎಚ್ಚರಿಕೆ ವಹಿಸುವುದೊಂದೇ ಸೈಬರ್ ಕ್ರೈಂ ತಡೆಗೆ ಅಸ್ತ್ರ' ಎಂದು ಸೈಬರ್ ಕ್ರೈಂ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಆನ್‌ಲೈನ್ ಜಾಹೀರಾತು, ಮೊಬೈಲ್‌ಗೆ ಬರುವ ಸಂದೇಶಗಳನ್ನು ನಂಬುವ ಮುನ್ನ ಪರಿಶೀಲಿಸಬೇಕು. ಅಪರಿಚಿತರಿಗೆ ಕರೆ ಮಾಡಿ ಅವರು ಕೇಳಿದ ಮಾಹಿತಿಯನ್ನೆಲ್ಲ ನೀಡಬಾರದು. ಯಾವುದೇ ಸೌಲಭ್ಯ ಪಡೆಯಬೇಕಾದರೂ ನೇರವಾಗಿ ಭೇಟಿಯಾಗಿ ಮಾತುಕತೆ ನಡೆಸಿ ಮುಂದುವರಿಯುವುದು ಉತ್ತಮ' ಎಂದೂ ತಿಳಿಸಿದರು.

ನಿತ್ಯವೂ 10ಕ್ಕೂ ಹೆಚ್ಚು ಪ್ರಕರಣ

ಕೋವಿಡ್ ಚಿಕಿತ್ಸೆ ಹಾಗೂ ಅದಕ್ಕೆ ಸಂಬಂಧಪಟ್ಟ ವಸ್ತುಗಳ ಮಾರಾಟದ ಹೆಸರಿನಲ್ಲಿ ನಡೆಯುತ್ತಿರುವ ವಂಚನೆಗಳ ಬಗ್ಗೆ ನಗರದಲ್ಲಿ ನಿತ್ಯವೂ 10ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ.

'ನಗರದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಆಗ್ನೇಯ, ಈಶಾನ್ಯ ಹಾಗೂ ವೈಟ್‌ಫೀಲ್ಡ್ ವಿಭಾಗಗಳಲ್ಲಿ ಪ್ರತ್ಯೇಕ ಸೈಬರ್ ಕ್ರೈಂ ಠಾಣೆ ತೆರೆಯಲಾಗಿದೆ. ವಂಚನೆಗೀಡಾದ ಜನ ನಿತ್ಯವೂ ಠಾಣೆಗೆ ಬಂದು ಅಳಲು ತೋಡಿಕೊಳ್ಳುತ್ತಿದ್ದಾರೆ. ಅವರಿಂದ ದೂರು ಪಡೆದು ಎಫ್‌ಐಆರ್ ದಾಖಲಿಸಿಕೊಳ್ಳಲಾಗುತ್ತಿದೆ' ಎಂದು ಇನ್‌ಸ್ಪೆಕ್ಟರ್ ಹೇಳಿದರು.

'ಕೆಲ ಪ್ರಕರಣಗಳಲ್ಲಿ ಆರೋಪಿಗಳು ಅಪರಿಚಿತರು. ಇನ್ನು ಕೆಲ ಪ್ರಕರಣಗಳಲ್ಲಿ ಆರೋಪಿಗಳು ನಕಲಿ ಹೆಸರು ಹೇಳಿಕೊಂಡಿದ್ದಾರೆ. ಸಂದೇಶ ಹಾಗೂ ಬ್ಯಾಂಕ್ ಖಾತೆಗಳ ಮಾಹಿತಿ ಆಧರಿಸಿ ತನಿಖೆ ಕೈಗೊಂಡರೂ ಆರೋಪಿಗಳ ಸುಳಿವು ಸಿಗುವುದು ವಿರಳ' ಎಂದೂ ತಿಳಿಸಿದರು.

ವಂಚನೆ ಪ್ರಕರಣ 1: ಭೂಪಸಂದ್ರದ ನಿವಾಸಿಯಾಗಿರುವ ಉದ್ಯಮಿಯೊಬ್ಬರು ಆಮ್ಲಜನಕ ಸಾಂದ್ರಕಕ್ಕಾಗಿ ಹುಡುಕಾಟ ನಡೆಸುತ್ತಿದ್ದರು. ಆನ್‌ಲೈನ್‌ನಲ್ಲಿ ಪ್ರಕಟಗೊಂಡಿದ್ದ ಜಾಹೀರಾತು ನಂಬಿ, 'ಸುರಭಿ ಎಂಟರ್‌ಪ್ರೈಸಸ್' ಎಂಬ ಕಂಪನಿ ಪ್ರತಿನಿಧಿಯನ್ನು ಸಂಪರ್ಕಿಸಿದ್ದರು.

ಅಗತ್ಯವಿರುವಷ್ಟು ಸಾಂದ್ರಕಗಳನ್ನು ನೀಡಲು ಒಪ್ಪಿದ್ದ ಪ್ರತಿನಿಧಿ, ಮುಂಗಡವಾಗಿ ಹಣ ಪಾವತಿ ಮಾಡಬೇಕೆಂದು ಹೇಳಿ ₹ 12.59 ಲಕ್ಷ ಪಡೆದು ನಾಪತ್ತೆಯಾಗಿದ್ದಾನೆ. ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ.

ವಂಚನೆ ಪ್ರಕರಣ 2: ಕೋರಮಂಗಲ ನಿವಾಸಿಯಾಗಿರುವ ವೈದ್ಯರೊಬ್ಬರ ಹೆಸರಿನಲ್ಲಿ 'ಇಂಡಿಯಾ ಮಾರ್ಟ್' ಜಾಲತಾಣದಲ್ಲಿ ನಕಲಿ ಖಾತೆ ತೆರೆದಿದ್ದ ವಂಚಕರು, 'ಕೋವಿಡ್ ಔಷಧಿ ಮಾರಾಟ ಮಾಡಲಾಗುವುದು' ಎಂಬ ಜಾಹೀರಾತು ನೀಡಿ ಜನರನ್ನು ವಂಚಿಸಿದ್ದಾರೆ.

ವೈದ್ಯರೇ ಔಷಧಿ ಮಾರಾಟ ಮಾಡುತ್ತಿರಬೇಕೆಂದು ನಂಬಿದ್ದ ಜನ, ಆರೋಪಿಗಳನ್ನು ಸಂಪರ್ಕಿಸಿ ಹಣ ಕಳೆದುಕೊಂಡಿದ್ದಾರೆ. ಪರಿಚಯಸ್ಥರೊಬ್ಬರ ಮೂಲಕ ವಿಷಯ ತಿಳಿಯುತ್ತಿದ್ದಂತೆ ವೈದ್ಯ, ಪೊಲೀಸರಿಗೆ ದೂರು ನೀಡಿದ್ದಾರೆ.

ವಂಚನೆ ಪ್ರಕರಣ 3: ಶ್ರೀನಗರದಲ್ಲಿ ವಾಸವಿರುವ ಔಷಧಿ ವಿತರಣಾ ಏಜೆನ್ಸಿ ಮಾಲೀಕರೊಬ್ಬರು ರೆಮ್‌ಡಿಸಿವಿರ್ ಚುಚ್ಚುಮದ್ದು ಖರೀದಿಸಲು ಹುಡುಕಾಟ ನಡೆಸುತ್ತಿದ್ದರು. ಆನ್‌ಲೈನ್‌ನಲ್ಲಿ ಸೂರತ್‌ನ ಆದಿನಾಥ್ ಏಜೆನ್ಸಿಯ ಸಂಪರ್ಕ ಸಂಖ್ಯೆ ಸಿಕ್ಕಿತ್ತು.

ಅದಕ್ಕೆ ಕರೆ ಮಾಡಿದಾಗ, ವೋರಾ ಹೆಸರಿನ ಪ್ರತಿನಿಧಿ ಮಾತನಾಡಿದ್ದ. ಚುಚ್ಚುಮದ್ದು ಸರಬರಾಜು ಮಾಡಲು ಒಪ್ಪಿದ್ದ ಆರೋಪಿ, ₹ 5 ಲಕ್ಷ ಮುಂಗಡವಾಗಿ ಪಡೆದಿದ್ದ. ನಂತರ, ಚುಚ್ಚುಮದ್ದು ಕಳುಹಿಸದೇ ನಾಪತ್ತೆಯಾಗಿದ್ದಾನೆ.

ವಂಚನೆ ಪ್ರಕರಣ 4: ವೈಟ್‌ಫೀಲ್ಡ್ ನಿವಾಸಿಯೊಬ್ಬರ ಮೊಬೈಲ್‌ಗೆ, 'ನೀವು ಲಸಿಕೆ ಪಡೆದುಕೊಂಡಿದ್ದೀರಾ? ನೀವು ಲಸಿಕೆ ಹಾಕಿಸಿಕೊಳ್ಳಲು ನೋಂದಣಿ ಮಾಡಿಕೊಳ್ಳಬೇಕೇ?' ಎಂಬ ಸಂದೇಶ ಬಂದಿತ್ತು.

ಅದನ್ನು ನಂಬಿದ್ದ ನಿವಾಸಿ, ಅದರಲ್ಲಿರುವ ಸಂಖ್ಯೆಗೆ ಕರೆ ಮಾಡಿದ್ದರು. 'ನೀವು ಲಸಿಕೆ ಪಡೆದಿದ್ದಿರಾ? ಎಂಬುದಾದರೆ 1 ಸಂಖ್ಯೆ ಒತ್ತಿ' ಎಂಬ ಪ್ರತಿಕ್ರಿಯೆ ಸಿಕ್ಕಿತ್ತು. ಅದನ್ನು ನಂಬಿ 1 ಸಂಖ್ಯೆ ಒತ್ತಿದಾಗ ಮೊಬೈಲ್ ಹ್ಯಾಕ್ ಆಗಿದೆ.

ವಂಚನೆ ಪ್ರಕರಣ 5: ಮಲ್ಲೇಶ್ವರದ ನಿವಾಸಿಯೊಬ್ಬರು, ತಮ್ಮ ತಂದೆ–ತಾಯಿಗೆ ತೀವ್ರ ನಿಗಾ ಘಟಕದಲ್ಲಿ ಹಾಸಿಗೆ ಹುಡುಕುತ್ತಿದ್ದರು. ಆನ್‌ಲೈನ್‌ನಲ್ಲಿ ಪ್ರಕಟವಾಗಿದ್ದ ಜಾಹೀರಾತು ನಂಬಿ ವಂಚಕನಿಗೆ ಕರೆ ಮಾಡಿದ್ದರು. ಬಿಬಿಎಂಪಿ ವತಿಯಿಂದಲೇ ಹಾಸಿಗೆ ಕೊಡಿಸುವುದಾಗಿ ಹೇಳಿದ್ದ ವಂಚಕ, ಮುಂಗಡವಾಗಿ ಹಣ ಪಡೆದು ವಂಚಿಸಿದ್ದಾನೆ. ಇದರ ನಡುವೆಯೇ ನಿವಾಸಿ, ತಮ್ಮ ತಂದೆ–ತಾಯಿಗಳಿಬ್ಬರನ್ನೂ ಕಳೆದುಕೊಂಡಿದ್ದಾರೆ.



ರೈಲು ನಿಲ್ದಾಣದಲ್ಲಿ ನರಳುತ್ತಿದ್ದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ತೀವ್ರ ಜ್ವರದಿಂದಾಗಿ ನರಳುತ್ತ ಮಲಗಿದ್ದ ಮಹಿಳೆಯೊಬ್ಬರನ್ನು ರೈಲ್ವೆ ಇಲಾಖೆ ಸಿಬ್ಬಂದಿ ರಕ್ಷಿಸಿ, ಚಿಕಿತ್ಸೆಗಾಗಿ ಕೆ.ಸಿ. ಜನರಲ್ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಮಹಿಳೆ ಹೆಸರು ಗೊತ್ತಾಗಿಲ್ಲ. ಎರಡು ದಿನಗಳಿಂದ ಮಹಿಳೆ ನಿಲ್ದಾಣದಲ್ಲಿ ಮಲಗಿದ್ದಾರೆ. ಶನಿವಾರ ಅವರನ್ನು ನೋಡಿದ್ದ ಸಿಬ್ಬಂದಿ, ಸಹಾಯಕ್ಕೆ ಹೋಗಿದ್ದರು. ಆದರೆ, ಅವರಿಗೆ ತೀವ್ರ ಜ್ವರವಿರುವುದು ಗೊತ್ತಾಗಿತ್ತು.

ಕೊರೊನಾ ಸೋಂಕು ತಗುಲಿರುವ ಅನುಮಾನ ಬಂದಿದ್ದರಿಂದಾಗಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಮಹಿಳೆಯನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

'ಯಾರೋ ಮಹಿಳೆಯನ್ನು ನಿಲ್ದಾಣದಲ್ಲೇ ಬಿಟ್ಟು ಹೋಗಿದ್ದಾರೆ. ಅವರ ವಿಳಾಸವನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ಸಿಬ್ಬಂದಿ ಹೇಳಿದರು.

ಕಪ್ಪು ಶಿಲೀಂಧ್ರ: ರಾಜ್ಯ ಸರ್ಕಾರದಿಂದ ಆದೇಶ • ನಗರದಲ್ಲಿ 21 ಮಂದಿಗೆ ದೃಢ

ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಸೋಂಕಿಗೆ ರಾಜ್ಯದ ಎಲ್ಲ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಅನುಮತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಅಲ್ಲದೆ, ಸೂಕ್ತ ವ್ಯವಸ್ಥೆ ಜಾಗೂ ಸಾಮರ್ಥ್ಯ ಹೊಂದಿರುವ ತಾಲ್ಲೂಕು ಆಸ್ಪತ್ರೆಗಳಲ್ಲೂ ಈ ಸೋಂಕಿಗೆ ಚಿಕಿತ್ಸೆ ನೀಡಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಸುತ್ತೋಲೆ ಹೊರಡಿಸಿದ್ದಾರೆ.

'ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಕಪ್ಪು ಶಿಲೀಂಧ್ರ ಸೋಂಕು ಪತ್ತೆಯಾಗುತ್ತಿದೆ. ಹೀಗಾಗಿ, ಸೋಂಕಿನ ಪ್ರಕರಣಗಳು ಹೆಚ್ಚುತ್ತಿವೆ. ಸೋಂಕಿನ ನಿಯಂತ್ರಣಕ್ಕೆ ಶೀಘ್ರ ಚಿಕಿತ್ಸೆ ನೀಡಬೇಕಾಗಿದೆ' ಎಂದೂ ಅವರು ತಿಳಿಸಿದ್ದಾರೆ.

21 ಮಂದಿಗೆ ದೃಢ: ನಗರದಲ್ಲಿ ಕಪ್ಪು ಶಿಲೀಂಧ್ರ ಸೋಂಕಿಗೆ ಒಳಪಡುವವರ ಸಂಖ್ಯೆ ಏರಿಕೆ ಕಂಡಿದ್ದು, ಭಾನುವಾರ 21 ಪ್ರಕರಣಗಳು ದೃಢಪಟ್ಟಿವೆ.

ಕೋವಿಡ್ ಪೀಡಿತರಲ್ಲಿ ಮತ್ತೆ 17 ಮಂದಿಯಲ್ಲಿ ಶಿಲೀಂಧ್ರ ಸೋಂಕು ಕಾಣಿಸಿಕೊಂಡಿದ್ದು, ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದಾರೆ. ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ರೋಗಿಗಳಲ್ಲಿ ಇಬ್ಬರು ಚೇತರಿಸಿಕೊಂಡಿದ್ದಾರೆ. ಬೌರಿಂಗ್ ಆಸ್ಪತ್ರೆಯಲ್ಲಿ ಹೊಸದಾಗಿ ನಾಲ್ಕು ಮಂದಿ ದಾಖಲಾಗಿದ್ದು, ಇಬ್ಬರು ಗುಣಮುಖರಾಗಿ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ. ಇದರಿಂದಾಗಿ ವಿಕ್ಟೋರಿಯಾ ಹಾಗೂ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ 94ಕ್ಕೆ ತಲುಪಿದೆ.

ವಿಕ್ಟೋರಿಯಾ ಆಸ್ಪತ್ರೆಗೆ ಈವರೆಗೆ 68 ಮಂದಿ ದಾಖಲಾಗಿದ್ದು, ಅದರಲ್ಲಿ 9 ಮಂದಿ ಮೃತಪಟ್ಟಿದ್ದಾರೆ. 7 ಮಂದಿ ದೃಷ್ಟಿ ಕಳೆದುಕೊಂಡಿದ್ದಾರೆ. ಸದ್ಯ 58 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಲ್ಲಿ ನಾಲ್ವರು ಗಂಭೀರವಾಗಿ ಅಸ್ವಸ್ಥರಾಗಿದ್ದಾರೆ. ಬೌರಿಂಗ್ ಆಸ್ಪತ್ರೆಯಲ್ಲಿ ಒಟ್ಟು 41 ಮಂದಿ ದಾಖಲಾಗಿದ್ದು, ಒಬ್ಬರು ಮೃತಪಟ್ಟಿದ್ದಾರೆ. 36 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸೋಂಕಿತರ ಚಿಕಿತ್ಸೆಗೆ ಅಗತ್ಯವಿರುವ 'ಲಿಪೋಸೋಮಲ್ ಆಂಫೊಟೆರಿಸಿನ್ ಬಿ' ಔಷಧವನ್ನು ವಿಕ್ಟೋರಿಯಾ ಆಸ್ಪತ್ರೆಗೆ 100 ಸೀಸೆಗಳನ್ನು ಪೂರೈಕೆ ಮಾಡಲಾಗಿದೆ.

ಮೂಲ ಪತ್ತೆಗೆ ಸೂಚನೆ

ಕೋವಿಡ್ ಸೋಂಕಿನಿಂದ ಗುಣಮುಖರಾದವರಲ್ಲಿ ಕಾಣಿಸಿಕೊಳ್ಳುತ್ತಿರುವ ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಮೂಲವನ್ನು ಪತ್ತೆ ಹಚ್ಚಲು ವೈದ್ಯರು ಹಾಗೂ ಸೂಕ್ಷ್ಮಾಣುಜೀವಿ ತಜ್ಞರಿಗೆ ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ನಿರ್ದೇಶನ ನೀಡಿದರು.

ನುರಿತ ವೈದ್ಯರು, ಕೋವಿಡ್ ಮತ್ತು ಕಪ್ಪು ಶಿಲೀಂಧ್ರ ಚಿಕಿತ್ಸಾ ಶಿಷ್ಟಾಚಾರ ಸಮಿತಿಯ ತಜ್ಞರ ಸಭೆಯಲ್ಲಿ ಮಾತನಾಡಿದ ಅವರು, 'ಸೋಮವಾರದಿಂದಲೇ (ಮೇ 24) ಕಪ್ಪು ಶಿಲೀಂಧ್ರ ರೋಗದ ಮೂಲ ಪತ್ತೆ ಮಾಡಿ ವರದಿ ನೀಡಬೇಕು. ಅಲ್ಲದೆ, ಚಿಕಿತ್ಸೆಗೆ ಹೊಸ ಮಾರ್ಗಸೂಚಿ ರೂಪಿಸಬೇಕು' ಎಂದು ಸೂಚಿಸಿದರು.

ಮಣಿಪಾಲ್ ಆಸ್ಪತ್ರೆಯ ವೈದ್ಯ ಡಾ. ಸಂಪತ್ ಚಂದ್ರ ಪ್ರಸಾದ್ ರಾವ್, 'ಈ ರೋಗ ಮೊದಲ ಅಲೆ ವೇಳೆ ಕಂಡುಬರಲಿಲ್ಲ. ಈಗ ಏಕೆ ಕಾಣಿಸಿಕೊಂಡಿದೆ, ಕೋವಿಡ್ ಸೋಂಕಿತರಿಗೆ ಪೂರೈಕೆ ಮಾಡುತ್ತಿರುವ ಆಮ್ಲಜನಕದಿಂದ ಬರುತ್ತಿದೆಯೇ, ನಮ್ಮಲ್ಲಿನ ಲೋಪವೇನು ಎನ್ನುವುದನ್ನು ಪತ್ತೆ ಮಾಡುವ ಪ್ರಯತ್ನ ಮಾಡಬೇಕಿದೆ' ಎಂದರು.

ನಗರದಲ್ಲಿ ಇಂದು

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಧನ ವಿತರಣೆ: ಸಾನಿಧ್ಯ–ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು, ಉಪಸ್ಥಿತಿ–ಸಚಿವ ಎಸ್.ಟಿ.ಸೋಮಶೇಖರ್, ಸ್ಥಳ–ಉಲ್ಲಾಳ ವಾರ್ಡಿನ ನಗೆಮನೆ–ಬೆಳಿಗ್ಗೆ 10.30

ಕಗ್ಗಲಿಪುರ ಮತ್ತು ಅಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಹಾಯಧನ ವಿತರಣೆ: ಸಾನಿಧ್ಯ– ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ, ಸ್ಥಳ: ಕಗ್ಗಲಿಪುರ ಪ್ರೌಢಶಾಲೆ ಆವರಣ–ಬೆಳಿಗ್ಗೆ 11.30.

'ಜನರ ಜೀವ ಮತ್ತು ಜೀವನ ಉಳಿಸುವ ಪಂಚಕ್ರಮ'ಗಳ ಜಾರಿಗೆ ಒತ್ತಾಯಿಸಿ ಜನಪರ ಸಂಘಟನೆಗಳಿಂದ ಜನಾಗ್ರಹ ಆಂದೋಲನ: ಬೆಳಿಗ್ಗೆ 9, ಸ್ಥಳ– ಆಯಾ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮಪಂಚಾಯಿತಿ ಕೇಂದ್ರ.

ಬೆಂಗಳೂರಿನ ಸ್ಮಶಾನ ಕಾರ್ಮಿಕರ ಕುರಿತ ವರದಿ 'ಕಸಿದ ಘನತೆ' ಬಿಡುಗಡೆ: ಭಾಷಣಕಾರರು–ಡಾ.ಬಿ.ಆರ್. ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿಯ (ಗ್ರೇವ್ ಯಾರ್ಡ್ ವರ್ಕರ್ಸ್ ವಿಂಗ್) ಸೌರಿ ರಾಜ, ದಲಿತ ಸಂಘರ್ಷ ಸಮಿತಿಯ (ಭೀಮವಾದ) ಆರ್.ಮೋಹನ್ ರಾಜ್, ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್‌ನ ಸ್ವಾತಿ ಹಾಗೂ ಲೇಖಾ, ಆಯೋಜನೆ–ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್–ಮಧ್ಯಾಹ್ನ 3 (ಆನ್‌ಲೈನ್ ಕಾರ್ಯಕ್ರಮ).

ಎರಡು ದಿನ ಶೇ 20 ರಷ್ಟು ಆಮ್ಲಜನಕ ಕೊರತೆ?

ಬೆಂಗಳೂರು: 'ರಾಜ್ಯದಲ್ಲಿ ಆಮ್ಲಜನಕ ಉತ್ಪಾದಿಸುವ ಪ್ರಾಕ್ಸೈರ್ ಇಂಡಿಯಾ ಮತ್ತು ಏರ್ ವಾಟರ್ ಇಂಡಿಯಾ ಕಂಪನಿಗಳಲ್ಲಿ ದ್ರವೀಕೃತ ಆಮ್ಲಜನಕ ಉತ್ಪಾದನೆಯಲ್ಲಿ ಸಮಸ್ಯೆ ಉಂಟಾಗಿರುವುದರಿಂದ ಸೋಮವಾರ (ಮೇ 24) ಮತ್ತು ಮಂಗಳವಾರ (ಮೇ 25) ಶೇ 20ರಷ್ಟು ಆಮ್ಲಜನಕ ಪೂರೈಕೆಯಲ್ಲಿ ಕೊರತೆ ಉಂಟಾಗಲಿದೆ' ಎಂದು ಎಲ್ಲ ಉಪ ಔಷಧ ನಿಯಂತ್ರಕರಿಗೆ ಮತ್ತು ಸಹಾಯಕ ಔಷಧ ನಿಯಂತ್ರಕರಿಗೆ ಹೆಚ್ಚುವರಿ ಔಷಧ ನಿಯಂತ್ರಕ ಅಮರೇಶ್ ತುಂಬರಗಿ ಸೂಚನೆ ನೀಡಿದ್ದಾರೆ.

'ಈ ಬಗ್ಗೆ ಎಲ್ಲ ಆಸ್ಪತ್ರೆಗಳು ಮತ್ತು ಮರು ಭರ್ತಿ (ರೀ ಫಿಲ್ಲಿಂಗ್) ಏಜೆನ್ಸಿಗಳಿಗೆ ಮಾಹಿತಿ ನೀಡಬೇಕು. ಕೊರತೆಗೆ ಪೂರಕವಾಗಿ ಯೋಜನೆ ರೂಪಿಸುವಂತೆ ತಿಳಿಸಬೇಕು' ಎಂದೂ ಅವರು ಸೂಚನೆ ನೀಡಿದ್ದಾರೆ.

ಎಚ್ಚರ ವಹಿಸಿ: 'ಸೋಮವಾರ ಮತ್ತು ಮಂಗಳವಾರ ಶೇ 20ರಷ್ಟು ಆಮ್ಲಜನಕ ಪೂರೈಕೆಯಲ್ಲಿ ಕೊರತೆ ಉಂಟಾಗುವ ಸಾಧ್ಯತೆ ಇರುವುದರಿಂದ ಎರಡೂ ದಿನಗಳಲ್ಲಿ ಲಭ್ಯ ಆಮ್ಲಜನಕವನ್ನು ಸಂಪೂರ್ಣವಾಗಿ ಪೂರೈಸುವಂತೆ ತಮ್ಮ ವ್ಯಾಪ್ತಿಯ ಮರುಭರ್ತಿ ಏಜೆನ್ಸಿಗಳಿಗೆ ತಿಳಿಸಬೇಕು' ಎಂದು ಎಲ್ಲ ಜಿಲ್ಲಾಧಿಕಾರಿಗಳಿಗೆ ಆಮ್ಲಜನಕ ಪೂರೈಕೆಯ ರಾಜ್ಯ ನೋಡಲ್ ಅಧಿಕಾರಿ ಮೌನೀಶ್ ಮೌದ್ಗಿಲ್ ಸೂಚಿಸಿದ್ದಾರೆ.

'ಮರು ಭರ್ತಿ ಏಜೆನ್ಸಿಗಳು ಹೊರರಾಜ್ಯಗಳಿಗೆ ಆಮ್ಲಜನಕ ಪೂರೈಸುತ್ತಿರುವುದು ಗೊತ್ತಾಗಿದೆ. ಅಲ್ಲದೆ, ಕೈಗಾರಿಕೆ ಅಗತ್ಯಗಳಿಗೆ ಮತ್ತು ವೈಯಕ್ತಿಕ ಅಗತ್ಯಗಳಿಗೂ ಪೂರೈಸುತ್ತಿರುವ ಮಾಹಿತಿ ಸಿಕ್ಕಿದೆ. ಈ ಎರಡು ದಿನಗಳಲ್ಲಿ ಈ ರೀತಿ ಆಮ್ಲಜನಕ ಪೂರೈಕೆ ಆಗದಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು' ಎಂದು ಅವರು ಸೂಚಿಸಿದ್ದಾರೆ.

'ಶವ ಸಂಸ್ಕಾರ ನೀವೇ ಮಾಡಿ; ಹಣ ಕಳಿಸಿಕೊಡಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ನಮ್ಮಪ್ಪನ ಅಂತ್ಯಕ್ರಿಯೆಯನ್ನು ನೀವೇ ಮಾಡಿ. ಅವರ ಬಳಿಯಿದ್ದ ಹಣ, ದಾಖಲೆಗಳನ್ನು ನನಗೆ ಕಳುಹಿಸಿಕೊಡಿ...'

ಕೋವಿಡ್–19 ರೋಗ ಲಕ್ಷಣ ಹೊಂದಿದ್ದ ವ್ಯಕ್ತಿಯೊಬ್ಬರು ಶನಿವಾರ ಮೃತಪಟ್ಟಿದ್ದಾರೆ. ವಾರ್ಡ್‌ನ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಭಾನುವಾರ ಬೆಳಿಗ್ಗೆ ಕರೆ ಮಾಡಿ, 'ಅಂತ್ಯಸಂಸ್ಕಾರ ಮಾಡೋಣ ಬನ್ನಿ' ಎಂದು ಕರೆದಿದ್ದಕ್ಕೆ ಮೃತರ ಪುತ್ರ ಹೇಳಿದ ಮಾತುಗಳಿವು.



ಹೆಬ್ಬಾಳದ ಸೂರ್ಯ ಬೇಕರಿ ಬಳಿ ಮನೆಯೊಂದರಲ್ಲಿ ಮೃತ ವ್ಯಕ್ತಿ ಪ್ರತ್ಯೇಕವಾಗಿದ್ದರು. ಇವರ ಪತ್ನಿ, ಪುತ್ರ ಮೈಸೂರಿನ ಕುವೆಂಪುನಗರದಲ್ಲೇ ಬೇರೆ ವಾಸವಿದ್ದಾರೆ. ಒಂದೇ ಊರಿನಲ್ಲಿದ್ದರೂ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗದಿದ್ದ ಪತ್ನಿ, ಹಾಗೂ ಪುತ್ರನ ನಡೆಗೆ ಸಾಮಾಜಿಕ ಜಾಲತಾಣದಲ್ಲಿ ಟೀಕೆ ವ್ಯಕ್ತವಾಗಿದೆ.

'ನಮ್ಮ ಮನೆಯಲ್ಲಿ ಬಾಡಿಗೆಗಿದ್ದ ಆದರ್ಶ್ (55) ಎಂಬುವವರು ಮೃತರಾಗಿದ್ದಾರೆ' ಎಂದು ಆ ಮನೆ ಮಾಲೀಕರು ನನ್ನ ಮೊಬೈಲ್‌ಗೆ ಕರೆ ಮಾಡಿ ವಿಷಯ ತಿಳಿಸಿದರು. ಅವರ ಪುತ್ರನಿಗೂ ಮಾಹಿತಿ ನೀಡಿದ್ದಾರೆ. ಶನಿವಾರ ಸಂಜೆ 7.30ರ ವೇಳೆಗೆ ನಾವು ಅಲ್ಲಿಗೆ ಹೋದೆವು. ಬೆಳಿಗ್ಗೆ ಅಂತ್ಯಕ್ರಿಯೆ ನಡೆಸೋಣವೆಂದು ಮೃತ ವ್ಯಕ್ತಿಯ ಪುತ್ರನಿಗೆ ತಿಳಿಸಿ ಪಾರ್ಥಿವ ಶರೀರವನ್ನು ಮನೆಯೊಳಗಿಟ್ಟು ಬೀಗ ಹಾಕಿದ್ದೆವು' ಎಂದು ಮೈಸೂರು ಮಹಾನಗರ ಪಾಲಿಕೆಯ ಕಾರ್ಪೊರೇಟರ್ ಕೆ.ವಿ. ಶ್ರೀಧರ್ ತಿಳಿಸಿದರು.

'ಭಾನುವಾರ ಬೆಳಿಗ್ಗೆ 10 ಗಂಟೆಗೆ ನಾನು, ಸ್ಯಾನಿಟರಿ ಸೂಪರ್‌ವೈಸರ್ ಮೋಹನ್, ವಾರ್ಡ್ ಮೇಸ್ತ್ರಿ ಕಣ್ಣನ್, ಪಾಲಿಕೆ ಸಿಬ್ಬಂದಿಯೊಟ್ಟಿಗೆ ಮೃತರ ಮನೆ ಬಳಿಗೆ ಹೋದೆವು. ಮಗ ಬಂದಿರಲಿಲ್ಲ. ಫೋನ್ ಮಾಡಿದರೆ 'ಸರ್, ನೀವೇ ಶವ ಸಂಸ್ಕಾರ ಮಾಡಿ' ಎಂದು ಕೇಳಿಕೊಂಡ. ಆಗ ನಾನು ನಿಮ್ಮಪ್ಪನ ಕೊಠಡಿಯಲ್ಲಿ ₹ 6 ಲಕ್ಷವಿದೆ. ಎರಡು ಎಟಿಎಂ ಕಾರ್ಡ್, ಕೆಲ ದಾಖಲೆಗಳಿವೆ. ಅನಾಥ ಶವದ ಹೆಸರಿನಲ್ಲಿ ಅಂತ್ಯಕ್ರಿಯೆ ಮಾಡಿದಂತೆ, ಇವನ್ನು ಯಾವುದಾದರೂ ಅನಾಥಾಶ್ರಮಕ್ಕೆ ಕೊಡಲೇ ಎಂದು ಕೇಳುತ್ತಿದ್ದಂತೆ, 'ಸರ್ ಈಗಿನ ಪರಿಸ್ಥಿತಿ ಕೆಟ್ಟದಿದೆ. ಅಪ್ಪನ ಅಂತ್ಯಕ್ರಿಯೆ ನೀವೇ ಮಾಡಿ ಮುಗಿಸಿ. ಯಾರ ಕೈನಲ್ಲಾದರೂ ಹಣ, ದಾಖಲೆ ಕಳುಹಿಸಿಕೊಡಿ' ಎಂದು ಕೋರಿದ. ಇದಕ್ಕೆ ತಕ್ಷಣವೇ ಆತನಿಗೆ ಬೈದೆ. ನಂತರ ನಾವೇ ಅಂತ್ಯಕ್ರಿಯೆ ಮಾಡಿದೆವು' ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

> **ಅಪ್ಪನ ಅಂತ್ಯಕ್ರಿಯೆಗೆ ಬರಲ್ಲ ಎಂದ ಮಗನಿಗೆ ದುಡ್ಡಿದೆ ಎಂದು ಸುಳ್ಳು ಹೇಳಿದೆ. ಆದರೆ ಮಗ ಹಣ ಬೇಡ–ಹಣ ಕಳುಹಿಸಿಕೊಡಿ ಎಂದ. ನೋವಿನ ಸಂಗತಿಯಿದು**
> **ಕೆ.ವಿ.ಶ್ರೀಧರ್,** ಕಾರ್ಪೊರೇಟರ್

ಆಮ್ಲಜನಕ, ಔಷಧ, ಆಹಾರ ವಿತರಣೆ: ಜನರ ಸೇವೆಯಲ್ಲಿ ಸ್ವಯಂಸೇವಕರು

ರೋಗಿಗಳಿಗೆ ಸ್ಕೌಟ್ಸ್ – ಗೈಡ್ಸ್‌ನಿಂದ ಸೇವೆ

• ಗುರು ಪಿ.ಎಸ್

ಬೆಂಗಳೂರು: ಕೋವಿಡ್ ಪರಿಹಾರ ಕಾರ್ಯಗಳಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆಯ ರಾಜ್ಯ ಘಟಕವು ಎಲೆಮರೆಯ ಕಾಯಿಯಂತೆ ಕಾರ್ಯನಿರ್ವಹಿಸುತ್ತಿದೆ.

ಅಗತ್ಯವಿರುವವರಿಗೆ ಆಮ್ಲಜನಕ ಸಾಂದ್ರಕಗಳು, ಔಷಧ, ಆಹಾರದ ಕಿಟ್‌ಗಳನ್ನು ಪೂರೈಸುವುದು ಮಾತ್ರವಲ್ಲದೆ, ಕೋವಿಡ್ ಕುರಿತ ಜಾಗೃತಿ ಕಾರ್ಯಕ್ರಮಗಳಲ್ಲಿಯೂ ಸಂಸ್ಥೆಯ ಸ್ವಯಂ ಸೇವಕರು ಪ್ರತಿಫಲಾಪೇಕ್ಷೆ ಇಲ್ಲದೇ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ರಾಜ್ಯದಲ್ಲಿ ಸುಮಾರು 6.5 ಲಕ್ಷ ವಿದ್ಯಾರ್ಥಿಗಳು ಸಂಸ್ಥೆಯ ಅಡಿ ನೋಂದಾಯಿಸಿಕೊಂಡಿದ್ದರೂ, 18 ವರ್ಷಕ್ಕಿಂತ ಮೇಲ್ಪಟ್ಟ ಸ್ವಯಂ ಸೇವಕರನ್ನು ಕೋವಿಡ್ ಸೇವಾ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಪ್ರತಿ ಜಿಲ್ಲೆಯಲ್ಲಿ ಸುಮಾರು 100 ವಿದ್ಯಾರ್ಥಿಗಳು ಕೆಲಸ ಮಾಡುತ್ತಿದ್ದಾರೆ.

'ಸಂಸ್ಥೆಗೆ ಸದ್ಯ 22 ಸಾಂದ್ರಕಗಳು ಬೆಂಗಳೂರಿಗೆ ಬಂದಿವೆ. ಒಂದು ಸಾಂದ್ರಕಕ್ಕೆ ₹70 ಸಾವಿರ ಆಗುತ್ತದೆ. ರೆಡ್‌ಕ್ರಾಸ್‌ನವರು ನಾಲ್ಕು ನೀಡಿದ್ದಾರೆ. ಇಂತಹ 100 ಸಾಂದ್ರಕಗಳನ್ನು ಸಂಗ್ರಹಿಸುವ ಗುರಿ ಇದೆ. ಸದ್ಯ, ಬೆಂಗಳೂರಿನಲ್ಲಿ ಅಗತ್ಯವಿರುವವರಿಗೆ ಇವುಗಳನ್ನು ಪೂರೈಸಲಾಗುತ್ತಿದೆ' ಎಂದು ಸಂಸ್ಥೆಯ ರಾಜ್ಯಘಟಕದ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ 'ಪ್ರಜಾವಾಣಿ' ಗೆ ತಿಳಿಸಿದರು.

ಔಷಧ, ಆಹಾರ ವಿತರಣೆ: ರಾಜ್ಯದ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಸಂಸ್ಥೆಯು ನಿತ್ಯ 4 ಸಾವಿರದಿಂದ 6 ಸಾವಿರ ಆಹಾರದ ಪೊಟ್ಟಣಗಳನ್ನು ವಿತರಿಸುತ್ತಿದೆ. ಸರ್ಕಾರದ ಅನುಮತಿ ಪಡೆದೇ ಈ ಚಟುವಟಿಕೆಯನ್ನು ಸರ್ಕಾರ ನಡೆಸುತ್ತಿದೆ. ಅಲ್ಲದೆ, ಪ್ರತಿ ಜಿಲ್ಲೆಗೆ ₹50 ಸಾವಿರದಿಂದ ₹1 ಲಕ್ಷದವರೆಗಿನ ಮೊತ್ತದ ಔಷಧಗಳನ್ನು ಸಂಸ್ಥೆ ನೀಡುತ್ತಿದೆ.

ಮೂಡುಬಿದಿರೆಯಲ್ಲಿರುವ ಸ್ಕೌಟ್ಸ್ ಅಂಡ್ ಗೈಡ್ಸ್ ಕನ್ನಡ ಭವನವನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿದೆ. ದಿನಕ್ಕೆ 300 ಜನರು ಇದರ ಸೌಲಭ್ಯ ಪಡೆದುಕೊಳ್ಳುತ್ತಿದ್ದು, ಔಷಧವನ್ನು ಉಚಿತವಾಗಿ ಪೂರೈಸಲಾಗುತ್ತಿದೆ. ಸ್ಕೌಟ್ಸ್‌ನ ಮೂಡುಬಿದಿರೆ ತಾಲ್ಲೂಕು ಘಟಕದ ಅಧ್ಯಕ್ಷ ಮೋಹನ್ ಆಳ್ವ ಈ ಆಸ್ಪತ್ರೆಯನ್ನು ನಿರ್ವಹಿಸುತ್ತಿದ್ದಾರೆ.

ಇನ್ನು, ಬೀದರ್‌ನಲ್ಲಿ ಶಾಹಿನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮತ್ತು ಸ್ಕೌಟ್ಸ್‌ನ ಜಿಲ್ಲಾ ಅಧ್ಯಕ್ಷ ಖದೀರ್ ಅವರು, ಕೋವಿಡ್ ರೋಗಿಗಳಿಗೆ ನಿತ್ಯ 1,400 ಆಹಾರದ ಪೊಟ್ಟಣಗಳನ್ನು ಅವರ ಮನೆ ಬಾಗಿಲಿಗೇ ಒದಗಿಸುತ್ತಿದ್ದಾರೆ.

ರಕ್ತ ಪೂರೈಕೆ: ರೆಡ್‌ಕ್ರಾಸ್ ಸೊಸೈಟಿ ಮೂಲಕ ರಕ್ತ ಪೂರೈಸುವ ಕಾರ್ಯವನ್ನೂ ಸಂಸ್ಥೆ ಮಾಡುತ್ತಿದೆ. 1,200ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಕ್ತದಾನಕ್ಕೆ ನೋಂದಣಿ ಮಾಡಿಸಿಕೊಂಡಿದ್ದಾರೆ.

'ಆರೋಗ್ಯ ಮತ್ತು ಶಿಕ್ಷಣ ಇಲಾಖೆಯ ಜೊತೆಗೂಡಿಯೇ ನಮ್ಮ ಸಂಸ್ಥೆಯ ಸ್ವಯಂ ಸೇವಕರು ಈ ಎಲ್ಲ ಕಾರ್ಯ ಮಾಡುತ್ತಿದ್ದಾರೆ' ಎಂದು ಸಿಂಧ್ಯ ಹೇಳಿದರು.

ಯಾವುದೇ ನೆರವಿಗೆ ಸಂಸ್ಥೆಯ ಸಹಾಯವಾಣಿ 98864-28601 ಸಂಪರ್ಕಿಸಬಹುದು.


ಅಗತ್ಯವಿರುವವರಿಗೆ ಆಹಾರ ಪೊಟ್ಟಣ ವಿತರಿಸುತ್ತಿರುವ ಸ್ಕೌಟ್ಸ್ ವಿದ್ಯಾರ್ಥಿ

ಜಾಗೃತಿ ಕಾರ್ಯದಲ್ಲೂ ಮುಂದು

ಕೋವಿಡ್ ಕುರಿತ ಜಾಗೃತಿ ಕಾರ್ಯಕ್ರಮಗಳಲ್ಲಿಯೂ ಸಂಸ್ಥೆಯು ಮುಂದಿದೆ. 'ಕೊರೊನಾ ವೆಲ್‌ನೆಸ್' ಹೆಸರಿನಲ್ಲಿ ನಿತ್ಯ ಬೆಳಿಗ್ಗೆ 7.30ರಿಂದ 8 ಮತ್ತು ಸಂಜೆ 7.30ರಿಂದ 8 ರವರೆಗೆ ಯೋಗಾಭ್ಯಾಸದ ಮಹತ್ವದ ಕುರಿತು ತಜ್ಞರು ಆನ್‌ಲೈನ್‌ನಲ್ಲಿ ಮಾರ್ಗದರ್ಶನ ನೀಡುತ್ತಾರೆ. ದೇಶದಾದ್ಯಂತ 7 ಲಕ್ಷ ಜನ ಇದರ ಉಪಯೋಗ ಪಡೆಯುತ್ತಿದ್ದಾರೆ.

ಎಸ್‌ಎಂಎಸ್ (ಸ್ಯಾನಿಟೈಸರ್, ಮಾಸ್ಕ್, ಸ್ಟೀಮ್) ಅಭಿಯಾನದಡಿ ಸಂಸ್ಥೆಯ ಮಕ್ಕಳು 2 ನಿಮಿಷದ ವಿಡಿಯೊ ಮಾಡಿ, ಈ ಕ್ರಮಗಳ ಪ್ರಾತ್ಯಕ್ಷಿಕೆ ನೀಡಿದ್ದಾರೆ. ಇಂತಹ 25 ಸಾವಿರ ವಿಡಿಯೊಗಳನ್ನು ಸ್ವಯಂ ಸೇವಕರು ಮಾಡಿದ್ದಾರೆ. ಇನ್ನು, ಲಸಿಕೆ ಅಭಿಯಾನ ಮತ್ತಿತರ ಅಂಶಗಳ ಬಗ್ಗೆ ಸಂಸ್ಥೆಯು ವಾರದಲ್ಲಿ ಎರಡು ಬಾರಿ ವೆಬಿನಾರ್ ಕೂಡ ಆಯೋಜಿಸುತ್ತಿದೆ.

'ಕೋವಿಡ್ ಲಸಿಕೆ- ಅಪಪ್ರಚಾರ ಮಾಡಿದ್ದು ವಿಪಕ್ಷಗಳು'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಕೋವಿಡ್ ಲಸಿಕೆ ಬಗ್ಗೆ ಅಪಪ್ರಚಾರ ಮಾಡಿ ಜನರಲ್ಲಿ ಸಂಶಯದ ವಾತಾವರಣ ಉಂಟುಮಾಡಿದ್ದು ವಿಪಕ್ಷಗಳು' ಎಂದು ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಹರಿಹಾಯ್ದರು.

ಹಾವನೂರು ಬಡಾವಣೆಯಲ್ಲಿ ಮಾಜಿ ಶಾಸಕ ಎಸ್. ಮುನಿರಾಜು ನೇತೃತ್ವದಲ್ಲಿ ಬಿಜೆಪಿ ಮುಖಂಡರು ಆಯೋಜಿಸಲಾದ ಉಚಿತ 3 ಆಂಬುಲೆನ್ಸ್ ಸೇವೆ ಮತ್ತು ಕ್ಷೇತ್ರದ ವ್ಯಾಪ್ತಿ 6 ಟ್ರಾಕ್ಟರ್‌ನಲ್ಲಿ ಔಷಧಿ ಸಿಂಪಡಣೆ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಲ್ಲಸಂದ್ರದ ಸರ್ಕಾರಿ ಆಸ್ಪತ್ರೆಗೆ ತೆರಳಿ ಔಷಧಿಗಳನ್ನು ಪರಿಶೀಲಿಸಿ ಲಸಿಕೆ ಪಡೆಯಲು ಬಂದವರಿಗೆ ಮಾಸ್ಕ್‌ಗಳನ್ನು ವಿತರಿಸಿದರು. ಬಾಗಲಗುಂಟೆ ವ್ಯಾಪ್ತಿಯಲ್ಲಿ ವಾರ್ ರೂಮ್ ಉದ್ಘಾಟಿಸಿ, ಬಿಜೆಪಿ ಮುಖಂಡ ಗುರುಪ್ರಸಾದ್ ನೇತೃತ್ವದಲ್ಲಿ ಕೋವಿಡ್ ರೋಗಿಗಳ ಮನೆಗೆ ಉಚಿತ ಊಟ, ಔಷಧಿ, ಆಕ್ಸಿಜನ್ ನೀಡುವ ಕಾರ್ಯಕ್ಕೆ ಚಾಲನೆ ನೀಡಿದರು.

ಮಾಜಿ ಶಾಸಕ ಎಸ್. ಮುನಿರಾಜು, ದಾಸರಹಳ್ಳಿ ಮಂಡಲ ಅಧ್ಯಕ್ಷ ಎನ್. ಲೋಕೇಶ್, ಬಿಜೆಪಿ ಮುಖಂಡರಾದ ಶೆಟ್ಟಿಹಳ್ಳಿ ಬಿ. ಸುರೇಶ್, ಸೌಂದರ್ಯ ಭಾರತ್, ಗುರುಪ್ರಸಾದ್ ನಟಗೌಡ, ಮಹಿಮಗೌಡ ಇದ್ದರು.

ತಜ್ಞರ ಸಮಿತಿ ರಚಿಸಲು ಹೊರಟ್ಟಿ ಆಗ್ರಹ

ಹುಬ್ಬಳ್ಳಿ: ಕೋವಿಡ್ ಮೂರನೇ ಅಲೆಗೆ ತುತ್ತಾದ ದೇಶಗಳಲ್ಲಿ ಮಕ್ಕಳ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರಿದೆ. ಆದ್ದರಿಂದ ರಾಜ್ಯ ಸರ್ಕಾರ ಈಗಲೇ ಎಚ್ಚೆತ್ತುಕೊಂಡು ಮೂರನೇ ಅಲೆಯ ಬಗ್ಗೆ ಅಧ್ಯಯನ ನಡೆಸಲು ವಿಶೇಷ ತಜ್ಞರ ಸಮಿತಿ ರಚಿಸಬೇಕು ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

ಮೂರನೇ ಅಲೆಯಿಂದ ಮಕ್ಕಳ ಮೇಲೆ ಬೀರಬಹುದಾದ ಪರಿಣಾಮಗಳು ಹಾಗೂ ಇದರ ಬಗ್ಗೆ ಯಾವುದೇ ಹೆಚ್ಚಿನ ಅಧ್ಯಯನ, ವರದಿಗಳು ಲಭ್ಯವಿಲ್ಲದ ಕಾರಣ ಸಮಿತಿ ರಚಿಸುವ ಅಗತ್ಯವಿದೆ. ತಜ್ಞರಿಂದ ಸಂಪೂರ್ಣವಾದ ವರದಿ ಪಡೆದು ಕೈಗೊಳ್ಳಬೇಕಾದ ಅವಶ್ಯಕ ಕ್ರಮಗಳ ಬಗ್ಗೆ ಪೋಷಕರಲ್ಲಿ ಜಾಗೃತಿ ಮೂಡಿಸಬೇಕು ಎಂದು ಆಗ್ರಹಿಸಿದ್ದಾರೆ. ನಾಡಿನ ಮಕ್ಕಳ ಹಿತದೃಷ್ಟಿಯಿಂದ ಈ ವಿಷಯವಾಗಿ ತಕ್ಷಣ ಸೂಕ್ತ ನಿರ್ಧಾರ ಕೈಗೊಳ್ಳಬೇಕೆಂದು ತಿಳಿಸಿದ್ದಾರೆ.

ಎರಡನೇ ಅಲೆಯಲ್ಲಿ 66 ಮಂದಿಗೆ ಸೋಂಕು ● ವಿಶ್ರಾಂತಿಯಲ್ಲಿರುವವರಿಗೆ ಕಾರಣ ಕೇಳಿ ನೋಟಿಸ್


ವಿಕ್ಟೋರಿಯಾ: ಶುಶ್ರೂಷಕರಿಗೆ ಆರೈಕೆ ಸವಾಲು

● ವರುಣ ಹೆಗಡೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರೋಗಿಗಳ ದಟ್ಟಣೆ ಉಂಟಾಗಿದೆ. ಇದರಿಂದಾಗಿ ಶುಶ್ರೂಷಕರ ಕೊರತೆ ಎದುರಾಗಿದ್ದು, ವಿಶ್ರಾಂತಿ ಅವಧಿಯಲ್ಲಿಯೂ ಕರ್ತವ್ಯಕ್ಕೆ ಹಾಜರಾಗಲು ಅವರಿಗೆ ಸೂಚಿಸಲಾಗುತ್ತಿದೆ.

ಕೋವಿಡ್ ಮೊದಲನೇ ಅಲೆ ಕಾಣಿಸಿಕೊಂಡ ಬಳಿಕ ಸೋಂಕಿತರಿಗೆ ಒಂದೆಡೆ ಚಿಕಿತ್ಸೆ ದೊರೆಯಬೇಕೆಂಬ ಉದ್ದೇಶದಿಂದ ವಿಕ್ಟೋರಿಯಾ ಆಸ್ಪತ್ರೆಯನ್ನು ಪೂರ್ಣ ಪ್ರಮಾಣದ ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಯಿತು. ಜೂನ್ ಬಳಿಕ ಸೋಂಕಿತರ ಸಂಖ್ಯೆ ಏರಿಕೆ ಕಂಡಿದ್ದರೂ ಕೋವಿಡ್ ಪೀಡಿತರು ಅಷ್ಟಾಗಿ ಅಸ್ವಸ್ಥರಾಗಿರದ ಕಾರಣ ವಿಶೇಷ ಆರೈಕೆ ಅಗತ್ಯವಿರಲಿಲ್ಲ. ಇದರಿಂದಾಗಿ ಆ ವೇಳೆ ಶುಶ್ರೂಷಕರಿಗೆ 7 ದಿನ ಸಾಂಸ್ಥಿಕ ಪ್ರತ್ಯೇಕ ವಾಸ ಹಾಗೂ 7 ದಿನ ಮನೆಯಲ್ಲೇ ಪ್ರತ್ಯೇಕವಾಸಕ್ಕೆ ಅವಕಾಶ ನೀಡಲಾಗುತ್ತಿತ್ತು. ಈಗ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾದ ಕಾರಣ ಕೋವಿಡ್ ಕರ್ತವ್ಯದಲ್ಲಿರುವವರಿಗೆ ಒಂದು ವಾರ ಮಾತ್ರ ವಿಶ್ರಾಂತಿಗೆ ಅವಕಾಶ ನೀಡಲಾಗುತ್ತಿದೆ.

ವಿಕ್ಟೋರಿಯಾ ಆವರಣದಲ್ಲಿರುವ



ವಿಕ್ಟೋರಿಯಾ ಆಸ್ಪತ್ರೆ

ಟ್ರಾಮಾ ಕೇರ್ ಸೆಂಟರ್, ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆಯಲ್ಲಿನ ಹಾಸಿಗೆಗಳನ್ನು ಕೂಡ ಕೋವಿಡ್ ಚಿಕಿತ್ಸೆಗೆ ಮೀಸಲಿಡಲಾಗಿದೆ. ಸದ್ಯ ಅಲ್ಲಿ 450ಕ್ಕೂ ಅಧಿಕ ಕೋವಿಡ್ ಪೀಡಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. 40 ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳು ಹಾಗೂ 60 ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು ಭರ್ತಿಯಾಗಿದೆ. ಹೆಚ್ಚಿನ ರೋಗಿಗಳು ತೀವ್ರ ಆರೋಗ್ಯ ಸಮಸ್ಯೆ ಹೊಂದಿರುವ ಕಾರಣ ಶುಶ್ರೂಷಕರಿಗೆ ವಿಶ್ರಾಂತಿ ಸಿಗದಂತಾಗಿದೆ.

40 ಮಂದಿಗೆ ನೋಟಿಸ್: ವಿಕ್ಟೋರಿಯಾ ಆಸ್ಪತ್ರೆಗೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗಳೆರಡರಿಂದಲೂ ಶುಶ್ರೂಷಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ. ಅದೇ ರೀತಿ, ಗುತ್ತಿಗೆ ಆಧಾರದ ಮೇಲೂ ನಿಯೋಜಿಸಿಕೊಳ್ಳಲಾಗಿದೆ. ಆರೋಗ್ಯ ಇಲಾಖೆಯಿಂದ ನೇಮಕವಾದವರಲ್ಲಿ ಬಹುತೇಕರು 10 ಹಾಗೂ ಅದಕ್ಕಿಂತ ಹೆಚ್ಚು ವರ್ಷಗಳ ಸೇವಾ ಅನುಭವ ಹೊಂದಿದ್ದಾರೆ. ಅವರನ್ನು ಕೋವಿಡ್ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿಲ್ಲ.

ಪ್ರಜಾವಾಣಿ ವಿಶೇಷ

ಇದರಿಂದ ಉಳಿದವರಿಗೆ ವಿಶ್ರಾಂತಿ ಸಿಗುತ್ತಿಲ್ಲ ಎಂಬ ಆರೋಪ ಕೂಡ ಶುಶ್ರೂಷಕರ ವಲಯದಿಂದ ಕೇಳಿ ಬಂದಿದೆ.

ಈ ನಡುವೆ, ಕರ್ತವ್ಯ ಪೂರೈಸಿ ಒಂದು ವಾರ ವಿಶ್ರಾಂತಿಗೆ ತೆರಳಿದ್ದ 60 ಶುಶ್ರೂಷಕರಿಗೆ ಐದನೇ ದಿನಕ್ಕೆ ಹಾಜರಾಗಲು ಸೂಚಿಸಿ ಹಾಗೂ ವಿವಿಧ ಕಾರಣಗಳಿಂದ ಕರ್ತವ್ಯಕ್ಕೆ ಬಾರದ 40 ಮಂದಿಗೆ ಕಾರಣ ಕೇಳಿ ಶೋಕಾಸ್ ನೋಟಿಸ್ ನೀಡಲಾಗಿದೆ.

‘ಆರೋಗ್ಯ ಇಲಾಖೆಯಡಿ ನೇಮಕರಾದವರಿಗೆ ಕೋವಿಡ್ ವಾರ್ಡ್‌ನಲ್ಲಿ ಕರ್ತವ್ಯಕ್ಕೆ ನಿಯೋಜಿಸುತ್ತಿಲ್ಲ. ತಾರತಮ್ಯ ಮಾಡಲಾಗುತ್ತಿದ್ದು, ಕೆಲವರಿಗೆ ಒಂದು ವಾರ ಕೆಲಸ ಮಾಡಿದ ಬಳಿಕ ಎರಡು ವಾರಗಳು ಕೂಡ ವಿಶ್ರಾಂತಿ ನೀಡಲಾಗುತ್ತಿದೆ. ಶುಶ್ರೂಷಕರ ಮೇಲ್ವಿಚಾರಕರು ತಮಗೆ ಬೇಕಾದವರಿಗೆ ಕೋವಿಡ್ ಸೇವೆಯಿಂದ ವಿನಾಯಿತಿ ನೀಡುತ್ತಿದ್ದಾರೆ. ಇದರಿಂದ ನಮಗೆ ಒಂದು ವಾರ ಕೂಡ ವಿಶ್ರಾಂತಿ ಸಿಗುತ್ತಿಲ್ಲ’ ಎಂದು ನೋಟಿಸ್ ಪಡೆದ ಶುಶ್ರೂಷಕರೊಬ್ಬರು ಬೇಸರ ವ್ಯಕ್ತಪಡಿಸಿದರು.

‘ಮೊದಲನೇ ಅಲೆಯಲ್ಲಿ ಪ್ರತ್ಯೇಕ 0ವಾಸಕ್ಕೆ ವ್ಯವಸ್ಥೆ ಇದ್ದ ಕಾರಣ ಕೆಲಸ ನಿಭಾಯಿಸಲು ಸಾಧ್ಯವಾಗುತ್ತಿತ್ತು. ಆದರೆ, ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಕೆಲಸದೊತ್ತಡ ಅಧಿಕವಾಗಿದೆ. ಈ ನಡುವೆ ನಡೆಯುತ್ತಿರುವ ತಾರತಮ್ಯದಿಂದ ಬೇಸತ್ತು ಹೋಗಿದ್ದೇವೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಶುಶ್ರೂಷಕರೊಬ್ಬರು ತಿಳಿಸಿದರು.

‘50 ವರ್ಷ ಮೇಲ್ಪಟ್ಟವರಿಗೆ ಸಮಸ್ಯೆ’

‘ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಎಂದು ಶುಶ್ರೂಷಕರ ಮೇಲೆ ತಾರತಮ್ಯ ಮಾಡಲು ಸಾಧ್ಯವಿಲ್ಲ. ರೋಗಿಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಕಾರಣ ಶುಶ್ರೂಷಕರು ಅಗತ್ಯ ಸಂಖ್ಯೆಯಲ್ಲಿ ಇರಬೇಕಾಗುತ್ತದೆ. ಆರೋಗ್ಯ ಇಲಾಖೆಯಡಿ ನೇಮಕವಾದವರಲ್ಲಿ ಬಹುತೇಕರು 50 ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ವಯಸ್ಸಿನವರು. ಕೋವಿಡ್ ಮೊದಲನೇ ಅಲೆ ಕಾಣಿಸಿಕೊಂಡು, ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಾಗ ಕೋವಿಡ್ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸಿದವರಿಗೆ ಎರಡರಿಂದ ಮೂರು ತಿಂಗಳು ವಿಶ್ರಾಂತಿ ನೀಡಿ, ವೇತನ ನೀಡಲಾಗಿತ್ತು’ ಎಂದು ಶುಶ್ರೂಷಕರ ಮೇಲ್ವಿಚಾರಕಿ ಕವಿತಾ ಎನ್. ತಿಳಿಸಿದರು.

‘ವಿವಿಧ ದೀರ್ಘಾವಧಿ ಕಾಯಿಲೆ ಎದುರಿಸುತ್ತಿರುವವರು, ಗರ್ಭಿಣಿಯರು, 50 ವರ್ಷ ಮೇಲ್ಪಟ್ಟವರು ಸೇರಿದಂತೆ ಕೆಲವರಿಗೆ ವಿನಾಯಿತಿ ನೀಡಬೇಕಾಗುತ್ತದೆ. ಅಷ್ಟಾಗಿಯೂ 50 ವರ್ಷ ಮೇಲ್ಪಟ್ಟ ಕೆಲವರು ಕೋವಿಡ್ ಸೇವೆಯಲ್ಲಿ ನಿರತರಾಗಿದ್ದಾರೆ. ಕುಟುಂಬದ ಸದಸ್ಯರು ಕೋವಿಡ್ ಪೀಡಿತರಾಗಿರುವ ಕಾರಣ, ಅನಾರೋಗ್ಯ ಸೇರಿದಂತೆ ವಿವಿಧ ಕಾರಣಗಳಿಂದ ಕೆಲವರು ಗೈರಾಗುತ್ತಿದ್ದಾರೆ. ಮಕ್ಕಳಿಗೆ ಅನಾರೋಗ್ಯ ಸೇರಿದಂತೆ ವಿವಿಧ ಕಾರಣಗಳನ್ನು ನೀಡಿದಾಗ ರಜೆ ನೀಡಬೇಕಾಗುತ್ತದೆ’ ಎಂದರು.

66 ಮಂದಿಗೆ ಸೋಂಕು

ಕೋವಿಡ್ ಕರ್ತವ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕರಲ್ಲಿ ಕೆಲವರು ಕೋವಿಡ್ ಪೀಡಿತರಾಗುತ್ತಿದ್ದಾರೆ. ಎರಡನೇ ಅಲೆ ಕಾಣಿಸಿಕೊಂಡ ಬಳಿಕವೇ 66 ಮಂದಿ ಸೋಂಕಿತರಾಗಿದ್ದಾರೆ. ಹಸಿರು ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಆರು ಮಂದಿಯೂ ಇದರಲ್ಲಿ ಸೇರಿದ್ದಾರೆ. ಇದರಿಂದಾಗಿ ಶುಶ್ರೂಷಕರ ಕೊರತೆ ಮತ್ತಷ್ಟು ಬಿಗಡಾಯಿಸಿದೆ. ಗುತ್ತಿಗೆ ಆಧಾರದಲ್ಲಿ ನೇಮಕವಾದವರಲ್ಲೂ ಕೆಲವರು ಕೆಲಸ ತೊರೆದಿದ್ದಾರೆ.



ಇರುವ ಶುಶ್ರೂಷಕರಲ್ಲಿಯೇ ಸಮಸ್ಯೆಯಾಗದಂತೆ ಕೋವಿಡ್ ಸೇವೆ ನೀಡಲಾಗುತ್ತಿದೆ. ಕ್ವಾರಂಟೈನ್‌ಗೆ ಕೂಡ ಯೋಜನೆ ರೂಪಿಸುತ್ತಿದ್ದೇವೆ.

ಡಾ.ಸಿ.ಆರ್. ಜಯಂತಿ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್

ನಗರದ ಕೋವಿಡ್ ಅಂಕಿ–ಅಂಶ

11,19,552 ▲	ಒಟ್ಟು ಪ್ರಕರಣಗಳು (9,08,462 ನಿನ್ನೆಯ ವಿವರ)
2,55,842 ▼	ಸಕ್ರಿಯ ಪ್ರಕರಣಗಳು
8,52,493 ▲	ಗುಣಮುಖರಾದವರು
11,216 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	7,494	▼
ಗುಣಮುಖ	12,407	▼
ಸಾವು	362	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಹಲ್ಲೆಗೆ ಖಂಡನೆ

ಬೆಂಗಳೂರು: ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ವೈದ್ಯರ ಮೇಲೆ ಕೋವಿಡ್ ಪೀಡಿತ ಮೃತ ವ್ಯಕ್ತಿಯ ಸಂಬಂಧಿಗಳು ನಡೆಸಿರುವ ಹಲ್ಲೆಯನ್ನು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಮಕ್ಕಳ ಆರೋಗ್ಯ ಸ್ಥಾಯಿ ಸಮಿತಿ ಖಂಡಿಸಿದೆ.

‘ಮಹಿಳಾ ವೈದ್ಯೆಯೊಬ್ಬರ ಮೇಲೆ ಹಲ್ಲೆ ನಡೆದಿರುವುದು ಖಂಡನೀಯ. ಇಂತಹ ಘಟನೆಗಳು ವೈದ್ಯರ ಆತ್ಮವಿಶ್ವಾಸ ಕುಗ್ಗಿಸಲಿದೆ. ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಿ, ಹಲ್ಲೆ ನಡೆಸಿದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಸಮಿತಿಯ ಅಧ್ಯಕ್ಷ ಡಾ. ಶ್ರೀನಿವಾಸ್ ಎಸ್. ಆಗ್ರಹಿಸಿದ್ದಾರೆ.



ಲಾಕ್‌ಡೌನ್‌ನಲ್ಲಿಯೂ ದಟ್ಟಣೆ!

ರಾಜ್ಯದಲ್ಲಿ ಲಾಕ್‌ಡೌನ್ ಜಾರಿಯಲ್ಲಿದೆ. ಆದರೆ, ಅಗತ್ಯ ಸರಕು ಸಾಗಣೆ ವಾಹನಗಳ ಸಂಚಾರಕ್ಕೆ ಅನುಮತಿ ನೀಡಲಾಗಿದೆ. ಸರಕು ಸಾಗಣೆ ವಾಹನಗಳು ಒಮ್ಮೆಲೆ ರಸ್ತೆಗೆ ಇಳಿದಿದ್ದರಿಂದ ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಭಾನುವಾರ ಸಂಚಾರ ದಟ್ಟಣೆ ಉಂಟಾಗಿತ್ತು – ಪ್ರಜಾವಾಣಿ ಚಿತ್ರ

ಗ್ಯಾರೇಜ್ ತೆರೆಯಲು ಅನುಮತಿ ನೀಡುವಂತೆ ಮಾಲೀಕರ ಒತ್ತಾಯ

ವಾಹನ ದುರಸ್ತಿಗೆ ಕರ್ತವ್ಯನಿರತರ ಪರದಾಟ

● ಮನೋಹರ್ ಎಂ.

ಬೆಂಗಳೂರು: ಲಾಕ್‌ಡೌನ್ ಜಾರಿಯಲ್ಲಿರುವ ಕಾರಣಕ್ಕೆ ನಗರದ ಗ್ಯಾರೇಜ್‌ಗಳು ಕಾರ್ಯನಿರ್ವಹಿಸುತ್ತಿಲ್ಲ. ಕೋವಿಡ್ ಕರ್ತವ್ಯದಡಿ ಹಾಗೂ ಅಗತ್ಯ ಸೇವೆಯಡಿ ಕಾರ್ಯನಿರ್ವಹಿಸುತ್ತಿರುವ ಬಹುತೇಕರು ಸ್ವಂತ ವಾಹನಗಳಲ್ಲೇ ಸಂಚರಿಸುತ್ತಿದ್ದು, ಮಾರ್ಗಮಧ್ಯೆ ಕೆಟ್ಟು ನಿಲ್ಲುವ ವಾಹನಗಳ ದುರಸ್ತಿಗೆ ಗ್ಯಾರೇಜ್‌ಗಳು ಲಭ್ಯವಿಲ್ಲದೇ ಸಮಸ್ಯೆ ಎದುರಿಸಬೇಕಾಗಿದೆ.

ಲಾಕ್‌ಡೌನ್‌ನಿಂದಾಗಿ ಸಾರ್ವಜನಿಕ ಬಸ್ ಸೇವೆ, ಆಟೊ ಹಾಗೂ ಕ್ಯಾಬ್ ಸೇವೆಗಳ್ಯಾವುವೂ ಲಭ್ಯ ಇಲ್ಲ. ಸರ್ಕಾರಿ ಸಿಬ್ಬಂದಿಗೆ ವಾಹನ ವ್ಯವಸ್ಥೆ ಮಾಡಲಾಗಿರುತ್ತದೆ. ಉಳಿದೆಲ್ಲರೂ ಸ್ವಂತ ವಾಹನಗಳನ್ನೇ ಅವಲಂಬಿಸಿದ್ದಾರೆ. ಕೋವಿಡ್ ಸೇವೆಗೆ ನಿಯೋಜನೆಗೊಂಡಿರುವ ವೈದ್ಯಕೀಯ ಸಿಬ್ಬಂದಿ, ವೈದ್ಯಕೀಯ ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ, ಗುತ್ತಿಗೆ ಸಿಬ್ಬಂದಿ, ಪೊಲೀಸರು, ಮಾಧ್ಯಮ ಸಂಸ್ಥೆಗಳಲ್ಲಿ ಕೆಲಸ ಮಾಡುವವರು, ಅಗತ್ಯ ಸೇವೆಯಡಿ ಜಲಮಂಡಳಿ, ಬೆಸ್ಕಾಂ ಸಿಬ್ಬಂದಿ, ಆಹಾರ ವಿತರಣೆ ಹಾಗೂ ಇ–ಕಾಮರ್ಸ್ ಸಿಬ್ಬಂದಿ ತಮ್ಮ ವಾಹನಗಳಲ್ಲೇ ಕರ್ತವ್ಯಕ್ಕೆ ತೆರಳುತ್ತಿದ್ದಾರೆ.

ವಾಹನಗಳನ್ನು ಕಾಲಕಾಲಕ್ಕೆ ನಿರ್ವಹಣೆ ಮಾಡಿದರೆ ಮಾತ್ರ ಅದು ಸುಸ್ಥಿತಿಯಲ್ಲಿರುತ್ತದೆ. ತಿಂಗಳಿಂದ ಗ್ಯಾರೇಜ್‌ಗಳೆಲ್ಲ ಮುಚ್ಚಿರುವ ಕಾರಣಕ್ಕೆ ವಾಹನಗಳ ಸ್ಥಿತಿಯನ್ನು ತಪಾಸಣೆಗೆ ಒಳಪಡಿಸಲೂ ಸಾಧ್ಯವಾಗುತ್ತಿಲ್ಲ. ಮಾರ್ಗ ಮಧ್ಯೆ ವಾಹನಗಳು ಕೆಟ್ಟು ನಿಲ್ಲುತ್ತಿವೆ. ದುರಸ್ತಿ ಮಾಡಲು ಮೆಕ್ಯಾನಿಕ್ ಸಿಗದೆ ಜನ ಪಡಿಪಾಟಲು ಎದುರಿಸಬೇಕಾಗಿದೆ.

‘ಎರಡು ತಿಂಗಳಿನಿಂದ ಕೋವಿಡ್ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದೇನೆ. ಪ್ರತಿದಿನ ಸ್ಕೂಟರ್‌ನಲ್ಲೇ ಕೆಲಸಕ್ಕೆ ತೆರಳುತ್ತಿದ್ದೆ. ಕಳೆದ ವಾರ ಮಾರ್ಗಮಧ್ಯೆ ಸ್ಕೂಟರ್ ಕೆಟ್ಟು ನಿಂತಿತು. ಹತ್ತಿರದಲ್ಲಿ ಯಾವುದೇ ಗ್ಯಾರೇಜ್ ತೆರೆದಿರಲಿಲ್ಲ. ಕೊನೆಗೆ ಪತಿಯನ್ನು ಕರೆಸಿಕೊಂಡು, ಕೆಲಸದ ಸ್ಥಳಕ್ಕೆ ತೆರಳಿದೆ’ ಎಂದು ಕೋವಿಡ್ ಕರ್ತವ್ಯದಲ್ಲಿರುವ ಶಿಕ್ಷಕಿ ಗೀತಾ ತಮಗಾದ ಪರಿಸ್ಥಿತಿಯನ್ನು ಹೇಳಿಕೊಂಡಿದರು.

‘ಸಂಚಾರಕ್ಕೆ ಸಾರಿಗೆ ವ್ಯವಸ್ಥೆಇಲ್ಲ. ನನಗೆ ಪಾಸ್ ಇರುವುದರಿಂದ ಸಂಚಾರಕ್ಕೆ ಸಮಸ್ಯೆಯಿಲ್ಲ. ಪತಿಯೊಂದಿಗೆ ವಾಹನದಲ್ಲಿ ತೆರಳಲು ಪೊಲೀಸರು ಬಿಡುವುದಿಲ್ಲ. ಗ್ಯಾರೇಜ್‌ಗಳು ಲಭ್ಯವಿದ್ದರೆ, ಇಂತಹ ಫಜೀತಿಗಳು ಎದುರಾಗುವುದಿಲ್ಲ’ ಎಂದು ಸಲಹೆ ನೀಡಿದರು.

‘ಲಾಕ್‌ಡೌನ್ ಇರುವುದರಿಂದ ಆನ್‌ಲೈನ್ ಮೂಲಕ ಆಹಾರ ತರಿಸಿಕೊಳ್ಳುವ ಪ್ರಮಾಣ ಹೆಚ್ಚಾಗಿದೆ. ಬೆಳಿಗ್ಗೆ 9ರಿಂದ ರಾತ್ರಿವರೆಗೂ ಬೈಕ್‌ನಲ್ಲೇ ತೆರಳಿ ಗ್ರಾಹಕರಿಗೆ ಆಹಾರ ವಿತರಿಸುತ್ತೇನೆ. ಈಗ ಬೈಕ್ ಅನ್ನು ಸರ್ವೀಸ್‌ಗೆ ಬಿಡಬೇಕಿತ್ತು. ಆದರೆ, ಯಾವುದೇ ಗ್ಯಾರೇಜ್ ಹಾಗೂ ಸರ್ವೀಸ್ ಕೇಂದ್ರಗಳು ತೆರೆದಿಲ್ಲ. ಗಾಡಿ ಎಲ್ಲಿ ನಿಂತುಬಿಡುತ್ತದೆಯೋ ಎಂಬ ಆತಂಕದಲ್ಲೇ ಸಂಚರಿಸುತ್ತಿದ್ದೇನೆ’ ಎನ್ನುತ್ತಾರೆ ಆಹಾರ ಪೂರೈಸುವ ಡೆಲಿವರಿ ಸಿಬ್ಬಂದಿ ಪ್ರೀತಮ್.

‘ನಗರದ ವಿವಿಧೆಡೆ ಕರ್ತವ್ಯಕ್ಕೆ ನಿಯೋಜಿಸುತ್ತಾರೆ. ಬೈಕ್ ಸರ್ವೀಸ್ ವಿಳಂಬವಾಯಿತು. ಸಣ್ಣಪುಟ್ಟ ರಿಪೇರಿಯೂ ಇದೆ. ಗ್ಯಾರೇಜ್‌ಗಳು ಇಲ್ಲದಿರುವುದರಿಂದ ರಸ್ತೆಯಲ್ಲಿ ಹೋಗುವ ವಾಹನಗಳನ್ನು ಅಡ್ಡಗಟ್ಟಿ, ಅವರ ವಾಹನದಲ್ಲೇ ಸಂಚರಿಸುತ್ತಿದ್ದೇನೆ’ ಎಂದು ಹೆಸರು ಹೇಳಲು ಇಚ್ಛಿಸದ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ಸಂಕಟ ಹೇಳಿಕೊಂಡರು.



ಗ್ಯಾರೇಜ್‌ಗಳು ಮುಚ್ಚಿರುವುದರಿಂದ ಕೆ.ಆರ್‌.ಮಾರುಕಟ್ಟೆ ಬಳಿ ಕೋವಿಡ್ ಕರ್ತವ್ಯಕ್ಕೆ ತೆರಳುತ್ತಿದ್ದ ಸಿಬ್ಬಂದಿ ರಿಪೇರಿಯಾಗಿದ್ದ ಬೈಕ್ ತಳ್ಳುತ್ತಾ ಸಾಗಿದರು —ಪ್ರಜಾವಾಣಿ ಚಿತ್ರ



ವಾಹನ ರಿಪೇರಿಗಾಗಿ ಹಲವರು ಕರೆ ಮಾಡುತ್ತಾರೆ. ಗ್ಯಾರೇಜ್ ತೆರೆಯಲು ಅವಕಾಶ ಇಲ್ಲದಿರುವುದರಿಂದ ಕುಟುಂಬ ನಿರ್ವಹಣೆ ಕಷ್ಟವಾಗಿದೆ.

ಮಂಜುನಾಥ್
ಗ್ಯಾರೇಜ್ ಮಾಲೀಕ, ಕತ್ರಿಗುಪ್ಪೆ

ಆನ್‌ಲೈನ್ ಮೂಲಕ ವಸ್ತುಗಳ ಖರೀದಿ ಹೆಚ್ಚಾಗಿದೆ. ಬೈಕ್ ರಿಪೇರಿಗೆ ಬಂದಿದೆ. ಗ್ಯಾರೇಜ್‌ಗಳನ್ನು ತೆರೆದರೆ, ಬೈಕ್ ಸುಸ್ಥಿತಿಯಲ್ಲಿಡಬಹುದು.

ಪ್ರತಾಪ್, ಇ–ಕಾಮರ್ಸ್ ಸಿಬ್ಬಂದಿ

‘ಜೀವನ ನಿರ್ವಹಣೆಗೆ ಸಮಸ್ಯೆ’

‘ಗ್ಯಾರೇಜ್‌ಗಳಲ್ಲಿ ಹೆಚ್ಚೆಂದರೆ ಮೂರು ಜನ ಕಾರ್ಯನಿರ್ವಹಿಸುತ್ತಾರೆ. ತುರ್ತು ಅಗತ್ಯವಿದ್ದವರಿಗೆ ವಾಹನ ರಿಪೇರಿ ಮಾಡುವುದಕ್ಕಾದರೂ ಸರ್ಕಾರ ಗ್ಯಾರೇಜ್‌ಗಳು ಕಾರ್ಯನಿರ್ವಹಿಸಲು ಅನುಮತಿ ನೀಡಬೇಕು’ ಎಂದು ಕರ್ನಾಟಕ ದ್ವಿಚಕ್ರ ವಾಹನ ಕಾರ್ಯಗಾರ ಮಾಲೀಕರ ಮತ್ತು ತಂತ್ರಜ್ಞರ ಸಂಘದ ಅಧ್ಯಕ್ಷ ಕೆ.ಎಸ್.ಪ್ರಸನ್ನ ಕುಮಾರ್ ಒತ್ತಾಯಿಸಿದರು.

‘ರಾಜ್ಯದಲ್ಲಿ ಸುಮಾರು ನಾಲ್ಕು ಲಕ್ಷ ಗ್ಯಾರೇಜ್‌ಗಳಿವೆ. ಬೆಂಗಳೂರಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಗ್ಯಾರೇಜ್‌ಗಳನ್ನು ನಡೆಸುತ್ತಿದ್ದಾರೆ. ಲಾಕ್‌ಡೌನ್‌ನಿಂದಾಗಿ ಇವರಿಗೆ ಜೀವನ ನಿರ್ವಹಣೆ ಕಷ್ಟವಾಗಿದೆ. ಕೋವಿಡ್ ಕರ್ತವ್ಯಗಳಿಗೆ ವಾಹನಗಳಲ್ಲಿ ತೆರಳುವ ಸಿಬ್ಬಂದಿಗೂ ಗ್ಯಾರೇಜ್‌ಗಳ ಅಗತ್ಯವಿದೆ. ಸರ್ಕಾರ ಅನುಮತಿ ನೀಡಿದರೆ, ಇವರಿಗೂ ಅನುಕೂಲ. ಮೆಕ್ಯಾನಿಕ್‌ಗಳ ಹೊಟ್ಟೆಯೂ ತುಂಬುತ್ತದೆ’ ಎಂದು ಹೇಳಿದರು.

‘ಪೊಲೀಸರು ಕಳೆದ ಲಾಕ್‌ಡೌನ್‌ನಲ್ಲಿ ವಾಹನ ರಿಪೇರಿಗೆ ಅವಕಾಶ ನೀಡಿದ್ದರು. ಈಗಲೂ ಅವಕಾಶ ನೀಡಿದರೆ, ಸೇವೆ ನೀಡಲು ಸಿದ್ಧ. ಸಂಜೆಯವರೆಗೆ ಕೆಲಸ ಮಾಡಲು ಅನುವು ಮಾಡಿಕೊಡಬೇಕು. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಎಲ್ಲ ಮೆಕ್ಯಾನಿಕ್‌ಗಳಿಗೆ ಸರ್ಕಾರ ಉಚಿತ ಲಸಿಕೆ, ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ₹5 ಲಕ್ಷ ಪರಿಹಾರ ನೀಡಬೇಕು’ ಎಂದರು.

ಮಕ್ಕಳಿಗಾಗಿ ಆರೈಕೆ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಮಕ್ಕಳಲ್ಲಿಯೂ ಸೋಂಕು ಕಾಣಿಸಿಕೊಳ್ಳುತ್ತಿದೆ. ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಸಹಯೋಗದೊಂದಿಗೆ ಹಲವು ಸಂಘ–ಸಂಸ್ಥೆಗಳು, ಆಸ್ಪತ್ರೆಗಳು ಸೇರಿ ಮಕ್ಕಳಿಗಾಗಿಯೇ ಕೋವಿಡ್ ಆರೈಕೆ ಕೇಂದ್ರಗಳನ್ನು ತೆರೆದಿದ್ದು, ಸೇವೆ ಸಂಪೂರ್ಣ ಉಚಿತವಾಗಿದೆ.

ಡ್ರೀಮ್ ಇಂಡಿಯಾ ನೆಟ್‌ವರ್ಕ್, ಮದರ್‌ಹುಡ್ ಆಸ್ಪತ್ರೆ, ರೇನ್‌ಬೋ ಮಕ್ಕಳ ಆಸ್ಪತ್ರೆ, ವೈಟ್‌ಫೀಲ್ಡ್ ರೈಸಿಂಗ್, ಮಕ್ಕಳ ತಜ್ಞರು, ಸಮಾನ ಮನಸ್ಕರು ಸೇರಿ ನಗರದಲ್ಲಿ ಇಂತಹ ನಾಲ್ಕು ಕೇಂದ್ರಗಳನ್ನು ಸ್ಥಾಪಿಸಿದ್ದಾರೆ.

ಮಕ್ಕಳ ಪೋಷಕರು ಕೋವಿಡ್ ಪೀಡಿತರಾಗಿದ್ದರೆ ಅಥವಾ ಪೋಷಕರನ್ನೇ ಕಳೆದುಕೊಂಡ ಮಕ್ಕಳಿಗೆ ಈ ಆರೈಕೆ ಕೇಂದ್ರಗಳಿಗೆ ದಾಖಲಿಸಿಕೊಳ್ಳಲಾಗುತ್ತದೆ. ಇಂತಹ ಮಕ್ಕಳನ್ನ ಮೊದಲು, ಮಕ್ಕಳ ಆರೈಕೆ ಸಂಸ್ಥೆಗಳಿಗೆ (ಸಿಸಿಐ) ಕಳಿಸಲಾಗುತ್ತದೆ. ನಂತರ 1098ಗೆ ಕರೆ ಮಾಡಿ ಆ ಸಹಾಯವಾಣಿಗೆ ಮಾಹಿತಿ ನೀಡಿ ಅಥವಾ ಮಕ್ಕಳ ಕಲ್ಯಾಣ ಸಮಿತಿಗಳಲ್ಲಿರುವವರನ್ನು ಕೇಂದ್ರಕ್ಕೆ ದಾಖಲಿಸಿಕೊಳ್ಳಲಾಗುತ್ತದೆ.

ಪೋಷಕರಿಬ್ಬರೂ ಪಾಸಿಟಿವ್ ಆಗಿದ್ದು, ಮನೆ ಆರೈಕೆಗೆ ಸೂಕ್ತ ಸೌಲಭ್ಯವಿಲ್ಲದಿದ್ದರೆ ಅಂಥವರ ಮಕ್ಕಳಿಗೂ ಈ ಕೇಂದ್ರಗಳಲ್ಲಿ ಪ್ರವೇಶವಿದೆ.

ಕೋವಿಡ್‌ಗೆ ತುತ್ತಾಗಿದ್ದರೂ ಪಾಸಿಟಿವ್ ವರದಿ ಇರದ ಮಕ್ಕಳಿಗೆ ಆರೈಕೆ ಮಾಡುವುದಲ್ಲದೆ, ಮಕ್ಕಳ ವರದಿ ನೆಗೆಟಿವ್ ಬರುವವರೆಗೆ ಆಶ್ರಯ ನೀಡಲಾಗುತ್ತದೆ. 6ರಿಂದ 11, 12ರಿಂದ 18 ವರ್ಷದ ಬಾಲಕ–ಬಾಲಕಿಯರಿಗೆ ಹಾಗೂ 12ರಿಂದ 18ವರ್ಷದ ಬಾಲಕರಿಗೆ ಪ್ರತ್ಯೇಕ ಆರೈಕೆ ಕೇಂದ್ರಗಳನ್ನು ಮಾಡಲಾಗುತ್ತದೆ.

ಈ ಕೇಂದ್ರಗಳ ಮಾಹಿತಿಗೆ, 73062–30034 ಅಥವಾ 91108–29548 ಅಥವಾ ಮಕ್ಕಳ ಸಹಾಯವಾಣಿ 1098 ಸಂಪರ್ಕಿಸಬಹುದು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	16.73 ಕೋಟಿ ▲	2.67 ಕೋಟಿ ▲
ಸಕ್ರಿಯ ಪ್ರಕರಣ	1.55 ಕೋಟಿ ▼	27.30 ಲಕ್ಷ ▼
ಗುಣಮುಖ	14.83 ಕೋಟಿ ▲	2.36 ಕೋಟಿ ▲
ಸಾವು	34.75 ಲಕ್ಷ ▲	3.03 ಲಕ್ಷ ▲

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	5.71 ಲಕ್ಷ ▼	2,09,243 ▼
ಗುಣಮುಖ	7.22 ಲಕ್ಷ ▲	2,75,156 ▼
ಸಾವು	10,830 ▼	4,056 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಅಮೆರಿಕ	ಫ್ರಾನ್ಸ್
71,283 ▲	19,639 ▼	12,611 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಫ್ರಾನ್ಸ್
58.07 ▲	11.36 ▲	2.89 ▼

(*ರಾತ್ರಿ 12.00 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	88,620 ▲
ತಮಿಳುನಾಡು	20,468 ▲
ದೆಹಲಿ	23,202 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	55.79 ▲
ಕೇರಳ	23.47 ▲
ಉತ್ತರ ಪ್ರದೇಶ	18.42 ▲

ಪ್ರಜಾವಾಣಿ ಗ್ರಾಫಿಕ್ಸ್

‘ಕೋವಿಡ್: ಮಕ್ಕಳ ಸಾವು ತೀರಾ ವಿರಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿರುತ್ತದೆ. ಹೀಗಾಗಿ ಅವರು ಕೋವಿಡ್‌ನಿಂದ ಮೃತಪಡುವುದು ತೀರಾ ವಿರಳ’ ಎಂದು ಕೆನಡಾದಲ್ಲಿ ನೆಲೆಸಿರುವ ಮಕ್ಕಳ ತಜ್ಞ ಡಾ.ಸಾಕೇತ್ ರಾಮ್ ತಿಳಿಸಿದರು.

ಜನಸಹಾಯ ಸಂಸ್ಥೆ ಆನ್‌ಲೈನ್ ಮೂಲಕ ಭಾನುವಾರ ಹಮ್ಮಿಕೊಂಡಿದ್ದ ‘ಕೋವಿಡ್ ಕಾಲದಲ್ಲಿ ಮಕ್ಕಳ ಆರೋಗ್ಯ’ ವಿಷಯದ ಕುರಿತ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

‘ಅಸ್ತಮಾ, ಮಧುಮೇಹ ಇರುವ ಮಕ್ಕಳಿಗೆ ಸೋಂಕು ತಗುಲಿದರೆ ಅಪಾಯ ಹೆಚ್ಚು. ಎಚ್‌ಐವಿ ಪೀಡಿತ ಮಕ್ಕಳಿಗೂ ತೊಂದರೆ ಅಧಿಕ. ಅಂತಹ ಮಕ್ಕಳಿಗೆ ವಿಶೇಷ ಆರೈಕೆ ಅಗತ್ಯ. ಶೇ 80ರಷ್ಟು ಮಕ್ಕಳಿಗೆ ಸೌಮ್ಯ ಸ್ವಭಾವದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅವರಿಗೆ ಮನೆಯಲ್ಲೇ ಚಿಕಿತ್ಸೆ ನೀಡಬೇಕು. ಅವರ ಆರೋಗ್ಯದ ಮೇಲೆ ನಿಗಾ ಇಡಬೇಕು. ಮಗುವು ಹಾಲು ಮತ್ತು ನೀರು ತ್ಯಜಿಸಿದ್ದು ಕಂಡುಬಂದರೆ ಆಸ್ಪತ್ರೆಗೆ ದಾಖಲಿಸಬೇಕು. ಅಪ್ಪ, ಅಮ್ಮ ಅಥವಾ ಕುಟುಂಬದ ಸದಸ್ಯರೊಬ್ಬರು ಸೋಂಕಿತ ಮಗುವಿನ ಆರೈಕೆಯಲ್ಲಿ ತೊಡಗಿಕೊಂಡರೆ ಸಾಕು’ ಎಂದರು.

‘ಕೋವಿಡ್ ಪೀಡಿತ ಮಹಿಳೆ ತನ್ನ ಮಗುವಿಗೆ ಎದೆಹಾಲು ಕುಡಿಸಲು ಯಾವುದೇ ಅಭ್ಯಂತರವಿಲ್ಲ. ಹಾಲುಣಿಸುವ ವೇಳೆ ಮುಖಗವಸು ಧರಿಸಬೇಕಷ್ಟೆ. ಈಗಿನ ಪರಿಸ್ಥಿತಿಯಲ್ಲಿ ತಪಾಸಣೆಗಾಗಿ ಮಕ್ಕಳನ್ನು ಆಸ್ಪತ್ರೆಗೆ ಕರೆದೊಯ್ಯುವುದು ಕಷ್ಟ. ಹೀಗಾಗಿ ಆನ್‌ಲೈನ್ ಮೂಲಕವೇ ವೈದ್ಯರನ್ನು ಸಂಪರ್ಕಿಸಿ ಅವರ ಸಲಹೆ, ಸೂಚನೆ ಪಾಲಿಸಬೇಕು. ಮಗು ಈಗಾಗಲೇ ಬೇರೊಂದು ಕಾಯಿಲೆಯಿಂದ ಬಳಲುತ್ತಿದ್ದರೆ ಅದಕ್ಕೆ ನೀಡುತ್ತಿರುವ ಚಿಕಿತ್ಸೆ ಮುಂದುವರಿಬೇಕು’ ಎಂದೂ ಹೇಳಿದರು.

‘ಕೆಮ್ಮು, ಶೀತ, ಜ್ವರ ಇರುವ ಮಕ್ಕಳು ಬೇರೆಯವರೊಂದಿಗೆ ಬೆರೆಯಬಾರದು. ಕೋವಿಡ್‌ನಿಂದ ಗುಣಮುಖರಾದವರಿಗೆ ಮತ್ತೊಮ್ಮೆ ಸೋಂಕು ತಗಲುವುದು ತೀರಾ ವಿರಳ. ಮೂರನೇ ಅಲೆ ತಡೆಯಬೇಕಾದರೆ ಎಲ್ಲರೂ ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕು. ಜೊತೆಗೆ ಸರ್ಕಾರ ಸೂಚಿಸಿರುವ ಕೋವಿಡ್ ಮಾರ್ಗಸೂಚಿಗಳನ್ನೂ ಕಟ್ಟುನಿಟ್ಟಾಗಿ ಪಾಲಿಸಬೇಕು. ಶೀತಜ್ವರ ಇದ್ದವರು 15 ದಿನಗಳವರೆಗೆ ಪ್ರತ್ಯೇಕ ವಾಸದಲ್ಲಿರಬೇಕು’ ಎಂದರು.

ಐಐಎಸ್‌ಸಿ ನ್ಯಾನೊ ಎಂಜಿನಿಯರಿಂಗ್ ವಿಭಾಗದಿಂದ ಅಭಿವೃದ್ಧಿ

ಪ್ರತಿಕಾಯ ಪತ್ತೆಗೆ ‘ಅಂಗೈ ಪ್ರಯೋಗಾಲಯ’!

● ಎಸ್. ರವಿಪ್ರಕಾಶ್

ಬೆಂಗಳೂರು: ಮಾನವ ದೇಹದಲ್ಲಿ ಕೊರೊನಾ ವೈರಾಣುವಿನ ವಿರುದ್ಧ ಯುದ್ಧ ಮಾಡಲು ‘ಪ್ರತಿಕಾಯ’ (ಆಂಟಿ ಬಾಡೀಸ್) ಗಳೆಂಬ ‘ಸೈನಿಕರು’ ಇದ್ದಾರೆಯೇ ಎಂಬುದನ್ನು ಪತ್ತೆ ಮಾಡಲು ‘ಅಂಗೈ ಪ್ರಯೋಗಾಲಯ’ ಸಿದ್ಧವಾಗಿದೆ.

ಇಂತಹದ್ದೊಂದು ಸಾಧನೆ ಮಾಡಿರುವುದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನ್ಯಾನೊ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ ವಿಭಾಗ.

ಕೋವಿಡ್‌ನಿಂದ ಬಾಧಿತರಾಗಿ ಗುಣಮುಖರಾದವರು ಮತ್ತು ಕೋವಿಡ್ ಲಕ್ಷಣಗಳು ಇಲ್ಲದ ಸೋಂಕಿತರಲ್ಲಿ ಪ್ರತಿಕಾಯಗಳು ಸೃಷ್ಟಿ ಆಗಿವೆಯೇ ಎಂಬುದನ್ನು ಅತ್ಯಂತ ತ್ವರಿತಗತಿಯಲ್ಲಿ ಮತ್ತು ನಿಖರವಾಗಿ ಮೊಬೈಲ್ ಸೆಟ್ ಗಾತ್ರದ ಅಂಗೈ ಪ್ರಯೋಗಾಲಯ (ಲ್ಯಾಬ್ ಆನ್ ಪಾಮ್) ಪರೀಕ್ಷಾ ವರದಿ ನೀಡಬಲ್ಲದು. ಅಲ್ಲದೆ, ಯಾವುದೇ ವ್ಯಕ್ತಿಯೂ ಪ್ರತಿಕಾಯಗಳ ಪರೀಕ್ಷೆ ಮಾಡಿಸಿಕೊಳ್ಳಬಹುದು.

‘ಇದಕ್ಕೆ ಒಂದು ಹನಿ ರಕ್ತ ಇದ್ದರೆ ಸಾಕು. ಪ್ರತಿಕಾಯಗಳನ್ನು ಭಾಗಶಃ ಪ್ರಮಾಣ ವಿಶ್ಲೇಷಣೆಯಿಂದ (ಸೆಮಿ ಕ್ವಾಂಟಿಟೇಟೀವ್) ಪ್ರತಿಕಾಯಗಳ (ಐಜಿಎಂ ಮತ್ತು ಐಜಿಜಿ) ಸಾಂದ್ರತೆಯನ್ನು ನಿಖರತೆ ತಿಳಿದುಕೊಳ್ಳಲು ಸಾಧ್ಯ. ಇದರಿಂದ ವ್ಯಕ್ತಿಗೆ ಮತ್ತೊಮ್ಮೆ ಕೊರೊನಾ ವೈರಾಣು ದಾಳಿ ಮಾಡಿದರೆ, ಅದನ್ನು ತಡೆಗಟ್ಟಲು ‘ಸೈನಿಕರು’ (ಪ್ರತಿಕಾಯಗಳು) ಸಜ್ಜಾಗಿದ್ದಾರೆಯೇ ಇಲ್ಲವೇ ಎಂಬುದರ ನಿರ್ಧಾರಕ್ಕೆ ಬರಬಹುದು’ ಎನ್ನುತ್ತಾರೆ ಭಾರತೀಯ ವಿಜ್ಞಾನ ಸಂಸ್ಥೆಯ ನ್ಯಾನೊ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ ಕೇಂದ್ರದ ಪ್ರಾಧ್ಯಾಪಕ ಮತ್ತು ಅಂತರ್‌ಶಿಸ್ತು ವಿಜ್ಞಾನಗಳ ವಿಭಾಗದ ಡೀನ್ ಪ್ರೊ.ನವಕಾಂತ್ ಭಟ್.

‘ದೇಹದಲ್ಲಿ ಪ್ರತಿಕಾಯಗಳು ಬೆಳೆದಿವೆಯೇ ಎಂಬುದನ್ನು ಪತ್ತೆ ಮಾಡಿಸಲು ಈಗ ಅತಿ ದುಬಾರಿ ಪ್ರಯೋಗಾಲಯಗಳಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಪ್ರತಿ ಪರೀಕ್ಷೆಗೆ ₹700 ರಿಂದ ₹1,000 ದಷ್ಟು ಖರ್ಚಾಗುತ್ತದೆ. ಇದಕ್ಕೆ ಬಳಸುವ ಪರೀಕ್ಷಾ ಯಂತ್ರಗಳ ಬೆಲೆಯೂ ಕೋಟಿಗಟ್ಟಲೆ ಇದೆ. ಅಂತಹ ದೊಡ್ಡ ಯಂತ್ರದ ಮಾದರಿ, ಸಾಮರ್ಥ್ಯವನ್ನು ನಾವು ಅಂಗೈ ಅಗಲದಷ್ಟು ಕುಗ್ಗಿಸಿದ್ದೇವೆ. ಅಲ್ಲಿ ಪಡೆಯಬಹುದಾದ ಪರೀಕ್ಷಾ ಫಲಿತಾಂಶವನ್ನು ಐದು ನಿಮಿಷಗಳಲ್ಲಿಯೇ ಪಡೆಯಬಹುದು’ ಎಂದು ಅವರು ವಿವರಿಸಿದರು.

‘ಇದರ ಬಳಕೆ ಅತ್ಯಂತ ಸುಲಭ. ಹಳ್ಳಿ ಹಳ್ಳಿಗೂ ಒಯ್ದು ಜನರಲ್ಲಿ ಪ್ರತಿಕಾಯ ಪರೀಕ್ಷೆ ನಡೆಸಬಹುದು. ಟೆಸ್ಟಿಂಗ್ ಸ್ಟ್ರಿಪ್ ಮೂಲಕ ವ್ಯಕ್ತಿಯಿಂದ ರಕ್ತ ಪಡೆದು ಸಾಧನದ ಒಳಗೆ ತೂರಿಸಿದರೆ ಸಾಕು. ಫಲಿತಾಂಶ ಸಿದ್ಧ. ಈ ಸಾಧನಕ್ಕೆ ಅಮೆರಿಕದಲ್ಲಿ ಪೇಟೆಂಟ್ ಕೂಡ ಪಡೆಯಲಾಗಿದೆ’ ಎಂದು ನವಕಾಂತ್ ಭಟ್ ಹೇಳಿದರು.

‘ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ’ (ಸಿಡಿಎಸ್‌ಸಿಒ), ಫರೀದಾಬಾದ್‌ನ ‘ಟ್ರಾನ್ಸ್‌ಲೇಷನ್ ಹೆಲ್ತ್ ಸೈನ್ಸ್ ಅಂಡ್ ಟೆಕ್ನಾಲಜಿ ಇನ್‌ಸ್ಟಿಟ್ಯೂಟ್’ ಈ ಸಾಧನವನ್ನು ಮೌಲ್ಯಮಾಪನಕ್ಕೆ ಒಳಪಡಿಸಿದ ಬಳಿಕ ಇದರ ತಯಾರಿಕೆಗೆ ಐಸಿಎಂಆರ್ ಪರವಾನಗಿ ನೀಡಿದೆ. ಐಐಎಸ್‌ಸಿಯ ‘ಪಥ್‌ಶೋಧ್ ಹೆಲ್ತ್ ಕೇರ್’ ನವೋದ್ಯಮದ ಮೂಲಕ ಇವುಗಳ ಉತ್ಪಾದನೆ ಆರಂಭಿಸಲಾಗುವುದು ಎಂದು ತಿಳಿಸಿದರು.



ಪ್ರತಿಕಾಯ ಪತ್ತೆ ಮಾಡುವ ಸಾಧನ



ಇದೊಂದು ಸರಳ, ಕಡಿಮೆ ವೆಚ್ಚದ ಕ್ರಾಂತಿಕಾರಿ ಸಾಧನ. ಸರ್ಕಾರ, ಖಾಸಗಿ ಆಸ್ಪತ್ರೆಗಳು, ಪ್ರಯೋಗಾಲಯಗಳು ಇದರ ಪ್ರಯೋಜನ ಪಡೆಯಬಹುದು

ಪ್ರೊ.ನವಕಾಂತ್ ಭಟ್
ನ್ಯಾನೊ ವಿಜ್ಞಾನಿ, ಐಐಎಸ್‌ಸಿ

2ನೇ ಹಂತದಲ್ಲಿ ಕೊರೊನಾ ವೈರಾಣು ಪತ್ತೆ

ಇದೇ ಸಾಧನದ ಮೂಲಕ ಪ್ರತಿಕಾಯಗಳ ಜತೆಗೆ ಕೊರೊನಾ ವೈರಾಣುವನ್ನು ಪತ್ತೆ ಮಾಡುವ ಆಯ್ಕೆಯನ್ನು ಅಳವಡಿಸಲಾಗುವುದು. ಇದಕ್ಕೆ ಇನ್ನು ಸ್ವಲ್ಪ ಸಮಯ ಬೇಕು. ಕೊರೊನಾ ವೈರಾಣು ಅಲ್ಲದೇ ವಿವಿಧ ಬಗೆಯ ವೈರಾಣುಗಳನ್ನು ಪತ್ತೆ ಮಾಡುವ ಸಮಗ್ರ ವ್ಯವಸ್ಥೆಯನ್ನು ಅಂಗೈ ಪ್ರಯೋಗಾಲಯಕ್ಕೆ ಭವಿಷ್ಯದಲ್ಲಿ ಸೇರಿಸಲಾಗುವುದು.

ಕಳೆದ ವರ್ಷ ಅಂಗೈ ಪ್ರಯೋಗಾಲಯ ಯೋಜನೆ ಆರಂಭಿಸಿದ್ದೆವು. ಕೊರೊನಾ ಬಂದ ಕಾರಣ, ಪ್ರತಿಕಾಯ ಪತ್ತೆ ಮಾಡುವ ಪರೀಕ್ಷೆಯ ಕಡೆಗೆಗಮನ ಹರಿಸಿದೆವು. ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಈ ಸಾಧನದ ಅಭಿವೃದ್ಧಿಗೆ ಹಣಕಾಸು ನೆರವು ನೀಡಿದೆ ಎಂದು ನವಕಾಂತ್ ಭಟ್ ಹೇಳಿದರು.

‘ಪೋಷಕ ಕಲಾವಿದರಿಗೆ ಸಬ್ಸಿಡಿ ದರದಲ್ಲಿ ವಸತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಚಲನಚಿತ್ರ ರಂಗದ ಹಲವು ಪೋಷಕ ಕಲಾವಿದರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದು, ಅವರಿಗೆ ಪ್ರಧಾನಮಂತ್ರಿ ಹಾಗೂ ಮುಖ್ಯಮಂತ್ರಿ ಗೃಹ ನಿರ್ಮಾಣ ಯೋಜನೆಯ ಅಡಿಯಲ್ಲಿ ಸಬ್ಸಿಡಿ ದರದಲ್ಲಿ ವಸತಿ ಹಂಚಿಕೆ ಮಾಡಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಭರತ್‌ಗೌಡ ಚಾರಿಟಬಲ್ ಟ್ರಸ್ಟ್ ವತಿಯಿಂದ ಪೋಷಕ ಕಲಾವಿದರಿಗೆ ಫುಡ್ ಕಿಟ್ ವಿತರಿಸುವ ಕಾರ್ಯಕ್ರಮಕ್ಕೆ ಭಾನುವಾರ ಚಾಲನೆ ನೀಡಿ ಮಾತನಾಡಿದರು.

‘ಸ್ವಂತ ಮನೆ ಇಲ್ಲದವರು ಅರ್ಜಿ ಹಾಕಬಹುದು. ಅವರಿಗೆ ಶೀಘ್ರವೇ ಕಡಿಮೆ ದರದಲ್ಲಿ ವಸತಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಪೋಷಕ ಕಲಾವಿದರನ್ನೂ ಆದ್ಯತೆಯ ಗುಂಪು ಎಂದು ಪರಿಗಣಿಸಿ ಲಸಿಕೆ ನೀಡಲಾಗುವುದು. ಈ ಸಂಬಂಧ ಕಲಾವಿದರ ಪಟ್ಟಿ ನೀಡುವಂತೆ ಈಗಾಗಲೇ ಸಂಬಂಧಪಟ್ಟ ಇಲಾಖೆಗೆ ಸೂಚಿಸಲಾಗಿದೆ. ಫುಡ್ ಕಿಟ್ ಪಡೆಯುತ್ತಿರುವ ಎಲ್ಲ ಕಲಾವಿದರಿಗೆ ವೈಯಕ್ತಿಕವಾಗಿ ತಲಾ ₹ 1 ಸಾವಿರ ಮೊತ್ತದ ಚೆಕ್ ವಿತರಿಸಲಾಗುವುದು’ ಎಂದರು.

ಹಿರಿಯ ಕಲಾವಿದರಾದ ಹೊನ್ನವಳ್ಳಿ ಕೃಷ್ಣ, ಮೀಸೆ ಅಂಜನಪ್ಪ, ಉಮೇಶ್ ಹೆಗ್ಡೆ, ಡಿಂಗ್ರಿ ನಾಗರಾಜ್, ಸಿತಾರಾ ಹಾಗೂ ಟ್ರಸ್ಟ್‌ನ ಭರತ್ ಗೌಡ, ನಟರಾದ ಗಣೇಶ್ ರಾವ್ ಕೆಸರ್ಕಾರ್, ಕೆಂಪೇಗೌಡ ಅವರು ಫುಡ್ ಕಿಟ್ ವ್ಯವಸ್ಥೆ ಮಾಡಿದ್ದರು.

ಚಿತ್ರಾವಳಿ



ಚಾಮರಾಜಪೇಟೆಯ ಚಿತಾಗಾರದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವೈದ್ಯಕೀಯ ಸಿಬ್ಬಂದಿಯು ಚಿತಾಗಾರದ ಆವರಣದಲ್ಲೇ ಭಾನುವಾರ ಲಸಿಕೆ ಹಾಕಿದರು



ಕೆ.ಆರ್‌.ಮಾರುಕಟ್ಟೆ ಬಳಿ ಉಚಿತ ಆಹಾರ ಪಡೆಯಲು ಜನರು ಭಾನುವಾರ ಗುಂಪು ಸೇರಿದ್ದರು



ಮದುವೆ ಮೆರವಣಿಗೆಗಾಗಿ ಕುದುರೆ ಸಾರೋಟನ್ನು ಸಿಂಗರಿಸಿ ಸಾಗುತ್ತಿದ್ದ ದೃಶ್ಯ ಬಳ್ಳಾರಿ ರಸ್ತೆಯಲ್ಲಿ ಭಾನುವಾರ ಕಂಡುಬಂತು –ಪ್ರಜಾವಾಣಿ ಚಿತ್ರಗಳು

ಶಾಲೆ-ಕಾಲೇಜಿನಲ್ಲಿ ಕಲಿತದ್ದು ನಿಜವಾದ ಶಿಕ್ಷಣವಲ್ಲ. ಅದು ಶಿಕ್ಷಣಕ್ಕೆ ಸಾಧನವಷ್ಟೆ.



ಪರಿಣಾಮಕಾರಿ ಕಲಿಕೆಗೆ ಇರಲಿ ಪ್ರಶ್ನಿಸುವ ಕಲೆ

ಪರಿಣಾಮಕಾರಿ ಕಲಿಕೆಗೆ ಪ್ರಶ್ನೆ ಕೇಳುವುದು ಕಡ್ಡಾಯವಾಗಿರಬೇಕು. ಅಂದರೆ ಮಾತ್ರ ವಿದ್ಯಾರ್ಥಿಯ ಸಂಪೂರ್ಣವಾದ ಕಲಿಕೆಗೆ, ಜ್ಞಾನ ವೃದ್ಧಿಗೆ ಸಹಾಯವಾಗುತ್ತದೆ. ಇಂತಹ ಪ್ರಶ್ನೆಗಳನ್ನು ಕೇಳುವ ಕಲೆಯನ್ನು ಕರಗತಗೊಳಿಸಿ ಕೊಳ್ಳುವುದು ಹೇಗೆ?

ಪ್ರದೀಪ್ ವೆಂಕಟರಾಮ್

ಕಲವು ವರ್ಷಗಳ ಹಿಂದೆ, ನಮ್ಮ ವಿದ್ಯಾರ್ಥಿಗಳಿಗೂ ಅಮೆರಿಕದ ವಿದ್ಯಾರ್ಥಿಗಳಿಗೂ ಒಂದೇ ಶೈಕ್ಷಣಿಕ ವರ್ಷದಲ್ಲಿ ಬೋಧಿಸುತ್ತಿದ್ದ ಸಂದರ್ಭ. ಪದವಿ ಕೋರ್ಸ್‌ನಲ್ಲಿ ಓದುತ್ತಿದ್ದ ಅಮೆರಿಕದ ವಿದ್ಯಾರ್ಥಿಗಳು ನಿರಂತರವಾಗಿ ಪ್ರಶ್ನೆಗಳನ್ನು ಕೇಳಿ ತಮ್ಮ ಗೊಂದಲವನ್ನು ಪರಿಹರಿಸಿಕೊಳ್ಳುತ್ತಿದ್ದರೆ, ಸ್ನಾತಕೋತ್ತರ ಕೋರ್ಸ್‌ನಲ್ಲಿದ್ದ ನಮ್ಮ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುತ್ತಿದ್ದದ್ದೇ ಅಪರೂಪ. ಈ ನಿಟ್ಟಿನಲ್ಲಿ ನಮ್ಮ ವಿದ್ಯಾರ್ಥಿಗಳಲ್ಲಿನ ಹಿಂಜರಿಕೆ ಸಾಮಾನ್ಯ ಎಂಬುದು ಬಹುತೇಕ ಬೋಧಕರ ಅಭಿಪ್ರಾಯ.

ಹಾಗಾಗಿ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂವಹನದ ಕೊರತೆಯಿಂದ ಪ್ರಸ್ತುತ ಕಲಿಕೆಯ ವಿಧಾನಗಳು ಮೇಲ್ನೋಟಕ್ಕೆ ಅಷ್ಟು ಪರಿಣಾಮಕಾರಿ ಅಲ್ಲ ಎನಿಸುವುದು ಸಹಜ. ನಮ್ಮ ವಿದ್ಯಾರ್ಥಿಗಳಲ್ಲಿನ ಹಿಂಜರಿಕೆ, ಬಹುಶಃ ಯಥಾಸ್ಥಿತಿಯನ್ನು ಪ್ರಶ್ನಿಸದ ಅಥವಾ ಸವಾಲು ಮಾಡದ ನಮ್ಮ ಸಂಸ್ಕಾರದಿಂದಲೂ ಪ್ರಭಾವಿತವಾಗಿರಬಹುದು. ಕಾರಣಗಳೇನೇ ಇರಲಿ, ಪ್ರಶ್ನೆಗಳಿಲ್ಲದ, ಸಂವಹನವಿರದ ಶಾಲೆ, ಕಾಲೇಜುಗಳಲ್ಲಿನ ಕಲಿಕೆ ಅಪೂರ್ಣ.

ಜಗತ್ತಿನ ಮೂವರು ಶ್ರೇಷ್ಠ ವಿಜ್ಞಾನಿಗಳಾದ ಸರ್ ಐಸಾಕ್ ನ್ಯೂಟನ್, ಚಾರ್ಲ್ಸ್ ಡಾರ್ವಿನ್ ಮತ್ತು ಆಲ್ಬರ್ಟ್ ಐನ್‌ಸ್ಟೀನ್ ಅವರಲ್ಲಿ ಒಂದು ವಿಶೇಷ ಗುಣವಿತ್ತು. ಉದ್ದೇಶ, ಪ್ರಸ್ತುತತೆ ಮತ್ತು ವ್ಯಾಖ್ಯಾನದ ಪ್ರಶ್ನೆಗಳು, ಅವರ ವಿಮರ್ಶಾತ್ಮಕ ಚಿಂತನೆ ಮತ್ತು ಬುದ್ಧಿಶಕ್ತಿಗೆ ಅಪಾರವಾದ ಶಕ್ತಿಯನ್ನು ತುಂಬಿದ್ದವು. ಇವೆಲ್ಲವೂ ಕಲಿಕೆಗೆ ಅತ್ಯವಶ್ಯ.

ಪ್ರಶ್ನೆಗಾರಿಕೆ: ಕಲಿಕೆಯ ಪ್ರಮುಖ ತಂತ್ರ

ಪ್ರಶ್ನೆಗಳನ್ನು ಕೇಳುವ ಸಾಮರ್ಥ್ಯ ಪರಿಣಾಮಕಾರಿ ಕಲಿಕೆಯಲ್ಲಿ ನಿರ್ಣಾಯಕ ಅಂಶವಾಗಿದೆ. ಏಕೆಂದರೆ, ಪ್ರಶ್ನೆಗಳು ತರಗತಿಗಳಲ್ಲಿ ಚರ್ಚೆಯನ್ನು ಹುಟ್ಟುಹಾಕುತ್ತವೆ ಮತ್ತು ಸ್ವಗತದ ಸಮಸ್ಯೆಯನ್ನು ನಿವಾರಿಸುತ್ತವೆ. ಏಕತಾನತೆ ಮತ್ತು ಚುರುಕಿಲ್ಲದ ತರಗತಿಯ ಪರಿಸರ ಜ್ಞಾನವನ್ನು, ಕಲಿಕೆಯನ್ನು ಉತ್ತೇಜಿಸಲು ವಿಫಲವಾಗುತ್ತವೆ. ಹಾಗಾಗಿ, ಶಿಕ್ಷಕರು ಪ್ರಶ್ನೆಗಳನ್ನು ಇಷ್ಟಪಡುವುದಿಲ್ಲವೆನ್ನುವ ಅಭಿಪ್ರಾಯ ಸತ್ಯಕ್ಕೆ ದೂರ.

ಸಕ್ರಿಯವಾದ ಪ್ರಶ್ನೆಗಾರಿಕೆಯಿಂದ ವಿದ್ಯಾರ್ಥಿಗಳಿಗೆ ಅನೇಕ ಅನುಕೂಲಗಳಿವೆ:

- ವಿಮರ್ಶಾತ್ಮಕ ಚಿಂತನಾ ಕೌಶಲಗಳ ಅಭಿವೃದ್ಧಿ
- ವಿಷಯದ ಬಗ್ಗೆ ಒಳನೋಟಗಳು
- ಆಲಿಸುವಿಕೆ ಮತ್ತು ಸಂವಹನ ಕೌಶಲಗಳ ಅಭಿವೃದ್ಧಿ
- ಹೆಚ್ಚಿನ ಆತ್ಮವಿಶ್ವಾಸ
- ಶಿಕ್ಷಕ- ಮಾರ್ಗದರ್ಶಕರೊಡನೆ ಉತ್ತಮ ಬಾಂಧವ್ಯ

ಪ್ರಶ್ನೆಗಳ ವೈವಿಧ್ಯತೆ

ಪರಿಕಲ್ಪನೆಗಳಿಂದಲೂ, ಆಲೋಚನೆಗಳಿಂದಲೂ, ಸವಾಲುಗಳಿಂದಲೂ ಆವರಿಸಿದ ವಿಭಿನ್ನವಾದ ವಿಷಯಗಳನ್ನು ಕಲಿಯುವ ನಿಟ್ಟಿನಲ್ಲಿ, ವೈವಿಧ್ಯಮಯ ಪ್ರಶ್ನೆಗಳನ್ನು ಕೇಳಬಹುದು.

ಉದಾಹರಣೆಗೆ, ಎಂಬಿಎ ಕೋರ್ಸ್‌ನ ಮಾರ್ಕೆಟಿಂಗ್ ವಿಭಾಗದಲ್ಲಿ 'ನಾಲ್ಕು ಪಿ' (ಉತ್ಪನ್ನ, ಬೆಲೆ, ಪ್ರಚಾರ ಮತ್ತು ಸ್ಥಳ) ಗಳ ಪ್ರಮುಖ ವಿಷಯವನ್ನು ತೆಗೆದುಕೊಳ್ಳೋಣ:

- ಪರಿಕಲ್ಪನಾತ್ಮಕ ಪ್ರಶ್ನೆಗಳು: 'ನಾಲ್ಕು ಪಿ' ಪರಿಕಲ್ಪನೆಯ ಹಿಂದಿನ ತತ್ವಗಳೇನು?
- ಅನ್ವೇಷಣಾತ್ಮಕ ಪ್ರಶ್ನೆಗಳು: ಈ ಪರಿಕಲ್ಪನೆಯು ಹೇಗೆ ಅಭಿವೃದ್ಧಿಗೊಂಡಿದೆ? ಪರಿಕಲ್ಪನೆಯು ಸಾರ್ವತ್ರಿಕವಾಗಿ ಅನ್ವಯವಾಗುತ್ತದೆಯೇ?

ಇಂತಹ ಪ್ರಶ್ನೆಗಳು ತರಗತಿಯ ಪರಿಸರವನ್ನು ಉತ್ತೇಜಿಸಿ, ಚರ್ಚೆಗಳನ್ನು ಹೆಚ್ಚಿನ ಮಟ್ಟಕ್ಕೆ ಕೊಂಡೊಯ್ಯುತ್ತವೆ.

- ಪರಿಶೋಧನಾತ್ಮಕ ಪ್ರಶ್ನೆಗಳು: ಸೇವಾ ಉದ್ಯಮದಲ್ಲಿ ಮಾನವ ಸಂಪನ್ಮೂಲದ ಅಂಶ ಏಕೆ ಮುಖ್ಯವಾಗಿದೆ?
- ತುಲನಾತ್ಮಕ ಪ್ರಶ್ನೆಗಳು: ಮಾರ್ಕೆಟಿಂಗ್ ಪ್ರಕ್ರಿಯೆಯು ಭಾರತ ಮತ್ತು ಯೂರೋಪ್‌ನಲ್ಲಿ ಎಷ್ಟು ಭಿನ್ನವಾಗಿದೆ?
- ಕಾಲ್ಪನಿಕ ಪ್ರಶ್ನೆಗಳು: ಒಂದು ಸಂಸ್ಥೆಯಲ್ಲಿ ಮಾನವ ಸಂಪನ್ಮೂಲಕ್ಕೆ ಸರಿಯಾದ ಪ್ರಾಮುಖ್ಯತೆ ನೀಡದಿದ್ದರೆ ಪರಿಣಾಮಗಳೇನು? ವಸ್ತುವಿನ ಬೆಲೆಯನ್ನು ಶೇ 10ರಷ್ಟು ಕಡಿಮೆ ಮಾಡಿದರೆ ಬೇಡಿಕೆಯ ಮೇಲೆ ಆಗುವ ಪರಿಣಾಮಗಳೇನು?
- ಸಂಬಂಧಾತ್ಮಕ ಪ್ರಶ್ನೆಗಳು: ಉತ್ಪನ್ನದ ಜೀವನ ಚಕ್ರವನ್ನು ಮೊಟಕುಗೊಳಿಸಿದರೆ ಉಂಟಾಗುವ ಸವಾಲುಗಳೇನು?

ಈ ರೀತಿಯ ಪ್ರಶ್ನೆಗಳನ್ನು ಕೇಳುವುದರಿಂದ ತರಗತಿಗಳಲ್ಲಿ ಚೈತನ್ಯಭರಿತ ಮತ್ತು ವಿಮರ್ಶಾತ್ಮಕ ಚರ್ಚೆಗಳಾಗಿ, ವಿಷಯದ ಕಲಿಕೆ ಸಂಪೂರ್ಣವಾಗುತ್ತದೆ.

ಪ್ರಶ್ನಿಸುವ ಕಲೆಯನ್ನು ಕರಗತ ಮಾಡಿಕೊಳ್ಳಿ

ನಮ್ಮ ಸಾಮರ್ಥ್ಯದ ಒಂದು ಕನಿಷ್ಠ ಭಾಗವನ್ನಷ್ಟೇ ನಾವು ಸಕ್ರಿಯಗೊಳಿಸುತ್ತೇವೆ ಎಂದು ಅನೇಕ ಮನಶ್ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ, ಪ್ರಸ್ತುತ ಕಲಿಕೆಯ ಶೈಲಿಯನ್ನು ಪರೀಕ್ಷಿಸಿ ಮತ್ತು ನಿಮ್ಮ ಅನನ್ಯ ಕಲಿಕೆಯ ಶೈಲಿಯನ್ನು ಬೆಳೆಸಿಕೊಳ್ಳಿ. ಆಗಲೇ, ಕಲಿಕೆ ಸಂಪೂರ್ಣವಾಗಿ ನಿಮ್ಮ ಉಜ್ವಲ ಭವಿಷ್ಯದ ಕನಸುಗಳನ್ನು ಸಾಕಾರಗೊಳಿಸಬಹುದು. ಆದ್ದರಿಂದ, ಸಹಪಾಠಿಗಳ ಲೇವಡಿ ಅಥವಾ ಅಪಹಾಸ್ಯದ ಭಯದಿಂದ ಮುಕ್ತಗೊಂಡು ಸೂಕ್ತವಾದ ಪ್ರಶ್ನೆಗಾರಿಕೆಯಿಂದ ನಿಮ್ಮ ಕಲಿಕೆಯನ್ನು ಪರಿಣಾಮಕಾರಿಯಾಗಿಸಿ.

ಸಕ್ರಿಯವಾದ ಚರ್ಚೆಗಳನ್ನು ಹುಟ್ಟುಹಾಕುವ ಪ್ರಶ್ನೆಗಳಿಂದ, ವಿದ್ಯಾರ್ಥಿ- ಶಿಕ್ಷಕರ ಪರಸ್ಪರ ಭಾಗವಹಿಸುವಿಕೆ ಹೆಚ್ಚಾಗಿ, ಕಲಿಕೆ ಸಂಪೂರ್ಣವಾಗಿಯೂ, ಸಮಗ್ರವಾಗಿಯೂ ಆಗುತ್ತದೆ.

(ಲೇಖಕ: ಮ್ಯಾನೇಜ್‌ಮೆಂಟ್ ಮತ್ತು ಶಿಕ್ಷಣ ತಜ್ಞರು)



ಹೊಸ ಉದ್ಯೋಗದ ಹಾದಿ

ಫ್ಯಾಷನ್ ಕಮ್ಯೂನಿಕೇಷನ್ ಕೋರ್ಸ್

ಮನಸ್ವಿ

ಇತ್ತೀಚೆಗೆ ದಿನಕ್ಕೊಂದು ಹೊಸ ಉದ್ಯೋಗದ ಹಾದಿ ಸೃಷ್ಟಿಯಾಗುತ್ತಿದೆ. ಹೆಚ್ಚು ಹೆಚ್ಚು ಉದ್ಯೋಗ ಸೃಷ್ಟಿಸುವ ಸಲುವಾಗಿ ಹೊಸ ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗುತ್ತಿದೆ. ಅವುಗಳಲ್ಲಿ ಫ್ಯಾಷನ್ ಕಮ್ಯೂನಿಕೇಷನ್ ಕೋರ್ಸ್ ಜನಪ್ರಿಯವಾಗುತ್ತಿದೆ. ಕ್ಷಣ ಕ್ಷಣಕ್ಕೂ ಬದಲಾಗುವ ಫ್ಯಾಷನ್ ಟ್ರೆಂಡ್‌ನ ಕುರಿತು ಆಸಕ್ತಿ ಹಾಗೂ ಜ್ಞಾನ ಹೊಂದಿರುವವರು ಈ ಪದವಿ ಕೋರ್ಸ್‌ಗೆ ಪ್ರವೇಶ ಪಡೆಯಬಹುದು. ಯಾವುದೇ ವಿಷಯದಲ್ಲಿ ಪಿಯುಸಿ ಮುಗಿಸಿದ್ದು ಫ್ಯಾಷನ್ ಕ್ಷೇತ್ರದ ಮೇಲೆ ಒಲವು ಹೊಂದಿರುವವರು ಈ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳಬಹುದು. ನಂತರ ಇದರಲ್ಲಿ ಸ್ನಾತಕೋತ್ತರ ಪದವಿಯನ್ನೂ ಮಾಡಬಹುದು.

ಫ್ಯಾಷನ್ ಕಮ್ಯೂನಿಕೇಷನ್ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳ ಬಯಸುವವರು ಫ್ಯಾಷನ್ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ತಂತ್ರಜ್ಞಾನಗಳ ಕುರಿತು ಆಳವಾದ ಜ್ಞಾನವನ್ನು ಹೊಂದಿರಬೇಕು. ಎಐ, ಅನಾಲಿಟಿಕ್ಸ್, ಆಟೊಮೇಷನ್ ಚಾಟ್ಸ್ ಬೂಟ್ಸ್, ವರ್ಚುವಲ್ ರಿಯಾಲಿಟಿ, ಮೊಬೈಲ್ ಆ್ಯಪ್ಸ್ ಮುಂತಾದವುಗಳ ಬಗ್ಗೆ ತಿಳಿದುಕೊಂಡಿರಬೇಕು.

ಎಲ್ಲಿದೆ ಅವಕಾಶ?

ಫ್ಯಾಷನ್ ಕಮ್ಯೂನಿಕೇಷನ್ ಕ್ಷೇತ್ರವನ್ನು ವೃತ್ತಿಗಾಗಿ ಆಯ್ಕೆ ಮಾಡಿಕೊಂಡವರಿಗೆ ಹಲವು ಅವಕಾಶಗಳಿವೆ. ವಿಷುವಲ್ ಮರ್ಚಂಡೈಸ್ ಮ್ಯಾನೇಜ್‌ಮೆಂಟ್, ಗ್ರಾಫಿಕ್ ಡಿಸೈನಿಂಗ್, ಪಬ್ಲಿಕ್ ರಿಲೇಷನ್ಸ್, ಆರ್ಟ್ ಡೈರೆಕ್ಷನ್ ಹಾಗೂ ಫ್ಯಾಷನ್ ಜರ್ನಲಿಸಂ ಮುಂತಾದ ಕ್ಷೇತ್ರಗಳಲ್ಲಿ ಅವರಿಗೆ ಅವಕಾಶದ ಬಾಗಿಲು ತೆರೆದಿರುತ್ತದೆ.

ವಿಷುವಲ್ ಮರ್ಚಂಡೈಸ್ ಮ್ಯಾನೇಜ್‌ಮೆಂಟ್: ವಿಷುವಲ್ ಮರ್ಚಂಡೈಸಿಂಗ್ ಎನ್ನುವುದು ಗ್ರಾಹಕರ ಗಮನವನ್ನು ಸೆಳೆಯಲು ಫ್ಯಾಶನ್ ಉತ್ಪನ್ನಗಳನ್ನು ಆಕರ್ಷಕ ರೀತಿಯಲ್ಲಿ ಪ್ರದರ್ಶಿಸುವ ಕಲೆ. ಇದು ಲೈವ್ ಪ್ರಚಾರದ ಮೂಲಕ ವೀಕ್ಷಕರನ್ನು ಸೆಳೆಯುವಂತೆ ಮಾಡಲು ನೆರವಾಗುತ್ತದೆ. ಬಹಳಷ್ಟು ಯೋಜನೆ, ವ್ಯವಸ್ಥೆಯ ಮೂಲಕ ಇದು ಗ್ರಾಹಕರನ್ನು ಸೆಳೆಯಲು ಥೀಮ್‌ಗಳನ್ನು ರಚಿಸುತ್ತದೆ. ಸ್ಟೈಲ್ ಫೋಟೊಗ್ರಫಿ, ಡಿಸೈನ್ ಫೋಟೊಗ್ರಫಿ ಮುಂತಾದ ಅಂಶಗಳನ್ನೂ ಇದು ಒಳಗೊಂಡಿದೆ.

ಗ್ರಾಫಿಕ್ ಡಿಸೈನ್: ಫ್ಯಾಷನ್ ಕಮ್ಯೂನಿಕೇಷನ್ ಡಿಗ್ರಿ ಗ್ರಾಫಿಕ್ ಡಿಸೈನ್‌ನ ವಿವಿಧ ಅಂಶಗಳು ಹಾಗೂ ತಂತ್ರಜ್ಞಾನವನ್ನು ಒಳಗೊಂಡಿದೆ. ಇದರಲ್ಲಿ ಬಣ್ಣಗಳು, ವಿವಿಧ ಛಾಯೆಗಳು, ವಿವಿಧ ಆಕಾರಗಳ ಕುರಿತಾಗಿ ತಿಳಿಸಲಾಗುತ್ತದೆ. ಇದರೊಂದಿಗೆ ಪ್ರತಿ ಅಂಶಗಳೊಂದಿಗಿನ ಸಮತೋಲನಕ್ಕೂ ಇದು ಪ್ರಾಮುಖ್ಯ ನೀಡುತ್ತದೆ. ಡಿಜಿಟಲ್ ಮತ್ತು ಮುದ್ರಣ ಮಾಧ್ಯಮ ಪಾಲುದಾರರಿಗೆ ಉಪಯುಕ್ತ ಸಲಹೆಗಳನ್ನು ನೀಡುತ್ತದೆ.

ಫ್ಯಾಷನ್ ಸ್ಟೈಲಿಂಗ್: ಫ್ಯಾಶನ್ ಸ್ಟೈಲಿಂಗ್ ಎನ್ನುವುದು ಫ್ಯಾಷನ್ ಕಮ್ಯೂನಿಕೇಷನ್ ಕೋರ್ಸ್‌ನ ಒಂದು ವೃತ್ತಿ ಆಯ್ಕೆಯಾಗಿದೆ. ಮಾಧ್ಯಮ, ಚಲನಚಿತ್ರ, ದೂರದರ್ಶನ, ಮುದ್ರಣ ಮತ್ತು ಅಂತರ್ಜಾಲದಲ್ಲಿ ಫ್ಯಾಷನ್ ಸ್ಟೈಲಿಸ್ಟ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ. ಇದರಲ್ಲಿ ವಿದ್ಯಾರ್ಥಿಗಳಿಗೆ ಹೇಗೆ ಡ್ರೆಸ್ ಮಾಡಿಕೊಳ್ಳಬೇಕು, ಪರಿಕಲ್ಪನೆಗೆ ಅನುಗುಣವಾಗಿ ಹೇಗೆ ಡ್ರೆಸ್ ಮಾಡಿಕೊಳ್ಳಬೇಕು, ಮುಂದಿನ ಫ್ಯಾಷನ್ ಟ್ರೆಂಡ್.. ಈ ಎಲ್ಲವುದರ ಬಗ್ಗೆ ತಿಳಿಸಲಾಗುವುದು.

ಆರ್ಟ್ ಡೈರೆಕ್ಷನ್: ಯಾವುದೇ ದೃಶ್ಯ ಅಥವಾ ಸ್ಥಳವನ್ನು ಆಕರ್ಷಿಸಲು ಕಲಾ ನಿರ್ದೇಶಕರು ವಿವಿಧ ಅಂಶಗಳಿಗೆ ಸಂಬಂಧಿಸಿ ಪರಿಣಾಮಕಾರಿ ದೃಶ್ಯದ ಬಗ್ಗೆ ನಿರ್ಧರಿಸುತ್ತಾರೆ. ಪ್ರದರ್ಶನಕ್ಕಾಗಿ ಸರಿಯಾದ ವಿಷಯಗಳನ್ನು ಗುರುತಿಸುವುದು, ಆಯ್ಕೆ ಮಾಡುವ ಕಲೆ, ಆಯ್ಕೆಯ ಉಡುಪುಗಳು ಹಾಗೂ ಬೆಳಕಿನ ಆಯ್ಕೆ ಇತ್ಯಾದಿ ಎಲ್ಲವನ್ನೂ ಇದು ಒಳಗೊಂಡಿದೆ.

ಫ್ಯಾಷನ್ ಜರ್ನಲಿಸಂ: ಪರಿಣಾಮಕಾರಿ ಪ್ರಚಾರಕ್ಕಾಗಿ ಪ್ರಭಾವಶಾಲಿ ಬರವಣಿಗೆ ಅಗತ್ಯ. ಆ ಮೂಲಕ ಹೊಸ ಉಡುಪುಗಳ ಕುರಿತು ಗ್ರಾಹಕರಿಗೆ ಆಳವಾಗಿ ವಿವರಿಸಬಹುದು ಹಾಗೂ ಅವರನ್ನು ಆಕರ್ಷಿಸಬಹುದು. ಆಕರ್ಷಕ ಪದಗಳು ಹಾಗೂ ಆಲೋಚನೆಗಳ ಮೂಲಕ ಗ್ರಾಹಕರನ್ನು ಸೆಳೆಯಲು ಇದು ನೆರವಾಗುತ್ತದೆ. ಆ ಕಾರಣಕ್ಕಾಗಿ, ಫ್ಯಾಷನ್ ಸಂವಹನವು ವಿದ್ಯಾರ್ಥಿಗಳಿಗೆ ಸೃಜನಶೀಲ ಬರವಣಿಗೆಯ ಬಗ್ಗೆ ಕಲಿಸುತ್ತದೆ, ಇದು ಉತ್ಪನ್ನದ ಪ್ರಚಾರ ಮತ್ತು ಮಾರಾಟದ ಮೇಲೆ ಗಣನೀಯ ಪರಿಣಾಮ ಬೀರುವಂತೆ ಮಾಡುತ್ತದೆ.

ಫ್ಯಾಷನ್ ಫೋರ್‌ಕಾಸ್ಟಿಂಗ್: ಫ್ಯಾಷನ್ ಫೋರ್‌ಕಾಸ್ಟಿಂಗ್ ಹಿಂದಿನ ಹಾಗೂ ಇಂದಿನ ಫ್ಯಾಷನ್ ಟ್ರೆಂಡ್‌ಗಳನ್ನು ಆಧರಿಸಿ ಗ್ರಾಹಕರ ಮುಂದಿನ ಖರೀದಿ ವರ್ತನೆಯು ಹೇಗಿರುತ್ತದೆ ಎಂಬುದನ್ನು ತಿಳಿದುಕೊಳ್ಳಲು ನೆರವಾಗುತ್ತದೆ. ಇದರಲ್ಲಿ ಭವಿಷ್ಯದ ಫ್ಯಾಷನ್ ಟ್ರೆಂಡ್‌ಗಳ ಬಗ್ಗೆಯೂ ತಿಳಿದುಕೊಳ್ಳಬಹುದು. ಬಟ್ಟೆ, ಬಣ್ಣ, ವಿನ್ಯಾಸ, ಟೆಕ್ಸ್ಚರ್, ಬ್ಯೂಟಿ ಗ್ರೂಮಿಂಗ್, ಫೂಟ್‌ವೇರ್, ಸ್ಟ್ರೀಟ್ ಸ್ಟೈಲಿಂಗ್ ಮುಂತಾದ ಫ್ಯಾಷನ್‌ಗೆ ಸಂಬಂಧಿಸಿದ ಟ್ರೆಂಡ್‌ಗಳೂ ಇದರಲ್ಲಿ ಒಳಗೊಂಡಿರುತ್ತವೆ.

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ಗಾಂಧಿನಗರ ಅರ್ಲಿ- ಕೆರಿಯರ್ ಫೆಲೋಶಿಪ್ 2021

- ವಿವರ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಡಾಕ್ಟರೇಟ್ ಪದವಿ ಪಡೆದವರಿಂದ ಅರ್ಲಿ-ಕೆರಿಯರ್ ಫೆಲೋಶಿಪ್ 2021 ಕ್ಕೆ ಅರ್ಜಿ ಆಹ್ವಾನಿಸಿದೆ.
- ಅರ್ಹತೆ: ಡಾಕ್ಟರೇಟ್ ಪದವಿ ಪಡೆದ ಅಭ್ಯರ್ಥಿಗಳು ಈ ಫೆಲೋಶಿಪ್‌ಗೆ ಅರ್ಹರು. ಅವರು ತಮ್ಮ ಡಾಕ್ಟರೇಟ್ ಪ್ರಬಂಧವನ್ನು ಸಲ್ಲಿಸಿರಬೇಕು.
- ಆರ್ಥಿಕ ನೆರವು: ತಿಂಗಳಿಗೆ ₹ 1 ಲಕ್ಷ ಭತ್ಯೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 7, 2021
- ಅರ್ಜಿ ಸಲ್ಲಿಕೆ ವಿಧಾನ: ಇಮೇಲ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/ECF2

ಎಸ್‌ಇಆರ್‌ಬಿ ನ್ಯಾಷನಲ್ ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್ (ಎನ್-ಪಿಡಿಎಫ್) 2021

- ವಿವರ: ವಿಜ್ಞಾನ ಮತ್ತು ಎಂಜಿನಿಯರಿಂಗ್ ಸಂಶೋಧನಾ ಮಂಡಳಿ (ಎಸ್‌ಇಆರ್‌ಬಿ) ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್ 2021 ಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ.
- ಅರ್ಹತೆ: 35 ವರ್ಷಕ್ಕಿಂತ ಕಡಿಮೆ ವಯಸ್ಸಿನ ಭಾರತೀಯ ನಾಗರಿಕರು ಈ ಫೆಲೋಶಿಪ್‌ಗೆ ಅರ್ಹರು. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ, ಎಂಡಿ, ಎಂಎಸ್ ಪದವಿ ಪಡೆದಿರಬೇಕು.
- ಆರ್ಥಿಕ ನೆರವು: ತಿಂಗಳಿಗೆ ₹ 55000 ಹಾಗೂ ಇತರ ಸವಲತ್ತುಗಳು
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 2, 2021
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/NPF8

ಕೃಪೆ: www.b4s.in/praja/NPF8

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ


ವೃತ್ತಗಳು

(ಮುಂದುವರಿದ ಭಾಗ)

ಗಣಿತ

ಎಸ್ಸೆಸ್ಸೆಲ್ಸಿ

ಉದಾಹರಣೆ 1: ಎರಡು ಏಕ ಕೇಂದ್ರೀಯ ವೃತ್ತಗಳಲ್ಲಿ, ದೊಡ್ಡ ವೃತ್ತದ ಜ್ಯಾವು ಚಿಕ್ಕ ವೃತ್ತವನ್ನು ಸ್ಪರ್ಶಿಸಿದರೆ ಜ್ಯಾವು ಸ್ಪರ್ಶ ಬಿಂದುವಿನಲ್ಲಿ ಅರ್ಧ ಮಾಡುತ್ತದೆ ಎಂದು ಸಾಧಿಸಿ.




ಪರಿಹಾರ: ನಮಗೆ 'O' ವೃತ್ತ ಕೇಂದ್ರವನ್ನು ಹೊಂದಿರುವ C1 ಮತ್ತು C2 ಎರಡು ಏಕ ಕೇಂದ್ರೀಯ ವೃತ್ತಗಳನ್ನು ನೀಡಿವೆ ಹಾಗೂ ದೊಡ್ಡ ವೃತ್ತ C1 ನ ಜ್ಯಾ AB ಚಿಕ್ಕ ವೃತ್ತ C2 ವನ್ನು P ಬಿಂದುವಿನಲ್ಲಿ ಸ್ಪರ್ಶಿಸುತ್ತದೆ. ನಾವು AP = BP ಎಂದು ಸಾಧಿಸಬೇಕಾಗಿದೆ.

ಈಗ ನಾವು OP ಯನ್ನು ಸೇರಿಸೋಣ. ಆಗ AB ಯು C2 ಗೆ P ಬಿಂದುವಿನಲ್ಲಿ ಸ್ಪರ್ಶಕವಾಗಿದೆ ಮತ್ತು OP ಯು ಅದರ ತ್ರಿಜ್ಯವಾಗಿದೆ. ಆದ್ದರಿಂದ ಪ್ರಮೇಯ 4.1 ರಿಂದ $OP \perp AB$

ಈಗ AB ಯು C1 ವೃತ್ತದ ಜ್ಯಾ ಆಗಿದೆ ಮತ್ತು ವೃತ್ತ ಕೇಂದ್ರದಿಂದ ಜ್ಯಾಗೆ ಎಳೆದ ಲಂಬವು ಜ್ಯಾವನ್ನು ಅರ್ಧ ಮಾಡುತ್ತದೆ.

ಅಂದರೆ, AP = BP

ಉದಾಹರಣೆ 2: 'O' ವೃತ್ತ ಕೇಂದ್ರವನ್ನು ಹೊಂದಿರುವ ವೃತ್ತಕ್ಕೆ ಬಾಹ್ಯಬಿಂದು T ಯಿಂದ TP ಮತ್ತು TQ ಎರಡು ಸ್ಪರ್ಶಕಗಳನ್ನು ಎಳೆದಿದೆ. $\angle PTQ = 2\angle OPQ$ ಎಂದು ಸಾಧಿಸಿರಿ.



ಪರಿಹಾರ: 'O' ವೃತ್ತಕೇಂದ್ರವಾಗಿರುವಂತೆ ಒಂದು ವೃತ್ತ ಬಾಹ್ಯ ಬಿಂದು T ಮತ್ತು TP ಮತ್ತು TQ ಸ್ಪರ್ಶ ಬಿಂದು P ಮತು O ಗಳಲ್ಲಿ ಎಳೆದ ಎರಡು ಸ್ಪರ್ಶಕಗಳನ್ನು ನೀಡಿದೆ. ನಾವು $\angle PTQ = 2\angle OPQ$ ಎಂದು ಸಾಧಿಸಬೇಕಾಗಿದೆ.

$\angle PTQ = \theta$ ಆಗಿರಲಿ.

ಈಗ ಪ್ರಮೇಯ 4.2 ರಿಂದ, TP = TQ ಆದರಿಂದ TPQ ಒಂದು ಸಮದ್ವಿಬಾಹು ತ್ರಿಭುಜವಾಗಿದೆ. $C = \angle TQP = (180^0 - \theta) = 90^0 - \frac{1}{2}\theta$


ಹಾಗೆಯೇ ಪ್ರಮೇಯ 1 ರಿಂದ $\angle OPT = 90^0$

ಆದ್ದರಿಂದ $\angle OPQ = \angle OPT - \angle TPQ = 90^0 - (90^0 - \frac{1}{2}\theta)$

$= \frac{1}{2}\theta = \frac{1}{2}\angle PTQ$

ಇದ್ದರಿಂದ $\angle PTQ = 2\angle 0PQ$

ಉದಾಹರಣೆ 3: 5 ಸೆಂ.ಮೀ ತ್ರಿಜ್ಯವಿರುವ ಒಂದು ವೃತ್ತದಲ್ಲಿ ಜ್ಯಾ PQ ಉದ್ದವು 8 ಸೆಂ.ಮೀ ಆಗಿದೆ. P ಮತ್ತು Q ಬಿಂದುವಿನಲ್ಲಿನ ಸ್ಪರ್ಶಕಗಳು T ಬಿಂದುವಿನಲ್ಲಿ ಸಂಧಿಸುತ್ತವೆ. TP ಉದ್ದವನ್ನು ಕಂಡುಹಿಡಿಯಿರಿ.



ಪರಿಹಾರ: OT ಸೇರಿಸಿ. ಅದು PQ ರೇಖೆಯನ್ನು ಬಿಂದು R ನಲ್ಲಿ ಸಂಧಿಸಲಿ. ಒಂದು ಸಮದ್ವಿಬಾಹುರೇಖೆಯು $\angle PTQ$ ದ ಕೋನಾರ್ಧಕ ರೇಖೆಯಾಗಿದೆ. ಆದ್ದರಿಂದ $OT \perp PQ$ ಮತ್ತು ಆದ್ದರಿಂದ OT ರೇಖೆಯು PQ ಅನ್ನು ಅರ್ಧಿಸುತ್ತದೆ. ಇದರಿಂದ PR = RQ = 4cm

ಹಾಗೆಯೇ $0R = \sqrt{OP^2 - PR^2} = \sqrt{5^2 - 4^2}$

$= 3cm$

ಈಗ $\angle LTR + \angle RPO = 90^0 = \angle TPR + \angle PTR$

ಆದ್ದರಿಂದ $\angle RPO = \angle PTR$

ಆದ್ದರಿಂದ, ಲಂಬಕೋನ ತ್ರಿಭುಜ TRP ಯು ಲಂಬಕೋನ ತ್ರಿಭುಜ, PRO ಗೆ ಸಮರೂಪವಾಗಿದೆ.

ಇದ್ದರಿಂದ $\frac{TP}{PQ} = \frac{RP}{RO}, \frac{TP}{5} = \frac{4}{3}$

ಅಥವಾ $TP = \frac{20}{3}$ cm

ಗಮನಿಸಿ: TP ಯನ್ನು ಪೈಥಾಗೊರಸ್‌ನ ಪ್ರಮೇಯದ ಮೂಲಕ ಈ ಕೆಳಗಿನಂತೆ ಕಂಡುಹಿಡಿಯಬಹುದು.

TP = x ಮತ್ತು TR = y ಎಂದಿರಲಿ.

ಆಗ, x2 = y2 + 16 (ΔPRT ದಿಂದ)

x2 + b2 = (4 + 3)2 (ΔOPT ದಿಂದ)

ಸಮೀಕರಣ (1) ಅನ್ನು (2) ರಿಂದ ಕಳೆದಾಗ

$x, 5 = 5y - 7$ ಅಥವಾ $y = \frac{32}{6} = \frac{16}{3}$

ಆದ್ದರಿಂದ $x^2 = \left(\frac{16}{3}\right)^2 + 16 = \frac{16}{9}(16 + 9)$

$= \frac{16 \times 25}{9}$

ಅಥವಾ $x = \frac{20}{3} cm$

ಏಕ ಕೇಂದ್ರೀಯ ಸಮನ್ವಯಿ ಘಟಕಗಳ ಸೂತ್ರಗಳು

ರಸಾಯನಶಾಸ್ತ್ರ

ದ್ವಿತೀಯ ಪಿಯುಸಿ

ಸಂಯುಕ್ತವೊಂದರ ಶೀಘ್ರಲಿಪಿ ಉಪಕರಣ ಸೂತ್ರವು, ಸಂಯುಕ್ತದ ಸಂಯೋಜನೆ ಬಗ್ಗೆ ಮೂಲಭೂತ ಮಾಹಿತಿಯನ್ನು ಸಂಕ್ಷಿಪ್ತ ಮತ್ತು ಅನುಕೂಲಕರ ರೀತಿಯಲ್ಲಿ ಒದಗಿಸಲು ಉಪಯೋಗವಾಗುತ್ತದೆ. ಏಕಕೇಂದ್ರೀಯ ಸಮನ್ವಯಿ ಸಂಯುಕ್ತಗಳು ಒಂದೇ ಕೇಂದ್ರೀಯ ಲೋಹದ ಪರಮಾಣುವನ್ನು ಹೊಂದಿರುತ್ತವೆ.

ಈ ಕೆಳಗಿನ ನಿಯಮಗಳು ಸೂತ್ರವನ್ನು ಬರೆಯುವಾಗ ಅನ್ವಯಿಸಲ್ಪಟ್ಟಿವೆ.

1) ಕೇಂದ್ರೀಯ ಪರಮಾಣುವನ್ನು ಮೊದಲು ಪಟ್ಟಿ ಮಾಡಿರುತ್ತಾರೆ.

2) ತದ ನಂತರ ಲಿಗ್ಯಾಂಡ್ ಆಂಗ್ಲ ವರ್ಣಮಾಲೆಯ ಕ್ರಮದಲ್ಲಿ ಪಟ್ಟಿ ಮಾಡಲಾಗುವುದು. ಪಟ್ಟಿಯಲ್ಲಿ ಲಿಗ್ಯಾಂಡ್‌ಗಳ ಸ್ಥಳ ನಿಯೋಜನೆ ಅದರ ಆವೇಶದ ಮೇಲೆ ಅವಲಂಬಿತವಾಗಿರುವುದಿಲ್ಲ.

3) ಬಹುದಂತೀಯ ಲಿಗ್ಯಾಂಡ್‌ಗಳನ್ನು ಕೂಡ ಆಂಗ್ಲ ವರ್ಣಮಾಲೆಯ ಕ್ರಮದಲ್ಲಿ ಪಟ್ಟಿ ಮಾಡಲಾಗುವುದು. (ಸಂಕ್ಷಿಪ್ತ) ಹೃಸ್ವರೂಪದ ಲಿಗ್ಯಾಂಡ್ ಆಗಿದ್ದಾಗ, ಆಂಗ್ಲ ವರ್ಣಮಾಲೆಯ ಕ್ರಮದಲ್ಲಿ ಲಿಗ್ಯಾಂಡ್‌ನ ಸ್ಥಾನವನ್ನು ನಿರ್ಧರಿಸಲು ಹೃಸ್ವ ಸ್ವರದ ಮೊದಲ ಅಕ್ಷರವು ಉಪಯೋಗಿಸಲ್ಪಡುತ್ತದೆ.

4) ಇಡೀ ಸಮನ್ವಯಿ ಘಟಕದ ಸೂತ್ರವನ್ನು, ಅದು ಆವೇಶ ಭರಿತವಾಗಿರಲಿ ಅಥವಾ ಇಲ್ಲದಿರಲಿ ಅದು ಚೌಕ ಆವರಣದಲ್ಲಿ ಅಡಕಗೊಳ್ಳಲ್ಪಡುತ್ತದೆ. ಲಿಗ್ಯಾಂಡ್‌ಗಳು ಬಹುಪರಮಾಣ್ವಿಕ ಆಗಿದ್ದಾಗ ಅವುಗಳ ಸೂತ್ರಗಳು ಆವರಣದಲ್ಲಿ ಅಡಕಗೊಳಿಸಲ್ಪಡುವವು. ಲಿಗ್ಯಾಂಡ್‌ನ ಹೃಸ್ವರೂಪವನ್ನು ಕೂಡ ಆವರಣದಲ್ಲಿ ಅಡಕಗೊಳಿಸಲಾಗುವುದು.

5) ಒಂದು ಸಮನ್ವಯಿ ಮಂಡಲದಲ್ಲಿ ಲೋಹ ಮತ್ತು ಲಿಗ್ಯಾಂಡ್‌ಗಳ ನಡುವೆ ಯಾವುದೇ ಸ್ಥಳ ಇರಬಾರದು.

6) ಪ್ರತಿ ಅಯಾನ್ ಇಲ್ಲದ ಆವೇಶಯುಕ್ತ ಸಮನ್ವಯಿ ಘಟಕದ ಸೂತ್ರ ಬರೆಯಬೇಕಾದಾಗ, ಚೌಕ ಆವರಣಗಳ ಬಲಗಡೆ ಮೇಲ್ಬರಹವಾಗಿ ಚಿಹ್ನೆಯ ಮೊದಲು ಸಂಖ್ಯೆಯನ್ನು ಬರೆದು ಆವೇಶವನ್ನು ಸೂಚಿಸಬೇಕು. ಉದಾಹರಣೆಗೆ

$[Co\,(CN)_6]^3, [Cr(H_2O)_6]^{3+}$;

ಮುಂತಾದವುಗಳು.

7) ಧನ ಅಯಾನ್‌ನ ಆವೇಶವನ್ನು ಋಣ ಅಯಾನ್‌ನ ಆವೇಶದೊಂದಿಗೆ ಸಮದೂಗಿಸಲ್ಪಡುವುದು.

ಏಕ ಕೇಂದ್ರೀಯ ಸಮನ್ವಯಿ ಸಂಯುಕ್ತಗಳ ನಾಮಕರಣ

ಸಮನ್ವಯಿ ಸಂಯುಕ್ತಗಳ ಹೆಸರುಗಳನ್ನು, ಸಂಯೋಜನೆಯ ನಾಮಕರಣ ತತ್ವಗಳನ್ನು ಅನುಸರಿಸಿ ಪಡೆಯಲಾಗಿದೆ. ಹೀಗಾಗಿ ಕೇಂದ್ರೀಯ ಪರಮಾಣುವನ್ನು ಸುತ್ತುವರಿದ ಗುಂಪುಗಳನ್ನು ಹೆಸರಿನಲ್ಲಿ ಗುರುತಿಸಬೇಕು. ಅವುಗಳನ್ನು ಸೂಕ್ತ ಗುಣಕದೊಂದಿಗೆ ಕೇಂದ್ರೀಯ ಪರಮಾಣುವಿನ ಹೆಸರಿನ ಪೂರ್ವ ಪ್ರತ್ಯಯಗಳಾಗಿ ಪಟ್ಟಿ ಮಾಡಬೇಕು. ಸಮನ್ವಯಿ ಸಂಯುಕ್ತಗಳ ನಾಮಕರಣ ಮಾಡುವಾಗ ಈ ಕೆಳಗಿನ ನಿಯಮಗಳನ್ನು ಉಪಯೋಗಿಸುತ್ತಾರೆ.

1) ಧನಾತ್ಮಕ ಮತ್ತು ಋಣಾತ್ಮಕ ಆವೇಶವಿರುವ ಎರಡು ಸಮನ್ವಯಿ ಘಟಕಗಳಲ್ಲಿ, ಧನ ಅಯಾನ್ ಅನ್ನು ಮೊದಲು ಹೆಸರಿಸಬೇಕು.

2) ಕೇಂದ್ರೀಯ ಪರಮಾಣು/ಅಯಾನ್‌ನ ಮೊದಲ ಲಿಗ್ಯಾಂಡ್‌ಗಳನ್ನು ಆಂಗ್ಲ ವರ್ಣಮಾಲೆಯ ಕ್ರಮದಲ್ಲಿ ಹೆಸರಿಸಬೇಕು. (ಈ ಪದ್ಧತಿಯು ಸೂತ್ರವನ್ನು ಬರೆಯುವುದರ ತದ್ವಿರುದ್ಧವಾಗಿದೆ).

3) ಋಣ ಆವೇಶವುಳ್ಳ ಲಿಗ್ಯಾಂಡ್‌ಗಳು 'O' ದಿಂದ ಅಂತ್ಯಗೊಂಡು, H_2O ಗೆ (Aqua), NH_2 ಅಮೀನ್, CO ಗೆ ಕಾರ್ಬೋನಿಲ್ ಮತ್ತು NO ಗೆ ನೈಟ್ರೋಸಿಲ್ ಹೊರತುಪಡಿಸಿ, ತಟಸ್ಥ ಮತ್ತು ಧನ ಆವೇಶವುಳ್ಳ ಲಿಗ್ಯಾಂಡ್‌ಗಳ ಹೆಸರುಗಳು ಅವೇ ಆಗಿವೆ. ಸಮನ್ವಯಿ ಘಟಕಗಳ ಸೂತ್ರ ಬರೆಯುವಾಗ ಇವುಗಳನ್ನು ಆವರಣ ಚಿಹ್ನೆಯಲ್ಲಿ () ಇಡುತ್ತಾರೆ.

4)ಸಮನ್ವಯಿ ಸಂಯುಕ್ತಗಳಲ್ಲಿ ಇರುವ ವೈಯಕ್ತಿಕ ಲಿಗ್ಯಾಂಡ್‌ಗಳ ಸಂಖ್ಯೆಯನ್ನು ಸೂಚಿಸಲು ಪೂರ್ವ ಪ್ರತ್ಯಯಗಳಾದ ಮೊನೊ, ಡೈ, ಟ್ರೈ ಮುಂತಾದವುಗಳನ್ನು ಉಪಯೋಗಿಸಿದೆ. ಲಿಗ್ಯಾಂಡ್‌ಗಳ ಹೆಸರಿನಲ್ಲಿ ಸಂಖ್ಯಾವಾಚಕ ಪೂರ್ವ ಪ್ರತ್ಯಯಗಳಿದ್ದರೆ ಬಿಸ್, ಟ್ರಸ್, ಟೆಟ್ರಾಕಿಸ್ ಮುಂತಾದ ಪದಗಳನ್ನು ಉಪಯೋಗಿಸಿ, ಅದಕ್ಕೆ ಸಂಬಂಧಿಸಿದ ಲಿಗ್ಯಾಂಡ್‌ಗಳನ್ನು ಆವರಣದಲ್ಲಿ ಇಡುವುದು, ಉದಾಹರಣೆಗೆ $[NiCl_2(PPh_3)_2]$ ಅನು ಡೈಕ್ಲೋರೊಬಿಸ್ (ಟ್ರೈಫೀನೈಲ್‌ಪಾಸ್ಫೀನ್) ಎಂದು ಹೆಸರಿಸಿದೆ.

5) ಧನ ಅಯಾನ್, ಋಣ ಅಯಾನ್ ಅಥವಾ ತಟಸ್ಥ ಸಮನ್ವಯಿ ಘಟಕಗಳ ಲೋಹದ ಉತ್ಕರ್ಷಣಕಾರಿ ಸಂಖ್ಯೆಯನ್ನು ರೋಮನ್ ಅಂಕೆಯಲ್ಲಿ ಆವರಣದಲ್ಲಿ ಸೂಚಿಸಲ್ಪಡುತ್ತದೆ.

6) ಸಂಕೀರ್ಣ ಅಯಾನ್ ಧನ ಅಯಾನ್ ಆಗಿದ್ದರೆ, ಲೋಹವನ್ನು ಧಾತುವಿನಂತೆಯೆ ಹೆಸರಿಸುತ್ತಾರೆ. ಉದಾಹರಣೆಗೆ ಸಂಕೀರ್ಣ ಧನ ಅಯಾನ್‌ನಲ್ಲಿ ಕೋಬಾಲ್ಟ್ ಎಂದು ಮತ್ತು ಪ್ಲಾಟಿನಮ್ ಎಂದು ಕರೆದಿದೆ. ಒಂದು ವೇಳೆ ಸಂಕೀರ್ಣ ಅಯಾನ್ ಋಣ ಅಯಾನ್ ಆಗಿದ್ದರೆ ಲೋಹದ ಹೆಸರು ಏಟ್ (ate) ಎಂಬ ಅಂತ್ಯಪ್ರತ್ಯಯದಿಂದ ಕೊನೆಯಾಗುತ್ತದೆ. ಉದಾಹರಣೆಗೆ, ಸಂಕೀರ್ಣ ಋಣ ಅಯಾನ್ [Co(SCN)4]2- ನಲ್ಲಿ Co ವನ್ನು ಕೊಬಾಲ್ಟೇಟ್ ಎಂದು ಕರೆಯುತ್ತಾರೆ. ಸಂಕೀರ್ಣ ಅಯಾನ್‌ನಲ್ಲಿ ಇರುವ ಕೆಲವು ಲೋಹಗಳಿಗೆ ಲ್ಯಾಟಿನ್ ಹೆಸರನ್ನು ಉಪಯೋಗಿಸಿದೆ. ಉದಾ: Fe ಗೆ ಫೆರೇಟ್

6) ತಟಸ್ಥ ಸಂಕೀರ್ಣ ಅಣುವನ್ನು ಸಂಕೀರ್ಣ ಧನ ಅಯಾನ್‌ನ ಸಾಮ್ಯತೆಯಲ್ಲಿಯೇ ಹೆಸರಿಸಿದೆ.

ಉದಾಹರಣೆ: [Cr(NH3)3(H2O)3]Cl3

ಟ್ರೈ ಅಮೀನ್ ಟ್ರೈಆಕ್ವಾಕ್ರೋಮಿಯಂ (3) ಕ್ಲೋರೈಡ್

ವಿವರಣೆ: ಚೌಕ ಆವರಣದ ಒಳಗೆ ಇರುವ ಸಂಕೀರ್ಣ ಅಯಾನ್ ಬಂಧ ಅಯಾನ್ ಆಗಿದೆ. ಆಂಗ್ಲ ವರ್ಣಮಾಲೆಯ ಕ್ರಮಾನುಸಾರ ಅಮೀನ್ ಲಿಗ್ಯಾಂಡ್‌ಗಳನ್ನು ಅಕ್ವಾ ಲಿಗ್ಯಾಂಡ್‌ಗಿಂತ ಮೊದಲು ಹೆಸರಿಸಲಾಗಿದೆ. ಸಂಯುಕ್ತದಲ್ಲಿ 3 ಕ್ಲೋರೈಡ್ ಅಯಾನ್‌ಗಳು ಇರುವುದರಿಂದ ಸಂಕೀರ್ಣ ಅಯಾನ್‌ನ ಆವೇಶ +3 ಆಗಿರಲೇಬೇಕು (ಸಂಯುಕ್ತವು ವಿದ್ಯುದೀಯವಾಗಿ ತಟಸ್ಥವಾಗಿರುವುದರಿಂದ) ಸಂಕೀರ್ಣ ಅಯಾನ್‌ನ ಮೇಲಿನ ಆವೇಶ ಮತ್ತು ಲಿಗ್ಯಾಂಡ್‌ಗಳ ಮೇಲಿನ ಆವೇಶದಿಂದ ನಾವು ಲೋಹದ ಉತ್ಕರ್ಷಣಾಕಾರಿ ಸಂಖ್ಯೆಯನ್ನು ಲೆಕ್ಕಾಚಾರ ಮಾಡಬಹುದು. ಈ ಉದಾಹರಣೆಯಲ್ಲಿ ಎಲ್ಲಾ ಲಿಗ್ಯಾಂಡ್‌ಗಳು ತಟಸ್ಥ ಅಣುಗಳು ಆದುದರಿಂದ ಕ್ರೋಮಿಯಂ ಉತ್ಕರ್ಷಣಕಾರಿ ಸಂಖ್ಯೆ ಸಂಕೀರ್ಣ ಅಯಾನ್‌ನ +3 ಆವೇಶಕ್ಕೆ ಸಮನಾಗಿರಬೇಕು.

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ 'ಕೆಮಿಕಲ್ ಕೈನೆಟಿಕ್ಸ್_ಇಂಟಿಗ್ರೇಟೆಡ್ ರೇಟ್ ಲಾಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3fa47au

ರೆಮ್‌ಡಿಸಿವಿರ್ ಅಕ್ರಮ ಮಾರಾಟ; ನಾಲ್ವರ ಬಂಧನ

ಗದಗ: ಕಾಳಸಂತೆಯಲ್ಲಿ ರೆಮ್‌ಡಿಸಿವಿರ್ ಮಾರಾಟ ಮಾಡುತ್ತಿದ್ದ ಜಾಲ ಭೇದಿಸಿರುವ ನಗರದ ಪೊಲೀಸರು ಆರೋಗ್ಯ ಇಲಾಖೆ ಸಿಬ್ಬಂದಿ ಸೇರಿದಂತೆ ನಾಲ್ಕು ಮಂದಿಯನ್ನು ಬಂಧಿಸಲಾಗಿದೆ. ಮಹಿಳಾ ಆರೋಪಿಯ ಪತ್ತೆಗೆ ಬಲೆ ಬೀಸಿದ್ದಾರೆ.

ಮಹಮದ್ ಇಸ್ಮಾಯಿಲ್, ಫಿರೋಜ್ ಖಾನ್, ಜಿಮ್ಸ್‌ನ ಲ್ಯಾಬ್ ಟೆಕ್ನೀಷಿಯನ್ ಗವಿಸಿದ್ದಯ್ಯ ಹಿರೇಮಠ, ರಮೇಶ ಚವಟಗಿ ಹಾಗೂ ಶುಶ್ರೂಷಕಿ ಜ್ಯೋತಿ ಲಮಾಣಿ ಆರೋಪಿಗಳು.

‘ಜೀವರಕ್ಷಕ ಚುಚ್ಚುಮದ್ದನ್ನು ₹30 ಸಾವಿರಕ್ಕೆ ಒಂದರಂತೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ಸುಳಿವು ಆಧರಿಸಿ ಸಿಇಎನ್ ಠಾಣೆಯ ಇನ್‌ಸ್ಪೆಕ್ಟರ್ ಮಹಾಂತೇಶ ಟಿ. ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಿದೆ. ಅವರು ಗದಗ–ಮುಳಗುಂದ ರಸ್ತೆಯ ರಾಧಾಕೃಷ್ಣ ನಗರದ ಬಳಿ ಸಿಕ್ಕಿಬಿದ್ದಿದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್. ತಿಳಿಸಿದ್ದಾರೆ.

ಪೊಲೀಸರು ಬಂಧಿತರಿಂದ 14 ರೆಮ್‌ಡಿಸಿವಿರ್, ₹2,500 ನಗದು ಹಾಗೂ 4 ಮೊಬೈಲ್ ವಶಪಡಿಸಿಕೊಂಡಿದ್ದಾರೆ.

ಪರಿಹಾರವಿಲ್ಲ–ಸುರಕ್ಷತಾ ಪರಿಕರಗಳೂ ಇಲ್ಲ • ಅಪಾಯದಲ್ಲಿ ಕಾರ್ಯ ನಿರ್ವಹಿಸುವ ಒತ್ತಡ

ಶಿಕ್ಷಕರಿಗೆ ಕೋವಿಡ್ ಕರ್ತವ್ಯದ ‘ಹೊರೆ’!

• ಗುರು ಪಿ.ಎಸ್.



ಕೋವಿಡ್ ಕರ್ತವ್ಯ ನಿರ್ವಹಿಸುವ ಶಿಕ್ಷಕರು ಸೋಂಕಿತರ ಮನೆಗೆ ಭೇಟಿ ನೀಡಿ ಭಾವಚಿತ್ರ ಕಳಿಸುವುದನ್ನು ಕಡ್ಡಾಯ ಮಾಡಲಾಗಿದೆ

ಬೆಂಗಳೂರು: ರಾಜ್ಯದಲ್ಲಿ ಸುಮಾರು 60 ಸಾವಿರಕ್ಕೂ ಹೆಚ್ಚು ಶಿಕ್ಷಕರು ಕೋವಿಡ್ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕರ್ತವ್ಯದ ವೇಳೆ ಮೃತಪಟ್ಟವರ ಕುಟುಂಬಕ್ಕೆ ₹30 ಲಕ್ಷ ಪರಿಹಾರ ಕೊಡುವುದು ಒಂದೆಡೆ ಇರಲಿ, ಈ ಶಿಕ್ಷಕರಿಗೆ ಕನಿಷ್ಠ ಮಾಸ್ಕ್, ಸ್ಯಾನಿಟೈಸರ್, ಗ್ಲೌಸ್‌ನಂತಹ ಸುರಕ್ಷತಾ ಸಾಮಗ್ರಿಗಳನ್ನೂ ಸರ್ಕಾರ ಒದಗಿಸುತ್ತಿಲ್ಲ.

ಆಸ್ಪತ್ರೆ, ರೈಲು ಮತ್ತು ಬಸ್ ನಿಲ್ದಾಣ, ಚೆಕ್‌ಪೋಸ್ಟ್‌ಗಳಲ್ಲಿ ಶಿಕ್ಷಕರನ್ನು ನಿಯೋಜಿಸಲಾಗುತ್ತಿದೆ. ಕೋವಿಡ್ ವಾರ್‌ರೂಮ್, ಸಹಾಯವಾಣಿಯಲ್ಲಿ ಇವರು ಕೆಲಸ ಮಾಡುತ್ತಿರುವುದಲ್ಲದೆ, ಸೋಂಕಿತರ ಮನೆಗೇ ಹೋಗಿ, ಅವರ ಮತ್ತು ಪ್ರಾಥಮಿಕ, ದ್ವಿತೀಯ ಸಂಪರ್ಕಿತರ ವಿವರವನ್ನು ಸಂಗ್ರಹಿಸಿ, ಅವರ ಕುಟುಂಬದವರೊಂದಿಗೆ ಫೋಟೊ ತೆಗೆಸಿ, ಅದನ್ನು ಸಂಬಂಧಪಟ್ಟವರಿಗೆ ರವಾನಿಸಬೇಕಾಗಿದೆ.

’ಶಿಕ್ಷಕರು ಸೋಂಕಿತರ ನೇರ ಸಂಪರ್ಕಕ್ಕೆ ಬರುವಂತಹ ಕಾರ್ಯಗಳನ್ನು ಮಾಡುತ್ತಿದ್ದಾರೆ. ಆದರೆ, ಅವರಿಗೆ ಕನಿಷ್ಠ ಸುರಕ್ಷತಾ ಪರಿಕರಗಳನ್ನೂ ಒದಗಿಸುತ್ತಿಲ್ಲ. ಶಿಕ್ಷಕರು ಮುಂಚೂಣಿ ಕಾರ್ಯಕರ್ತರು ಎಂಬ ಆದೇಶವನ್ನು ಇನ್ನೂ ಅಧಿಕೃತವಾಗಿ ಹೊರಡಿಸಿಲ್ಲ. ಕಂದಾಯ ಇಲಾಖೆಯಿಂದ ಈ ಆದೇಶ ಹೊರಡಬೇಕಿದೆ‘ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ ಮತ್ತು ಚಂದ್ರಶೇಖರ ನುಗ್ಗಲಿ ಹೇಳಿದರು.

ಪ್ರಜಾವಾಣಿ ವಿಶೇಷ

‘ಯಾವುದೇ ಸೌಲಭ್ಯ ಕೇಳಬೇಕು ಎಂದರೆ ಸಂಬಂಧಪಟ್ಟ ಜಿಲ್ಲಾಡಳಿತಗಳಿಗೆ ಕೇಳಬೇಕು. ಶಿಕ್ಷಣ ಇಲಾಖೆಯಿಂದ ಸರಿಯಾದ ಪರಿಹಾರ ಇಲ್ಲ. ರಜಾ ದಿನಗಳಲ್ಲಿಯೂ ಕೆಲಸ ಮಾಡುತ್ತಿದ್ದೇವೆ. ಗಳಿಕೆ ರಜೆ ಕೊಡುತ್ತೇವೆ ಎಂದು ಹೇಳಿದ್ದರು. ಆ ಸೌಲಭ್ಯವನ್ನೂ ನೀಡಿಲ್ಲ’ ಎಂದು ಪ್ರೌಢಶಾಲಾ ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಬಿ. ಲಿಂಗರಾಜು ಹೇಳಿದರು.

ಕೋವಿಡ್: ಮೂವರು ಶಿಕ್ಷಕರು ಸಾವು

ಬೆಳಗಾವಿ: ತಾಲ್ಲೂಕಿನಲ್ಲಿ ಭಾನುವಾರ ಮೂವರು ಶಿಕ್ಷಕರು ಸಾವಿಗೀಡಾಗಿದ್ದಾರೆ.

ಅವರಿಗೆ ಕೋವಿಡ್–19 ದೃಢಪಟ್ಟಿತ್ತು.

‘ಶಿಕ್ಷಕರನ್ನು ಮುಂಚೂಣಿ ಕಾರ್ಯಕರ್ತರು ಎಂದು ಪರಿಗಣಿಸಿ ಲಸಿಕೆ ನೀಡಲಾಗುತ್ತಿದೆ. ಶಿಕ್ಷಕರ ಕುಟುಂಬಕ್ಕೂ ಆದ್ಯತೆ ಮೇರೆಗೆ ಲಸಿಕೆ ನೀಡಬೇಕು’ ಎಂದು ಒತ್ತಾಯಿಸಿದರು.

‘ಅನುದಾನಿತ ಶಾಲಾ ಶಿಕ್ಷಕರು ಕೋವಿಡ್‌ನಿಂದ ಮೃತಪಟ್ಟರೆ ನಯಾಪೈಸೆ ಪರಿಹಾರವೂ ಅವರಿಗೆ ಸಿಗದು. ಕರ್ತವ್ಯಕ್ಕೆ ನಿಯೋಜಿಸುತ್ತಾರೆ ವಿನಾ ಅವರನ್ನು ಕೊರೊನಾ ಸೇನಾನಿಗಳು ಎಂದು ಪರಿಗಣಿಸಲ್ಲ’ ಎಂದು ಅನುದಾನಿತ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಪಿ. ಕರಬಸಪ್ಪ ಹೇಳಿದರು.

‘ಈಗ ಶಾಲೆಗಳು ನಡೆಯುತ್ತಿಲ್ಲ. ಶಿಕ್ಷಕರಿಗೆ ಸುಮ್ಮನೆ ವೇತನ ಏಕೆ ಕೊಡಬೇಕು ಎಂಬ ಉದ್ದೇಶದಿಂದ ಸರ್ಕಾರ ಅವರನ್ನು ಬೇರೆ ಕಾರ್ಯಗಳಿಗೆ ಬಳಸಿಕೊಳ್ಳುವ ಮೂಲಕ ವ್ಯವಹಾರಿಕವಾಗಿ ಯೋಚಿಸುತ್ತಿದೆ’ ಎಂದು ಶಿಕ್ಷಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಸಚಿವ ಎಸ್. ಸುರೇಶ್‌ಕುಮಾರ್ ಅವರಿಗೆ ಕರೆ ಮಾಡಲಾಯಿತು. ಅವರು ಸ್ವೀಕರಿಸಲಿಲ್ಲ.

ಶಿಕ್ಷಕರ ಪ್ರಮುಖ ಬೇಡಿಕೆಗಳು

- ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ₹30 ಲಕ್ಷ ಪರಿಹಾರ ನೀಡಬೇಕು
- ಕರ್ತವ್ಯನಿರತ ಶಿಕ್ಷಕರಿಗೆ ಮಾಸ್ಕ್, ಸ್ಯಾನಿಟೈಸರ್, ಗ್ಲೌಸ್, ಫೇಸ್‌ಶೀಲ್ಡ್ ವಿತರಿಸಬೇಕು
- ಶಿಕ್ಷಕರು ಮತ್ತು ಅವರ ಕುಟುಂಬಕ್ಕೆ ಆದ್ಯತೆ ಮೇರೆಗೆ ಲಸಿಕೆ ವಿತರಿಸಬೇಕು
- ಆಸ್ಪತ್ರೆಗಳಲ್ಲಿ ಶೇ 10 ರಷ್ಟು ಹಾಸಿಗೆಗಳನ್ನು ಮೀಸಲಿಡಬೇಕು
- ಅನುದಾನಿತ ಶಾಲೆ ಮತ್ತು ಗುತ್ತಿಗೆ ಶಿಕ್ಷಕರನ್ನೂ ಮುಂಚೂಣಿ ಕಾರ್ಯಕರ್ತರೆಂದು ಪರಿಗಣಿಸಬೇಕು

‘ಕೆಲಸಕ್ಕುಂಟು, ಲೆಕ್ಕಕ್ಕಿಲ್ಲ’

‘ಗುತ್ತಿಗೆ ಶಿಕ್ಷಕರನ್ನೂ ಕೋವಿಡ್ ಕರ್ತವ್ಯಕ್ಕೆ ನಿಯೋಜಿಸಲಾಗುತ್ತಿದೆ. ಕಾಯಂ ಶಿಕ್ಷಕರು ಮಾಡುವ ಎಲ್ಲ ಕಾರ್ಯಗಳನ್ನೂ ನಾವು ಮಾಡುತ್ತೇವೆ. ನಮ್ಮನ್ನು ಕೊರೊನಾ ಸೇನಾನಿಗಳು ಎಂದೇ ಸರ್ಕಾರ ಪರಿಗಣಿಸಿಲ್ಲ’ ಎಂದು ಬಿಬಿಎಂಪಿ ಶಾಲೆಗಳ ಗುತ್ತಿಗೆ ಶಿಕ್ಷಕರೊಬ್ಬರು ಹೇಳಿದರು.

‘ಸುರಕ್ಷತಾ ಕಿಟ್‌ಗಳಿರಲಿ ನಮಗೆ ಕೊಡುವ ಕನಿಷ್ಠ ಸಂಬಳವನ್ನೂ ಸರ್ಕಾರ ಸರಿಯಾಗಿ ಪಾವತಿಸುತ್ತಿಲ್ಲ’ ಎಂದರು.

‘ಕರ್ತವ್ಯದ ವೇಳೆ ಸೋಂಕು ತಗುಲಿದವರಿಗೆ ಕೆಲವು ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ಬಿಬಿಎಂಪಿ ಹೇಳುತ್ತದೆ. ಆದರೆ, ಚಿಕಿತ್ಸೆಗಾಗಿ ಹೋದರೆ ಹಲವು ಷರತ್ತುಗಳನ್ನು ಹಾಕುತ್ತಾರೆ. ಕೋವಿಡ್ ಪೀಡಿತ ಶಿಕ್ಷಕರಿಬ್ಬರಿಗೆ ಈ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸಿಗಲೇ ಇಲ್ಲ‘ ಎಂದು ಹೇಳಿದರು.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 24 ಲಕ್ಷಕ್ಕೂ ಹೆಚ್ಚು ಜನ ಕಾಯಿಲೆಪೀಡಿತರಾಗಿದ್ದು, 25 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:

(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.fnc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

‘ಖನಿಜ ಸಂಪತ್ತು ಸಮೀಕ್ಷೆಗೆ ಜಾಗತಿಕ ಟೆಂಡರ್’

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಖನಿಜ ಸಂಪತ್ತಿನ ಸಮೀಕ್ಷೆಗೆ ಜಾಗತಿಕ ಟೆಂಡರ್ ಕರೆಯಲು ಚಿಂತನೆ ನಡೆಸಲಾಗಿದೆ’ ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

‘ಹೊಸ ತಂತ್ರಜ್ಞಾನ ಅಳವಡಿಸಿಕೊಂಡು ಖನಿಜ ಸಂಪತ್ತನ್ನು ಸಮೀಕ್ಷೆ ನಡೆಸಿ ಸಂರಕ್ಷಣೆ ಮಾಡುವ ಉದ್ದೇಶವಿದೆ. ನಮ್ಮಲ್ಲಿ ಲಭ್ಯವಿರುವ ಖನಿಜ ಸಂಪತ್ತಿನ ಪ್ರಮಾಣ, ಗುಣಮಟ್ಟದ ನಿಖರ ಮಾಹಿತಿ ತಿಳಿಯಬೇಕಿದೆ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ರಾಜ್ಯದಲ್ಲಿರುವ ಖನಿಜ ಸಂಪತ್ತನ್ನು ಈ ಹಿಂದೆ ಹಳೆಯ ಪದ್ಧತಿಯಲ್ಲಿ ಸಮೀಕ್ಷೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಆಧುನಿಕ ತಂತ್ರಜ್ಞಾನದ ಮೂಲಕ ಸಮೀಕ್ಷೆ ಮಾಡಿಸಲಿದ್ದೇವೆ. ಆಸ್ಟ್ರೇಲಿಯಾ, ಬ್ರೆಜಿಲ್ ಮುಂತಾದ ದೇಶಗಳಲ್ಲಿ ಸಮೀಕ್ಷೆಗೆ ಬಳಸುವ ತಂತ್ರಜ್ಞಾನ ನಮ್ಮಲ್ಲಿ ಲಭ್ಯವಿಲ್ಲ. ಜಾಗತಿಕ ಟೆಂಡರ್ ಕರೆದರೆ, ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ಸಮೀಕ್ಷೆ ನಡೆಸಲು ಸಾಧ್ಯವಾಗಲಿದೆ’ ಎಂದು ಅಭಿಪ್ರಾಯಪಟ್ಟರು.

5 ಟನ್ ಚಿನ್ನ ತೆಗೆಯಲು ನಿರ್ಧಾರ: ನಿರಾಣಿ



ಮಂಡ್ಯ: ‘ರಾಯಚೂರು ಜಿಲ್ಲೆ ಹಟ್ಟಿ ಚಿನ್ನದ ಗಣಿಯಿಂದ ಪ್ರತಿವರ್ಷ 5 ಟನ್ ಚಿನ್ನ ತೆಗೆಯಲು ನಿರ್ಧಾರ ಮಾಡಲಾಗಿದೆ. ಅದಕ್ಕಾಗಿ ಡಿಪಿಆರ್ ತಯಾರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ಭಾನುವಾರ ಹೇಳಿದರು.

‘ಸದ್ಯ ಹಟ್ಟಿ ಚಿನ್ನದ ಗಣಿಯಲ್ಲಿ ವರ್ಷಕ್ಕೆ 1.5 ಟನ್ ಚಿನ್ನ ತೆಗೆಯಲಾಗುತ್ತಿದೆ. ಚಿನ್ನವನ್ನು ನೇರವಾಗಿ ಮಾರಾಟ ಮಾಡದೇ ಚಿನ್ನದ ನಾಣ್ಯ ತಯಾರಿಸಿ ಆಭರಣ ತಯಾರಿಕೆಗೆ ಆದ್ಯತೆ ನೀಡಲಾಗುವುದು. ಬೆಂಗಳೂರಿನ ಖನಿಜ ಭವನದಲ್ಲಿಯೇ ಆಭರಣ ಮಳಿಗೆ ಸ್ಥಾಪಿಸಲಾಗುವುದು. ಅದಕ್ಕಾಗಿ ಒಂದು ನಿಗಮ ಸ್ಥಾಪನೆ ಮಾಡಲು ಉದ್ದೇಶಿಸಲಾಗಿದೆ’ ಎಂದರು.

ರೋಗಿಗಳಲ್ಲಿ ‘ಅಧಿಕ ಸಕ್ಕರೆ ಅಂಶ’

ಒಂದನೇ ಪುಟದಿಂದ

‘ಡಯಾಬಿಟೀಸ್ ಇಂಡಿಯಾ’ದ ಅಧ್ಯಕ್ಷ ಡಾ. ಎಸ್. ಆರ್.ಅರವಿಂದ್ ‘ಪ್ರಜಾವಾಣಿ’ ಜತೆ ಮಾತನಾಡಿ, ‘ಈಗ ಕಾಣಿಸಿಕೊಳ್ಳುತ್ತಿರುವ ಮಧು ಮೇಹಕ್ಕೆ ಹೊಸ ಆರಂಭ (ನ್ಯೂ ಆನ್‌ಸೆಟ್) ಎಂದು ಕರೆಯಲಾಗುತ್ತದೆ. ಕೋವಿಡ್‌ನಿಂದ ಗುಣಮುಖರಾದವರಲ್ಲಿ ಶೇ 5 ರಿಂದ 10ರಷ್ಟು ಜನರಲ್ಲಿ ಮಧುಮೇಹದ ಪ್ರಕರಣಗಳು ಕಾಣಿಸಿಕೊಂಡಿವೆ’ ಎಂದರು.

‘ಹಿಂದೆ ದೀರ್ಘಾವಧಿಯಲ್ಲಿ ಸ್ಟಿರಾಯ್ಡ್ ಬಳಕೆ ಮಾಡಿದಾಗ ಮಧುಮೇಹ ಬರುತ್ತಿತ್ತು. ಆದರೆ, ಈಗ ಕೋವಿಡ್ ರೋಗಿಗಳಲ್ಲಿ ವ್ಯಾಪಕವಾಗಿ ಬಳಕೆ ಮಾಡುತ್ತಿರುವುದರಿಂದ, ಅದರ ಪರಿಣಾಮ ಬೇಗನೇ ಗೊತ್ತಾಗುತ್ತಿದೆ. ಕೊರೊನಾ ವೈರಾಣು ನೇರವಾಗಿ ಮೇದೋಜೀರಕವನ್ನು ಹಾನಿ ಮಾಡುತ್ತದೆ ಎಂಬ ಅಂಶ ಗೊತ್ತಾಗಿದೆ. ಇದನ್ನು ಪುಷ್ಟೀಕರಿಸಲು ಇನ್ನಷ್ಟು ಪುರಾವೆಗಳು ಬೇಕು. ಆದರೆ, ಇನ್ಸುಲಿನ್ ಉತ್ಪಾದಿಸುವ ಬಿಟಾ ಕೋಶದ ಬಯಾಪ್ಸಿ ಮಾಡಿದಾಗ ವೈರಾಣು ದಾಳಿಯಿಂದ ಬಿಟಾ ಕೋಶ ನಾಶ ಆಗಿದ್ದು ಬೆಳಕಿಗೆ ಬಂದಿದೆ’ ಎಂದು ಅವರು ಹೇಳಿದರು.

‘ಕೋವಿಡ್‌ನಿಂದ ಯಾರೇ ಆಸ್ಪತ್ರೆಗೆ ದಾಖಲಾದರೂ ಪ್ರತಿದಿನ ಎರಡು ಬಾರಿ ರಕ್ತದಲ್ಲಿ ಸಕ್ಕರೆ ಅಂಶ ಮತ್ತು ಎಚ್‌ಬಿಎ1ಸಿ ಪರೀಕ್ಷೆ ಕಡ್ಡಾಯವಾಗಿ ಮಾಡಲೇಬೇಕು. ಅದು ಮಾಡದೇ ಸ್ಟಿರಾಯ್ಡ್ ಕೊಟ್ಟರೆ ರಕ್ತದಲ್ಲಿ ಏಕಾಏಕಿ ಸಕ್ಕರೆ ಪ್ರಮಾಣ 500 ರಿಂದ 600ಕ್ಕೆ ಹೋಗಿ ಗಂಭೀರ ಪರಿಸ್ಥಿತಿ ಉದ್ಭವಿಸುತ್ತದೆ’ ಎನ್ನುತ್ತಾರೆ ಅರವಿಂದ್.

ಬೆಂಗಳೂರಿನಲ್ಲಿ ಡಯಾಬಿಟೀಸ್ ಕ್ಲಿನಿಕ್ ಅಥವಾ ಆಸ್ಪತ್ರೆಗಳಿಗೆ ಬರುತ್ತಿರುವ ಒಟ್ಟು ಮಧುಮೇಹಿಗಳ ಪೈಕಿ, 8–10 ಮಂದಿ ಹೊಸ ರೋಗಿಗಳು. ಇವರು ಕೋವಿಡ್‌ನಿಂದ ಗುಣಮುಖರಾಗಿ ಬಂದವರು. 40 ವರ್ಷಕ್ಕಿಂತ ಕೆಳಗಿನವರು ಎಂದು ಅವರು ವಿವರಿಸಿದರು.

‘ಕೋವಿಡ್ ರೋಗಿಗಳ ಚಿಕಿತ್ಸೆ ಸಂದರ್ಭದಲ್ಲಿ ರಕ್ತದಲ್ಲಿ ಸಕ್ಕರೆ ಅಂಶ ಏರುಪೇರಾಗುವುದನ್ನು ಗಮನವಿಡಲು (ಆಮ್ಲಜನಕದ ಮೇಲೆ ಗಮನ ಇಡುವಂತೆ) ಹಾಗೂ ಅದಕ್ಕೆ ಸಂದರ್ಭೋಚಿತವಾಗಿ ಔಷಧ ಮತ್ತು ಇತರ ಉಪಶಮನಗಳ ಬಗ್ಗೆ ಸರ್ಕಾರಕ್ಕೆ ಸಲಹೆಗಳ ಮಾರ್ಗಸೂಚಿ ನೀಡಿದ್ದೇವೆ’ ಎಂದು ಡಾ.ಎಸ್.ಆರ್. ಅರವಿಂದ್ ಅವರು ತಿಳಿಸಿದರು.

ಬೆಂಗಳೂರು:‘ಗ್ರಾಮೀಣರಿಗೆ ಸಿಗದ ಆರೋಗ್ಯ ಭಾಗ್ಯ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಮೇ 23) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಒಳನೋಟ

ಮರೀಚಿಕೆಯಾದ ಆರೋಗ್ಯ ಸೇವೆ

ಗ್ರಾಮೀಣ ಆರೋಗ್ಯ ಸುಧಾರಿಸಿ



‘ಗ್ರಾಮೀಣ ಭಾಗದ ಅಭಿವೃದ್ಧಿಯೇ ದೇಶದ ಅಭಿವೃದ್ಧಿ’ ಎಂದಿದ್ದರು ಮಹಾತ್ಮ ಗಾಂಧೀಜಿ. ಈ ಹೇಳಿಕೆ ಇಂದಿಗೂ ಕೆಲ ನಾಯಕರ ಭಾಷಣದಲ್ಲೇ ಉಳಿದಿದೆ. ಗ್ರಾಮೀಣ ಭಾಗದ ವಸ್ತುಸ್ಥಿತಿ ಇಂದಿಗೂ ಕರುಣಾಜನಕ. ಆರೋಗ್ಯ ಸೌಕರ್ಯಗಳು ಮರೀಚಿಕೆಯಾಗಿವೆ. ಆಸ್ಪತ್ರೆ ಗಳಿದ್ದರೂ ವೈದ್ಯಕೀಯ ಸಿಬ್ಬಂದಿ ಇರುವುದಿಲ್ಲ. ನಗರಗಳ ಅಭಿವೃದ್ಧಿ ಜೊತೆಗೆ ಗ್ರಾಮೀಣ ಆರೋಗ್ಯ ಸ್ಥಿತಿಯನ್ನೂ ಸುಧಾರಿಸಿ.

ರಾಜೇಶ್ವರಿ, ರಾಯಚೂರು

ಬಡವರಿಗಿಲ್ಲದ ಆರೋಗ್ಯ ಭಾಗ್ಯ



ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜನರಿಂದ ದೂರವೇ ಉಳಿದಿವೆ. ತುರ್ತು ಚಿಕಿತ್ಸೆಗೆಂದು ಹೋದರೆ, ರೋಗಿಯನ್ನು ಸಲಹುವವರೇ ಇರುವುದಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಸೂಕ್ತ ಸೌಕರ್ಯಗಳಿಲ್ಲ, ಸಿಬ್ಬಂದಿ ಕೊರತೆ ಎಲ್ಲೆಡೆ ಕಾಣಸಿಗುವುದು.

ಸರ್ಕಾರಿ ಆಸ್ಪತ್ರೆಗೆ ಹೋಗಿ ಮೃತದೇಹವಾಗಿ ಮರಳಬೇಕು. ಇದರಿಂದ ಅನಾರೋಗ್ಯ ಎದುರಾದರೆ ಸಾಲ ಮಾಡಿಯಾದರೂ ಖಾಸಗಿ ಆಸ್ಪತ್ರೆಗಳತ್ತ ಹೆಜ್ಜೆ ಹಾಕುತ್ತಾರೆ. ಈ ರೀತಿಯಾದರೆ ಜನಸಾಮಾನ್ಯರ ಗತಿ ಏನು?

ರೇಖಾ, ಮಂಗಳೂರು

ಗ್ರಾಮಗಳಿಗೆ ಆದ್ಯತೆ ನೀಡಿ



ಕೋವಿಡ್‌ನಿಂದಾಗಿ ರಾಜ್ಯದ ಚಿತ್ರಣವೇ ಬದಲಾಗಿದೆ. ಜನರು ಆತಂಕಗೊಂಡಿದ್ದಾರೆ. ಗ್ರಾಮೀಣ ಭಾಗದಲ್ಲಿ ಸೋಂಕಿತರ ಪಾಡು ಹೇಳತೀರದು. ನಗರಗಳಲ್ಲಿ ಶಿಕ್ಷಿತರು ಹೆಚ್ಚಾಗಿರುವುದರಿಂದ ಆರೋಗ್ಯ ಕಾಳಜಿ ನಿಭಾಯಿಸುತ್ತಾರೆ. ಆದರೆ, ಗ್ರಾಮೀಣ ಭಾಗದ ಜನರಿಗೆ ಆರೋಗ್ಯ ಕಾಳಜಿ ಕಡಿಮೆ. ಹಾಗಾಗಿ, ಸರ್ಕಾರ ಗ್ರಾಮೀಣ ಜನರ ಆರೋಗ್ಯ ರಕ್ಷಣೆಗೆ ಹೆಚ್ಚು ಆದ್ಯತೆ ನೀಡಬೇಕು. ಈ ಭಾಗಕ್ಕೆ ಹೆಚ್ಚಿನ ಸಿಬ್ಬಂದಿ ನಿಯೋಜಿಸಬೇಕು.

ಭೀಮಾ ಶಂಕರ, ಕಲಬುರ್ಗಿ

ಗ್ರಾಮ ಮಟ್ಟದ ಆಸ್ಪತ್ರೆ ಇರಲಿ



ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಸಜ್ಜಿತವಾದ ಆಸ್ಪತ್ರೆಯನ್ನು ತೆರೆಯಬೇಕು. ಅಲ್ಲಿ ಎಲ್ಲ ರೀತಿಯ ಆಧುನಿಕ ಚಿಕಿತ್ಸೆ ವ್ಯವಸ್ಥೆಯೂ ಇರಲಿ. ಪಂಚಾಯಿತಿ ಮಟ್ಟಕ್ಕೆ ಆಂಬುಲೆನ್ಸ್ ನಿಯೋಜಿಸಬೇಕು. ಇದರಿಂದ ನಗರ ಆಸ್ಪತ್ರೆಗಳಲ್ಲಿ ಒತ್ತಡವೂ ಕಡಿಮೆಯಾಗಲಿದೆ. ಕೋವಿಡ್ ಸಮಯದಲ್ಲಿ ಗ್ರಾಮೀಣ ಭಾಗಕ್ಕೆ ಹೆಚ್ಚಿನ ಆರೋಗ್ಯ ಸವಲತ್ತುಗಳ ಅಗತ್ಯವಿದೆ. ಇದಕ್ಕೆ ಸರ್ಕಾರದ ಆದ್ಯತೆ ಇರಲಿ.

ಸಿ.ಆರ್.ದಿನೇಶ್, ಮೈಸೂರು

ಅಲೆದಾಟ ನಿಲ್ಲಲಿ



ಚಿಕಿತ್ಸೆ ಸೌಲಭ್ಯಗಳಿಲ್ಲದೆ, ದೂರದ ಊರುಗಳಿಗೆ ತೆರಳುವಂತಹ ಪ್ರದೇಶಗಳಿಗೆ ತುರ್ತಾಗಿ ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು. ಎಷ್ಟೋ ಮಂದಿ ಆಸ್ಪತ್ರೆಗೆ ತೆರಳಲು ಸಾರಿಗೆ ವ್ಯವಸ್ಥೆಯಿಲ್ಲದೆ, ಪರದಾಡುತ್ತಿದ್ದಾರೆ. ಇದಕ್ಕೆ ಶೀಘ್ರವೇ ಮುಕ್ತಿ ಸಿಗಬೇಕು. ಸಾಮಾನ್ಯ ಜನರಿಗೂ ಆರೋಗ್ಯ ಭಾಗ್ಯ ಸಿಗಬೇಕು.

ಸಿ.ಚೈತ್ರ, ಹೊಸಪೇಟೆ

ಗ್ರಾಮಕ್ಕೆ ಬಾರದ ಆರೋಗ್ಯ



ಜಿಲ್ಲಾಮಟ್ಟಕ್ಕೆ ಬರುತ್ತಿರುವ ಕೋವಿಡ್ ನಿಯಂತ್ರಣ ಸೌಲಭ್ಯಗಳು ಗ್ರಾಮಗಳನ್ನು ತಲುಪುತ್ತಿಲ್ಲ. ಗ್ರಾಮೀಣ ಭಾಗದಲ್ಲಿ ಇದೇ ಶೋಚನೀಯ ಪರಿಸ್ಥಿತಿ. ಆರೋಗ್ಯ ಕೇಂದ್ರಗಳಲ್ಲಿನ ಕುಂದುಕೊರತೆ ನಿವಾರಿಸುವವರು ಇಲ್ಲ. ಹಳ್ಳಿಗಾಡಿನ ಮುಗ್ಧ ಜನರ ಪಾಡು ದುಸ್ತರವಾಗಿದೆ. ಮೈಲಿಗಟ್ಟಲೆ ಪ್ರಯಾಣಿಸುವ ಅನಿವಾರ್ಯತೆ. ಆದರೂ ಚಿಕಿತ್ಸೆ ಸಿಗದೆ, ಪರದಾಟ ನಿಂತಿಲ್ಲ. ಆರೋಗ್ಯ ಸಚಿವರು ಈ ಸಮಸ್ಯೆಯತ್ತ ಗಮನ ಹರಿಸಬೇಕು.

ಮುಬೀನ್ ತಾಜ್, ಹಂಪಿ

ಆರೋಗ್ಯ ಸೌಕರ್ಯ ಹೆಚ್ಚಿಸಿ



ಅಥಣಿ ತಾಲ್ಲೂಕಿನ ಐಗಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೂಲ ಸೌಕರ್ಯ ಹೆಚ್ಚಿಸಬೇಕು. ಇಲ್ಲಿಗೆ ಕಾಯಂ ವೈದ್ಯಾಧಿಕಾರಿಗಳನ್ನು ನಿಯೋಜಿಸಬೇಕು. ಆಂಬುಲೆನ್ಸ್ ವ್ಯವಸ್ಥೆಯೂ ತುರ್ತು ಅಗತ್ಯವಾಗಿದೆ. ಗ್ರಾಮೀಣ ಭಾಗದ ಆಸ್ಪತ್ರೆಗಳು ಜನಸ್ನೇಹಿಯಾಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ಅಮಿತ್ ನಿಂಬಾಳ್ಕರ್, ಬೆಳಗಾವಿ

‘ಇಮಾಮರಿಗೂ ಪರಿಹಾರ ಘೋಷಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರ ಅರ್ಚಕರಿಗೆ ನೀಡಿರುವಂತೆ ಮಸ್ಜಿದ್ ಇಮಾಮರಿಗೂ ಲಾಕ್‌ಡೌನ್ ಪರಿಹಾರ ಘೋಷಿಸಬೇಕು’ ಎಂದು ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್‌ನ ರಾಜ್ಯ ಘಟಕದ ಅಧ್ಯಕ್ಷ ಮೌಲಾನಾ ಅತೀಕುರ್‌ರಹ್ಮಾನ್ ಅಶ್ರಫಿ ಆಗ್ರಹಿಸಿದ್ದಾರೆ.

‘ಆರ್ಥಿಕ ಸಂಕಷ್ಟದಲ್ಲಿರುವ ಅರ್ಚಕರಿಗೆ ಸರ್ಕಾರ ಪರಿಹಾರ ಘೋಷಿಸಿದೆ. ಆದರೆ, ಮಸೀದಿಗಳಲ್ಲಿನ ಇಮಾಮರು, ಚರ್ಚ್‌ನ ಪಾದ್ರಿಗಳು ಸೇರಿದಂತೆ ಇತರ ಧಾರ್ಮಿಕ ಕ್ಷೇತ್ರಗಳ ಸಿಬ್ಬಂದಿಗೆ ಯಾವುದೇ ಪರಿಹಾರ ಘೋಷಣೆ ಮಾಡದಿರುವುದು ರಾಜ್ಯ ಸರ್ಕಾರ ಧಾರ್ಮಿಕ ಅಸಹಿಷ್ಣುತೆಯನ್ನು ಎತ್ತಿ ತೋರಿಸುತ್ತದೆ’ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೊಡಗು: ವಿವಿಧೆಡೆ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ನಾಪೋಕ್ಲು, ಗೋಣಿಕೊಪ್ಪಲು, ಮಡಿಕೇರಿ ಸುತ್ತಮುತ್ತ ಭಾನುವಾರ ಸಂಜೆ ಮಳೆಯಾಗಿದೆ. ಶನಿವಾರ ರಾತ್ರಿಯೂ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿತ್ತು.

ನಿಧನ ವಾರ್ತೆ

ಮೌನೇಶ್ವರ ಸ್ವಾಮೀಜಿ



ಚಡಚಣ (ವಿಜಯಪುರ): ತಾಲ್ಲೂಕಿನ ಬರಡೋಲ ಗ್ರಾಮದ ಮೂರು ಝಾವಧೀಶ್ವರ ಮಠದ ಪೀಠಾಧಿಪತಿ, ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜದ ಪೀಠಾಧಿಪತಿಗಳ ಗೌರಾವಾಧ್ಯಕ್ಷ ಮೌನೇಶ್ವರ ಸ್ವಾಮೀಜಿ (72) ಭಾನುವಾರ ನಿಧನರಾದರು.

ಅವರು ವಿಜಯಪುರದ ಜ್ಞಾನ ಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿಯ ಸಹಪಾಠಿ ಹಾಗೂ ಒಡನಾಡಿಗಳು ಆಗಿದ್ದರು.

ಚಟ್ಟರಕಿ ಪೀಠಾಧಿಪತಿ ಶಿವಾನಂದ ಪೂಜಾರಿ



ಸಿಂದಗಿ (ವಿಜಯಪುರ): ತಾಲ್ಲೂಕಿನ ಚಟ್ಟರಕಿ ಗ್ರಾಮದ ಹಾಲುಮತ ಸಮುದಾಯದ ಬೀರಲಿಂಗೇಶ್ವರ ಮಠದ ಪೀಠಾಧಿಪತಿ ಶಿವಾನಂದ ಪೂಜಾರಿ (38) ಭಾನುವಾರ ಕೋವಿಡ್ ನಿಂದ ವಿಜಯಪುರದ ಯಶೋಧಾ ಆಸ್ಪತ್ರೆಯಲ್ಲಿ ನಿಧನರಾದರು.

ಮೇ 7 ರಂದು ಸ್ವಾಮೀಜಿಗೆ ಕೋವಿಡ್ ದೃಢಪಟ್ಟಿತ್ತು. ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನಂತರ ವಿಜಯಪುರದ ಯಶೋಧಾ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು.

ಜಿಲ್ಲೆ ಹಾಗೂ ಹೊರ ಜಿಲ್ಲೆಗಳಲ್ಲಿ ಅಪಾರ ಭಕ್ತ ವೃಂದ ಹೊಂದಿದ್ದ ಸ್ವಾಮೀಜಿ, 40ಕ್ಕೂ ಅಧಿಕ ಗ್ರಾಮಗಳಲ್ಲಿ ಹಾಲುಮತ ಸಮುದಾಯದ ದೇವಸ್ಥಾನ ನಿರ್ಮಾಣ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಭಾನುವಾರ ಚಟ್ಟರಕಿ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ಮುಧೋಳ ನಗರಸಭೆ ಅಧ್ಯಕ್ಷ ಸಿದ್ದನಾಥ ಮಾನೆ




ಬಾಗಲಕೋಟೆ: ಜಿಲ್ಲೆಯ ಮುಧೋಳದ ನಗರಸಭೆ ಅಧ್ಯಕ್ಷ ಸಿದ್ದನಾಥ (ಸಂಜು) ದಾದಾಸಾಹೇಬ್ ಮಾನೆ (32) ಕೋವಿಡ್–19ನಿಂದ ಬೆಳಗಾವಿಯ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಮುಧೋಳದ ವಾರ್ಡ್ ನಂ. 18 ರಿಂದ ಮೊದಲ ಬಾರಿಗೆ ಬಿಜೆಪಿಯಿಂದ ಆಯ್ಕೆಯಾಗಿದ್ದ ಅವರಿಗೆ ಕಿರಿಯ ವಯಸ್ಸಿನಲ್ಲಿಯೇ ನಗರಸಭೆ ಅಧ್ಯಕ್ಷರಾಗುವ ಅವಕಾಶ ಒಲಿದು ಬಂದಿತ್ತು.

ರಾಷ್ಟ್ರ ಮಟ್ಟದ ಕುಸ್ತಿಪಟು ಆಗಿದ್ದ ಅವರು ಎರಡು ಬಾರಿ ‘ಕರ್ನಾಟಕ ಕೇಸರಿ’ ಹಾಗೂ ಒಂದು ಬಾರಿ ‘ಕರ್ನಾಟಕ ಕಂಠೀರವ’ ಪ್ರಶಸ್ತಿಗೆ ಭಾಜನರಾಗಿದ್ದಾರು. ಸಿದ್ದನಾಥ ಮಾನೆ ಅವರ ತಾಯಿ ರಾಧಾಬಾಯಿ ಮಾನೆ ಕೂಡಾ ಕೋವಿಡ್ ನಿಂದ ಮೇ 20ರಂದು ನಿಧನರಾಗಿದ್ದರು. ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಸಿದ್ದನಾಥ ಮಾನೆ ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಸ್ಯಾಕ್ಸೊಫೋನ್ ವಾದಕ ಮಚ್ಚೇಂದ್ರನಾಥ್



ಮಂಗಳೂರು: ಅಂತರ ರಾಷ್ಟ್ರೀಯ ಖ್ಯಾತಿಯ ಸ್ಯಾಕ್ಸೊಫೋನ್ ಕಲಾವಿದ ಮಚ್ಚೇಂದ್ರನಾಥ್ ಮಂಗಳಾದೇವಿ (62) ಭಾನುವಾರ ನಿಧನರಾದರು.

ಅವರಿಗೆ ಕೋವಿಡ್ ತಗುಲಿತ್ತು. ವಾರದ ಹಿಂದೆ ಇಲ್ಲಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರು, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

ಅವರಿಗೆ ಪುತ್ರಿ, ಸ್ಯಾಕ್ಸೊಫೋನ್ ಕಲಾವಿದೆ ಸಿಂಧು ಭೈರವಿ ಹಾಗೂ ಪುತ್ರ ಇದ್ದಾರೆ. ಪತ್ನಿ ಸುಶೀಲಾ ಅವರು ಅಸೌಖ್ಯದಿಂದ ವಾರದ ಹಿಂದೆ ಮೃತಪಟ್ಟಿದ್ದಾರೆ. ನಗರದ ಮಂಗಳಾದೇವಿ ದೇವಸ್ಥಾನದಲ್ಲಿ ಪ್ರತಿನಿತ್ಯ ಸ್ಯಾಕ್ಸೊಫೋನ್ ಸೇವೆ ಸಲ್ಲಿಸುತ್ತಿದ್ದರು. ದುಬೈ, ಅಬುಧಾಬಿ, ಆಸ್ಟ್ರೇಲಿಯಾ ಸೇರಿದಂತೆ ವಿವಿಧ ದೇಶಗಳಲ್ಲಿ ಸ್ಯಾಕ್ಸೊಫೋನ್ ಸಂಗೀತ ಕಚೇರಿಗಳನ್ನು ನಡೆಸಿದ್ದರು.

ಗವಿಮಠದ ಗುರುಸಿದ್ದ ಸ್ವಾಮೀಜಿ



ಶಿಗ್ಗಾವಿ (ಹಾವೇರಿ): ತಾಲ್ಲೂಕಿನ ಗಂಗೀಭಾವಿ ಸುಕ್ಷೇತ್ರ ಗವಿಮಠದ ಗುರುಸಿದ್ದ ಸ್ವಾಮೀಜಿ (106) ಅವರು ಭಾನುವಾರ ನಿಧನರಾದರು.

ಇವರು ಮೂಲತಃ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮದವರು. ಅಂತ್ಯಕ್ರಿಯೆ ಭಾನುವಾರ ಸಂಜೆ ಭಕ್ತರ ಸಮ್ಮುಖದಲ್ಲಿ ಜರುಗಿತು.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಅನುಭವದಿಂದ ತಾವು ಕಲಿತೆವು ಎಂದು ಜನ ನನಗೆ ಹೇಳಿದಾಗ, ಇತರರ ಅನುಭವದಿಂದ ಕಲಿಯುವುದು ಒಂದು ಉಪಾಯ ಎಂದು ನಾನು ಅವರಿಗೆ ಹೇಳುತ್ತೇನೆ.

-ವಾರನ್ ಬಫೆಟ್

ಮುಂಬೈ ಬಾರ್ಜ್ ದುರಂತ ಸ್ವತಂತ್ರ ತನಿಖೆ ಅಗತ್ಯ

ತೌತೆ ಚಂಡಮಾರುತದ ಏಟಿಗೆ ಸಿಲುಕಿ ಹಾನಿ ಅನುಭವಿಸಿದ ಕುಟುಂಬಗಳ ಸಂಖ್ಯೆ ಎಷ್ಟು ಎಂಬುದನ್ನು ಲೆಕ್ಕ ಹಾಕುವ ಕೆಲಸ ಇನ್ನೂ ನಡೆದಿದೆ. ಈ ಚಂಡಮಾರುತಕ್ಕೆ ಆಹಾರವಾದ ಆಸ್ತಿಯ ಪ್ರಮಾಣ ಎಷ್ಟು ಎಂಬುದನ್ನು ಅಂದಾಜಿಸುವ ಕೆಲಸ ಕೂಡ ಇನ್ನೂ ಪೂರ್ತಿಯಾಗಿ ಆಗಿಲ್ಲ. ದೇಶದ ಸರ್ಕಾರಿ ಸ್ವಾಮ್ಯದ ಒಎನ್‌ಜಿಸಿ ಕಂಪನಿಗಾಗಿ ಕೆಲಸ ಮಾಡುತ್ತಿದ್ದ, ಅರಬ್ಬಿ ಸಮುದ್ರದಲ್ಲಿ ನಿಯೋಜನೆಗೊಂಡಿದ್ದ ಪಿ-305 ಬಾರ್ಜ್‌ನ ದುರಂತವು ಹಲವು ಲೋಪಗಳತ್ತ ಬೊಟ್ಟು ಮಾಡುತ್ತಿದೆ. ಬಾರ್ಜ್‌ನ ದುರಂತಕ್ಕೆ ಕಾರಣರಾದ ಅಧಿಕಾರಿಗಳ ಬೇಜವಾಬ್ದಾರಿಯ ನಡೆಯನ್ನೂ ಇದು ತೋರಿಸುತ್ತಿದೆ. ಬಾರ್ಜ್ ದುರಂತದಲ್ಲಿ 65ಕ್ಕೂ ಹೆಚ್ಚು ಮಂದಿ ಸತ್ತಿರುವುದಾಗಿ ವರದಿಯಾಗಿದೆ. ಒಂಬತ್ತು ಜನ ಇನ್ನೂ ಪತ್ತೆಯಾಗಿಲ್ಲ. ಪಿ-305 ಹೆಸರಿನ ಬಾರ್ಜ್‌ನಲ್ಲಿ ಒಟ್ಟು 261 ಜನ ಇದ್ದರು. ನೌಕಾಪಡೆ ಮತ್ತು ಕರಾವಳಿ ಭದ್ರತಾಪಡೆಯ ಸಿಬ್ಬಂದಿಯ ಪರಿಶ್ರಮದ ಕಾರಣದಿಂದಾಗಿ ಹಲವರ ಪ್ರಾಣ ಉಳಿದಿದೆ. ಹೀಗಿದ್ದರೂ, ಬಾರ್ಜ್ ದುರಂತದಲ್ಲಿ ಜೀವ ಕಳೆದುಕೊಂಡವರ ಸಂಖ್ಯೆ ದೊಡ್ಡದೇ. ಏಕೆಂದರೆ, ಎಚ್ಚರಿಕೆಯ ಸಂದೇಶಗಳಿಗೆ ಸಕಾಲದಲ್ಲಿ ಸ್ಪಂದನ ದೊರೆತಿದ್ದರೆ ಪ್ರಾಣ ಉಳಿಸಬಹುದಿತ್ತು. ದುರಂತದಲ್ಲಿ ಆಸ್ತಿಗೆ ಕೂಡ ಹಾನಿಯಾಗಿದೆ. ಅದಕ್ಕಿಂತ ಹೆಚ್ಚಾಗಿ, ಪ್ರಾಣಹಾನಿ ಸಂಭವಿಸಿದೆ. ದುರಂತಕ್ಕೆ ಹೊಣೆ ಯಾರು ಎಂಬ ವಿಚಾರದಲ್ಲಿ ಅವರಿವರ ಮೇಲೆ ಬೊಟ್ಟು ಮಾಡುವ ಕೆಲಸ ಈಗ ನಡೆದಿದೆ. ಈ ದುರಂತಕ್ಕೆ ಬಾರ್ಜ್‌ನ ಕ್ಯಾಪ್ಟನ್ ಕಾರಣ ಎಂದು ಈಗ ಹೇಳಲಾಗುತ್ತಿದೆ. ಭಾನುವಾರ ರಾತ್ರಿ 10ರವರೆಗೂ ಅವರ ಇರುವಿಕೆ ಪತ್ತೆಯಾಗಿರಲಿಲ್ಲ. ತೌತೆ ಚಂಡಮಾರುತವು ರೌದ್ರಾವತಾರ ತಾಳಿ ಬರುತ್ತಿದ್ದಾಗಲೂ ದಡಕ್ಕೆ ಧಾವಿಸದೆ, ಸಮುದ್ರದಲ್ಲೇ ಇರುವ ತೀರ್ಮಾನ ಕೈಗೊಂಡಿದ್ದು ಕ್ಯಾಪ್ಟನ್ ಎಂದು ಹೇಳಲಾಗುತ್ತಿದೆ. ದುರಂತಕ್ಕೆ ತುತ್ತಾಗಿರುವ ಪಿ-305 ಬಾರ್ಜ್, ಅಫ್ಕಾನ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿಗಾಗಿ ಕೆಲಸ ಮಾಡುತ್ತಿತ್ತು. ಡರ್ಮಾಸ್ಟ್ ಎಂಟರ್‌ಪ್ರೈಸಸ್ ಕಂಪನಿಯು ಈ ಬಾರ್ಜ್‌ನ ಮಾಲೀಕ. ಒಎನ್‌ಜಿಸಿ ಪರವಾದ ಕಾಮಗಾರಿಗಾಗಿ ಅಫ್ಕಾನ್ಸ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿಯು ದುರಂತಕ್ಕೆ ತುತ್ತಾದ ಬಾರ್ಜ್ ಅನ್ನು ಬಳಸುತ್ತಿತ್ತು. ದುರಂತದ ಬಹುಪಾಲು ಹೊಣೆಯನ್ನು ಒಎನ್‌ಜಿಸಿಯೇ ಹೊತ್ತುಕೊಳ್ಳಬೇಕು. ಚಂಡಮಾರುತದ ತೀವ್ರತೆ ಹಾಗೂ ಅದು ಹಾದುಹೋಗುವ ಮಾರ್ಗದ ಬಗ್ಗೆ ಮೊದಲು ಸಿಕ್ಕಿದ ಮಾಹಿತಿ ಆಧರಿಸಿ ಬಾರ್ಜ್‌ನ ಕ್ಯಾಪ್ಟನ್ ಸಮುದ್ರದಲ್ಲಿಯೇ ಇರುವ ತೀರ್ಮಾನ ಕೈಗೊಂಡರು ಎನ್ನಲಾಗಿದೆ. ಆದರೆ ಪರಿಸ್ಥಿತಿ ಬಿಗಡಾಯಿಸಿದ ಹೊತ್ತಿನಲ್ಲಿ ಅವರಿಗೆ ದಡದ ಕಡೆ ಬರಲು ಸಾಧ್ಯವಾಗಲೇ ಇಲ್ಲ. ಈ ವಿವರಣೆಯು ದುರಂತ ಹೇಗೆ ನಡೆಯಿತು ಎಂಬುದನ್ನು ತಿಳಿಸಬಹುದು. ಆದರೆ, ಅಷ್ಟೊಂದು ಜನರ ಜೀವ ಅಪಾಯಕ್ಕೆ ಸಿಲುಕದಂತೆ ನೋಡಿಕೊಳ್ಳಬೇಕಿದ್ದ ಅಧಿಕಾರಿಗಳು ಏನು ಮಾಡುತ್ತಿದ್ದರು ಎನ್ನುವುದನ್ನು ಇದು ಹೇಳುವುದಿಲ್ಲ.



> ಈ ದುರಂತವು ಹಲವು ಲೋಪಗಳತ್ತ ಬೊಟ್ಟು ಮಾಡುತ್ತಿದೆ. ಅಧಿಕಾರಿಗಳ ಬೇಜವಾಬ್ದಾರಿಯ ನಡೆಯನ್ನೂ ಇದು ತೋರಿಸುತ್ತಿದೆ

ಪರಿಸ್ಥಿತಿಯನ್ನು ಹಾಗೇ ನೋಡುತ್ತ ಕೂರುವ ಬದಲು ತಾನೇ ಮುಂದಾಗಿ ಜೀವಗಳನ್ನು ರಕ್ಷಿಸುವ ಕೆಲಸವನ್ನು ಒಎನ್‌ಜಿಸಿ ಮಾಡಬಹುದಿತ್ತು. 'ನಾವು ಸಮುದ್ರಯಾನಿಗಳಲ್ಲ. ನಮಗೆ ಪರಿಣತಿ ಇರುವುದು ನೈಸರ್ಗಿಕ ಅನಿಲ ಹಾಗೂ ತೈಲಕ್ಕೆ ಸಂಬಂಧಿಸಿದ ವಿಷಯಗಳಲ್ಲಿ' ಎಂದು ಒಎನ್‌ಜಿಸಿ ಅಧಿಕಾರಿಯೊಬ್ಬರು ಹೇಳಿದ್ದಾರೆ. ಇದು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಬಹಳ ಅಸೂಕ್ಷ್ಮ ಹೇಳಿಕೆ. ಕಂಪನಿಯು ಹೊಣೆಗಾರಿಕೆ ಹೊತ್ತುಕೊಳ್ಳಬೇಕು. ಒಎನ್‌ಜಿಸಿ ಅಧಿಕಾರಿಗಳು ಜಲಸಾರಿಗೆ ಸಚಿವಾಲಯಕ್ಕೆ ಸೇರಿದ, ಮುಂಬೈನಲ್ಲಿ ಇರುವ ಮಾಹಿತಿ ಕೇಂದ್ರಕ್ಕೆ ರಕ್ಷಣಾ ಕಾರ್ಯಾಚರಣೆಗೆ ಬೇಕಿರುವ ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ರವಾನೆ ಮಾಡಿರಲಿಲ್ಲ ಎಂದೂ ವರದಿಯಾಗಿದೆ. ಚಂಡಮಾರುತವು ತನ್ನ ಪಥವನ್ನು ಬದಲಿಸಿತು ಎಂದು ಹೇಳಲಾಗುತ್ತಿದೆ. ಆದರೆ ಇದನ್ನು ಭಾರತೀಯ ಹವಾಮಾನ ಇಲಾಖೆ ಅಲ್ಲಗಳೆದಿದೆ. ಒಎನ್‌ಜಿಸಿಯಲ್ಲಿ ಕೂಡ ಹೊಣೆಗಾರಿಕೆ ಯಾರದ್ದು ಎಂಬುದು ಸ್ಪಷ್ಟವಿಲ್ಲ. ಈ ಘಟನೆಗೆ ಸಂಬಂಧಪಟ್ಟಂತೆ ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಂದ ಒಂದು ಹೇಳಿಕೆಯೂ ಬಂದಿಲ್ಲದಿರುವುದು ಆಘಾತಕಾರಿ. ಇಡೀ ದುರಂತಕ್ಕೆ ಯಾರು ಹೊಣೆ ಎಂಬುದನ್ನು ಪತ್ತೆ ಮಾಡಲು ಸ್ವತಂತ್ರ ತನಿಖೆಯೊಂದನ್ನು ನಡೆಸಬೇಕಾದ ಅಗತ್ಯ ಇದೆ.

ದಿನದ ಟ್ವೀಟ್

ಒಳ್ಳೆಯ ಬೆಳವಣಿಗೆ



ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿದ ಯುವಕನೊಂದಿಗೆ ಛತ್ತೀಸಗಡದ ಸೂರಜ್‌ಪುರ ಜಿಲ್ಲಾಧಿಕಾರಿ ಅನುಚಿತವಾಗಿ ವರ್ತಿಸಿದ್ದನ್ನು ಐಎಎಸ್ ಅಸೋಸಿಯೇಷನ್ ಖಂಡಿಸಿರುವುದು ಒಳ್ಳೆಯ ಬೆಳವಣಿಗೆ. ಒಬ್ಬ ಜಿಲ್ಲಾಧಿಕಾರಿಯ ಇಂತಹ ವರ್ತನೆ ಹಾಗೂ ಅಧಿಕಾರದ ದುರ್ಬಳಕೆಯು ಎಲ್ಲ ನಾಗರಿಕ ಸೇವಾ ಅಧಿಕಾರಿಗಳಿಗೂ ಕೆಟ್ಟ ಹೆಸರು ತರುತ್ತದೆ. ಇಂತಹ ವರ್ತನೆಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಜೊತೆಗೆ, ಕೋಪ ನಿರ್ವಹಣೆಯು ನಾಗರಿಕ ಸೇವಾ ಅಧಿಕಾರಿಗಳಿಗೆ ನೀಡುವ ನಿಯಮಿತ ತರಬೇತಿಗಳ ಭಾಗವಾಗಬೇಕು.

ಅಭಿನವ್ ಸಕ್ಸೇನಾ, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಅಧಿಕಾರಿ

25 ವರ್ಷಗಳ ಹಿಂದೆ

ಶುಕ್ರವಾರ, 24-5-1996

- **ಸಂಗ್ಮಾ ಅವಿರೋಧ ಆಯ್ಕೆ**

ನವದೆಹಲಿ, ಮೇ 23– ತ್ರಿಶಂಕು ಸ್ಥಿತಿಯ ಹನ್ನೊಂದನೇ ಲೋಕಸಭೆ ಸ್ಪೀಕರ್ ಆಗಿ ಕಾಂಗ್ರೆಸ್ ಪಕ್ಷದ ಪಿ.ಎ.ಸಂಗ್ಮಾ ಅವರು ಇಂದು ಸರ್ವಾನುಮತದಿಂದ ಆಯ್ಕೆಯಾದರು.

ನೂತನ ಸ್ಪೀಕರ್ ಆಯ್ಕೆಗಾಗಿ ಎಲ್ಲರೂ ಹಾಜರಿದ್ದು ಸ್ಪೀಕರ್ ಆಯ್ಕೆಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರಿಂದ ಲವಲವಿಕೆ ಮತ್ತು ಉತ್ಸಾಹ ಕಾಣಿಸಿಕೊಂಡಿತು.

ಆಳುವ ಪಕ್ಷವು ಸ್ಪೀಕರ್ ಸ್ಥಾನಕ್ಕೆ ತನ್ನ ಅಭ್ಯರ್ಥಿಯನ್ನು ನಿಲ್ಲಿಸುವುದು ವಾಡಿಕೆ. ಆದರೆ, ಬಹುಮತವಿಲ್ಲದ ಭಾರತೀಯ ಜನತಾ ಪಕ್ಷ ನೇತೃತ್ವದ ಸರ್ಕಾರ ಆ ಸ್ಥಾನಕ್ಕೆ ಅಭ್ಯರ್ಥಿಯನ್ನು ನಿಲ್ಲಿಸಿ ಮುಖಭಂಗ ಎದುರಿಸುವ ಸಾಹಸವನ್ನು ಪ್ರಾಮಾಣಿಕವಾಗಿ ಕೈಬಿಟ್ಟಿದ್ದರಿಂದ, ಸಂಯುಕ್ತ ರಂಗದ ಬೆಂಬಲ ಪಡೆದ ಕಾಂಗ್ರೆಸ್‌ನ ಸಂಗ್ಮಾ ಅವರ ಆಯ್ಕೆ ಒಮ್ಮತದಿಂದ ನಡೆಯಿತು.

ಸಂಗ್ಮಾ ಅವರನ್ನು ಒಮ್ಮತದಿಂದ ಆಯ್ಕೆ ಮಾಡುವ ನಿರ್ಣಯವನ್ನು ಡಿಎಂಕೆ ನಾಯಕ ಮುರಸೋಳಿ ಮಾರನ್ ಮಂಡಿಸಿದಾಗ ಐದು ಮಂದಿ ಕಾಂಗ್ರೆಸ್ಸಿಗರು ಮತ್ತು ಏಳು ಮಂದಿ ಸಂಯುಕ್ತ ರಂಗದ ಸದಸ್ಯರು ಅನುಮೋದಿಸಿದರು.

- **ಅವಿಶ್ವಾಸ ನಿರ್ಣಯ: ಚರ್ಚೆಗೆ ನಕಾರ**

ನವದೆಹಲಿ, ಮೇ 23 (ಪಿಟಿಐ, ಯುಎನ್‌ಐ)– ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಸಂಯುಕ್ತ ರಂಗ ಮಂಡಿಸಲು ಉದ್ದೇಶಿಸಿರುವ ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆ ಆರಂಭಿಸಲು ನೂತನ ಲೋಕಸಭಾ ಅಧ್ಯಕ್ಷ ಪಿ.ಎ.ಸಂಗ್ಮಾ ಅವರು ಅವಕಾಶ ನೀಡಲಿಲ್ಲ.

50 ವರ್ಷಗಳ ಹಿಂದೆ

ಸೋಮವಾರ, 24-5-1971

- **ಪ್ರತ್ಯೇಕತಾ ಚಟುವಟಿಕೆ, ಕೋಮು ಗಲಭೆ ಹತ್ತಿಕ್ಕಲು ಕೇಂದ್ರದ ದೃಢ ಸಂಕಲ್ಪ**

ಶ್ರೀನಗರ, ಮೇ 23– ರಾಷ್ಟ್ರದ ಯಾವುದೇ ಭಾಗದಲ್ಲಿ ಸಂಭವಿಸುವ ಕೋಮುವಾರು ಹಿಂಸಾಕೃತ್ಯಗಳನ್ನು ಮತ್ತು ಪ್ರತ್ಯೇಕತಾ ಚಟುವಟಿಕೆಗಳನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ದೃಢ ಸಂಕಲ್ಪ ಮಾಡಿದೆ.

ಕೇಂದ್ರ ಗೃಹಖಾತೆ ಕಾರ್ಯದರ್ಶಿ ಶ್ರೀ ಗೋವಿಂದ ನಾರಾಯಣ್ ಅವರು ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ಅಂಶವನ್ನು ತಿಳಿಸಿದರು.

- **ತುರ್ಕಿಯಲ್ಲಿ ಭೀಕರ ಭೂಕಂಪ: 2000ಕ್ಕೂ ಹೆಚ್ಚು ಜನರ ಸಾವು**

ಅಂಕಾರಾ, ಮೇ 23– ಇಸ್ತಾನ್‌ಬುಲ್‌ಗೆ ಸುಮಾರು 1,408 ಕಿಲೊ ಮೀಟರು ದೂರದಲ್ಲಿಯ ಬಿಂಗೋಲ್ ಪ್ರಾಂತ್ಯದಲ್ಲಿ ನಿನ್ನೆ ರಾತ್ರಿ ಸಂಭವಿಸಿದ ಭೀಕರ ಭೂಕಂಪದಲ್ಲಿ ಸುಮಾರು 2000 ಮಂದಿ ಸತ್ತಿದ್ದಾರೆಂದು ಶಂಕಿಸಲಾಗಿದೆ.

- **ಹಿಂದಿ ಪದಗಳ ಬಳಕೆ: ಡಿ.ಎಂ.ಕೆ ನಾಯಕರಿಗೆ ಕೇಂದ್ರ ಸಚಿವರ ಆಶ್ವಾಸನೆ**

ಮದ್ರಾಸ್, ಮೇ 23– ಕೇಂದ್ರ ಸಚಿವರುಗಳ ಹುದ್ದೆ, ಖಾತೆಗಳ ಇಂಗ್ಲಿಷ್ ಪದಗಳಿಗೆ ಹಿಂದಿ ಸಮಾನಾಂತರ ಶಬ್ದಗಳನ್ನು ತಿಳಿಸುವ ಸುತ್ತೋಲೆಯಿಂದ ಹಿಂದಿಯೇತರ ಜನರ ಮನಸ್ಸಿನಲ್ಲಿ ಮೂಡಿರುವ ತಪ್ಪು ಅಭಿಪ್ರಾಯವನ್ನು ಕೂಡಲೇ ನಿವಾರಿಸಲಾಗುವುದು ಎಂದು ಕೇಂದ್ರದ ಪಾರ್ಲಿಮೆಂಟರಿ ವ್ಯವಹಾರಗಳ ಸಚಿವ ರಾಜಬಹದ್ದೂರ್ ಅವರು ತಮಗೆ ಆಶ್ವಾಸನೆ ನೀಡಿದ್ದಾರೆಂದು ಡಿ.ಎಂ.ಕೆ ಸಂಸತ್ ಗುಂಪಿನ ನಾಯಕ ಕೆ. ಮನೋಹರನ್ ಇಂದು ತಿಳಿಸಿದರು.

ಸಮಸ್ಯೆಯನ್ನು ನಿರ್ವಹಿಸುವುದು, ಭರವಸೆಯ ಭದ್ರತೆಯನ್ನು ವಾಸ್ತವವಾಗಿಸುವುದು ವರ್ತಮಾನದ ತುರ್ತು

ನಾಯಕತ್ವದ ಭಿನ್ನ ಮಾದರಿ



ವಿಶ್ಲೇಷಣೆ

ಸಬಿತಾ ಬನ್ನಾಡಿ

'ವಿಷಯ ಗೊತ್ತಾಯ್ತಾ? ನಿನ್ನ ಕ್ಲಾಸ್‌ಮೇಟ್ ಹೋದಳು. ಅವಳ ತಂದೆ ತಾಯಿ ಇಬ್ಬರೂ ಹೋದವಾರ ಹೋದರು. ಅವಳ ತಮ್ಮ ಇನ್ಯಾವುದೋ ಆಸ್ಪತ್ರೆಯಲ್ಲಿ ಪಾಸಿಟಿವ್ ಆಗಿ ಟ್ರೀಟ್‌ಮೆಂಟ್‌ನಲ್ಲಿ ಇದ್ದಾನಂತೆ, ನಾವೆಲ್ಲಾ ಇದ್ದೂ ಸತ್ತಂತಾಗಿದ್ದೀವಿ. ಏನೂ ಹೆಲ್ಪ್ ಮಾಡೋಕಾಗ್ತಿಲ್ಲ, ನಾವು ವೇಸ್ಟ್ ಅನ್ನಿಸ್ತಿದೆ' ಅನ್ನುತ್ತಲೇ ದುಃಖದ ಕಡಲಲ್ಲಿ ಮುಳುಗಿದ ತನ್ನ ಮೇಷ್ಟ್ರು ದೆಹಲಿಯಿಂದ ಮಾಡಿದ ಕರೆಯನ್ನು ಕೇಳುತ್ತಾ ಮೂವತ್ತರ ಹರೆಯದ ಹುಡುಗ ಕಣ್ಣೀರು ಹಾಕುತ್ತಾನೆ.

ಎಲ್ಲೆಲ್ಲೂ ನಮ್ಮ ಆತ್ಮೀಯರನ್ನು ಕಳೆದುಕೊಳ್ಳುತ್ತಾ ಕ್ಷುಬ್ಧ ಸಾಗರದ ಅಲೆಯಲ್ಲಿ ಜೀವ ಎಂಬ ತೆಪ್ಪವನ್ನು ಏರಿ ಪಯಣ ಹೊರಟ ಸ್ಥಿತಿಯಲ್ಲಿ ನಾವೆಲ್ಲಾ ಇದ್ದೇವೆ. ಇದನ್ನು ತಡೆಯಲು, ತೀವ್ರತೆ ಕಡಿಮೆ ಮಾಡಲು ಆಗುತ್ತಿರಲಿಲ್ಲವೇ? ಇಂತಹ ಸಂದರ್ಭಗಳನ್ನು ಸವಾಲು ಎಂದು ಸ್ವೀಕರಿಸಿ ಸಾಮೂಹಿಕ ಪ್ರಯತ್ನಗಳನ್ನು ಉದ್ದೀಪಿಸಿ, ವ್ಯಕ್ತಿಗಳು ಮರೆಯಲ್ಲಿ ನಿಂತು ಕೆಲಸಗಳು ಮುನ್ನೆಲೆಗೆ ಬರುವಂತೆ ಮಾಡುವುದನ್ನೇ ನಿಜವಾದ ನಾಯಕತ್ವ ಎನ್ನುವುದು. ಆ ನಾಯಕತ್ವಕ್ಕೆ ಯಾವ ಡಿಫೆನ್ಸ್ ಲಾಯರ್‌ಗಳ ಅವಶ್ಯಕತೆ ಇರುವುದಿಲ್ಲ. ವಿವೇಕ ಇರುವ ಜನರೇ ಅದನ್ನು ಗುರುತಿಸಿ ಎತ್ತಿ ಹಿಡಿಯುತ್ತಾರೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಜರ್ಮನಿಯ ನಾಯಕಿಯರನ್ನು ಜಗತ್ತು ಹೇಗೆ ಗುರುತಿಸಿತೋ ಹಾಗೆ. ನಮ್ಮದೇ ಕೇರಳದ ಶೈಲಜಾ ಟೀಚರ್‌ರನ್ನು ಜನ ಹೇಗೆ ಅಪ್ಪಿಕೊಂಡರೋ ಹಾಗೆ. ಅವರಿಗಿಂದು ಎರಡನೆಯ ಅವಕಾಶ ಸಿಗದಿದ್ದಾಗ ಆತಂಕ ಮತ್ತು ಹತಾಶೆ ಅನುಭವಿಸುತ್ತಿರುವ ಜನ, 'ನಮ್ಮ ಶೈಲಜಾ ಟೀಚರನ್ನು ನಮಗೆ ನೀಡಿ' ಎಂದು ಧ್ವನಿ ಎತ್ತುತ್ತಿದ್ದಾರೆ. ಇವೆಲ್ಲವೂ ನಾಯಕತ್ವ ಹೇಗಿರಬೇಕು ಎಂಬುದಕ್ಕೆ ಮಾದರಿ. ನಾಯಕತ್ವವೆಂದರೆ ಪ್ರಾಮಾಣಿಕತೆಯ ಜೊತೆಗೆ ಸಮಯಪ್ರಜ್ಞೆ, ಸಾಮಾನ್ಯ ಜ್ಞಾನ (ಕಾಮನ್ ಸೆನ್ಸ್) ಮತ್ತು ಭಾವನಾತ್ಮಕ ಬೆಂಬಲ.

ನಾನಿಲ್ಲಿ ಇತಿಹಾಸದ ಘಟನೆಯೊಂದನ್ನು ನೆನಪಿಸ ಬಯಸುತ್ತೇನೆ. ನಮ್ಮೆಲ್ಲಾ ಮಹಾನ್ ಜ್ಞಾನಗಳು, ಮೇರು ಸಾಧನೆಗಳು, ಕಠಿಣ ಆಡಳಿತ ವ್ಯವಸ್ಥೆಗಳು ಇದ್ದಾಗಲೂ ಎಚ್ಚರಿಕೆಗಳನ್ನು ನಿರ್ಲಕ್ಷಿಸಿದ್ದು ಹೇಗೆ ತಲೆಮಾರುಗಳನ್ನೇ ನಾಶ ಮಾಡಿತು, ಹೇಗೆ ಕೇವಲ ಕರ್ತವ್ಯದ ವಿಧೇಯತೆಯಲ್ಲಿ ಮುಳುಗಿ, ತಕ್ಷಣದ ಅಪಾಯವನ್ನು ಚಕ್ಕನೆ ಗ್ರಹಿಸದೇ ಹೋಗಿದ್ದರಿಂದ ಏನೆಲ್ಲಾ ಸರಿಪಡಿಸದ ಅನಾಹುತಗಳು ನಡೆದುಹೋದವು, ಅದನ್ನು ಮುಚ್ಚಿಡಲು ಸರ್ಕಾರ ಮಾಡಿದ ಕಸರತ್ತು ಇನ್ನಷ್ಟು ಅಮಾಯಕರ ಬದುಕನ್ನು ಹೇಗೆ ಸದ್ದಿಲ್ಲದೆ ನರಕಸದೃಶಗೊಳಿಸಿತು ಎಂಬುದನ್ನು ಇದು ದಾಖಲಿಸುತ್ತದೆ.

1986ರಲ್ಲಿ ಆಗಿನ ಸೋವಿಯತ್ ಒಕ್ಕೂಟದ ಚರ್ನೋಬಿಲ್‌ನಲ್ಲಿ ನಡೆದ ಪರಮಾಣು ರಿಯಾಕ್ಟರ್ ಸ್ಫೋಟದ ಘಟನೆಯದು. 'ನಾಲ್ಕನೇ ನಂಬರ್ ಸ್ಥಾವರ. ಥಟ್ಟನೆ ತುರ್ತು ಸನ್ನಿವೇಶವೊಂದು ಎದುರಾದರೆ ಸ್ಥಾವರವನ್ನು ತಣ್ಣಗಾಗಿಸುವ ವಿಧಾನವೊಂದನ್ನು ಪರೀಕ್ಷಿಸುವ ಪ್ರಯೋಗ ನಡೆಯುತ್ತಿದೆ... ಎಲ್ಲೋ ಏನೋ ಎಡವಟ್ಟಾಯಿತು. ಎಲ್ಲಿ ಏನು ತಪ್ಪು ಗಂಟಾಯ್ತು ಎಂದು ಗ್ರಹಿಕೆಗೂ ಸಿಗದಷ್ಟು ವೇಗದಲ್ಲಿ ವಿದ್ಯಮಾನಗಳು ಜರುಗುತ್ತಿದ್ದವು. 12.35ರಿಂದ 12.45ರ ಒಳಗೆ ಎರಡು ಸಲ ಎಚ್ಚರಿಕೆಯ ಗಂಟೆ ಮೊಳಗಿತು. ಆದರೆ ಪಾಳಿಯಲ್ಲಿದ್ದ ತಂತ್ರಜ್ಞರು ಅದನ್ನು ನಿರ್ಲಕ್ಷಿಸಿ, ಪ್ರಯೋಗವನ್ನು ಮುಂದುವರಿಸಿದರು... ಏನಾಗುತ್ತಿದೆ ಎನ್ನುವುದು ಅರಿವಿಗೆ ನಿಲುಕುವಷ್ಟರಲ್ಲಿ ಚರ್ನೋಬಿಲ್ ಅಣುಸ್ಥಾವರ ಸಂಕೀರ್ಣದ ನಾಲ್ಕನೇ ನಂಬರಿನ ಘಟಕ ಸಿಡಿದು ಚೂರಾಯಿತು. ಇಲ್ಲಿಂದ ಸಿಡಿದ ಬೆಂಕಿಚೆಂಡುಗಳು ಪಕ್ಕದ ಮೂರನೇ ನಂಬರಿನ ಸ್ಥಾವರದ ಮೇಲೂ ಬಿದ್ದವು. ಆ ಸ್ಥಾವರವು ಇನ್ನೂ ಕೆಲಸ ಮಾಡುತ್ತಲೇ ಇತ್ತು. ಬೆಂಕಿಯನ್ನು ನೋಡಿದ್ದೇ ರಾತ್ರಿ ಪಾಳಿಯ ಮುಖ್ಯಸ್ಥ ಸ್ಥಾವರವನ್ನು ಶಟ್‌ಡೌನ್ ಮಾಡೋಣ ಎಂದರೆ ಮುಖ್ಯ ಎಂಜಿನಿಯರ್ ಒಪ್ಪಲಿಲ್ಲ. ವಿಕಿರಣದ ದುಷ್ಪರಿಣಾಮ ತಟ್ಟದ ಹಾಗೆ ಮುಖವಾಡ ತೊಟ್ಟು ಕೆಲಸ ಮುಂದುವರಿಸುವಂತೆ ತಾಂತ್ರಿಕ ಸಿಬ್ಬಂದಿಗೆ ಹೇಳಿದ (ನಂತರ ಅದೂ ಸ್ಫೋಟಗೊಂಡು ದುರಂತದ ತೀವ್ರತೆ ಹಲವುಪಟ್ಟು ಹೆಚ್ಚಿತು)'. ನೊಬೆಲ್ ಪ್ರಶಸ್ತಿ ಪಡೆದ ಸ್ವೆಟ್ಲಾನಾ ಅಲೆಕ್ಸಿವಿಚ್‌ರ ರಷ್ಯನ್ ಕೃತಿ 'ಚರ್ನೋಬಿಲ್ ಪ್ರಾರ್ಥನೆ' ಎಂಬ, ಸುಮಂಗಲಾ ಅವರು ಕನ್ನಡಕ್ಕೆ ಅನುವಾದ ಮಾಡಿರುವ ಕೃತಿಯಲ್ಲಿನ ಸಾಲುಗಳಿವು.

ಇಂತಹ ಕೃತಿಗಳು ನಮ್ಮ ಇಂದನ್ನು ರೂಪಿಸಲು ದಾರಿದೀಪಗಳಾಗದೇ ಹೋದರೆ ಹಲವು ಎಚ್ಚರಿಕೆಗಳ ನಡುವೆಯೂ ನಾವು ತಡೆಯಬಹುದಾಗಿದ್ದ ಕೋವಿಡ್ ದುರಂತಗಳನ್ನು ತಡೆಯುವುದಾದರೂ ಹೇಗೆ?

ಇಂತಹ ಸಂಗತಿಗಳು ಎಲ್ಲ ಪರಿಣತಿ, ಸಾಮರ್ಥ್ಯ, ಸಿದ್ಧಾಂತ, ಸಿದ್ಧತೆ, ಆಡಳಿತಾತ್ಮಕ ಸುವ್ಯವಸ್ಥೆಗಳ ನಡುವೆಯೂ ಆ ಕ್ಷಣದಲ್ಲಿ ಅವೆಲ್ಲವನ್ನೂ ಬಳಸಿಕೊಂಡು ಮುನ್ನಡೆಸಬಲ್ಲ ಚತುರಮತಿ ಮತ್ತು ತಾಯ್ತನದ ಅಕ್ಕರಾಸ್ಥೆ ಮುನ್ನಡೆಸುವವರಲ್ಲಿ ಇರಬೇಕು ಎನ್ನುವುದಕ್ಕೂ ಪಾಠವೇ ಆಗಿರುತ್ತದೆ.



ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಕೋವಿಡ್ ನಿರ್ವಹಣೆ ಬೇರೆ ಬೇರೆ ರೀತಿಯಲ್ಲಿ ನಡೆದಿದೆ. ಆದರೆ ಕಳೆದ ಬಾರಿ ಇದು ದೂರದ ಚೀನಾದಲ್ಲಿ ಸುದ್ದಿಯಾಗಿದ್ದಾಗಲೇ ಮುನ್ನೋಟ ಹರಿಸಿ ಜಾಗರೂಕತೆಯನ್ನು ತೋರಿದ್ದು ಕೇರಳ ರಾಜ್ಯ. ಅಲ್ಲಿನ ಸರ್ಕಾರ ಎಲ್ಲಾ ಅನುಕೂಲ ಮತ್ತು ಸಹಕಾರಗಳನ್ನು ನೀಡಿ ಒಂದು ತಂಡವಾಗಿ ಕೆಲಸ ನಿರ್ವಹಿಸಿದ್ದರ ಜೊತೆ ಜೊತೆಗೇ ಆರೋಗ್ಯ ಸಚಿವೆ ಶೈಲಜಾ ಅವರ ವೈಯಕ್ತಿಕ ಛಾತಿಯೂ ಭಿನ್ನತೆರನಾಗಿತ್ತು. ವುಹಾನ್‌ನ ಸುದ್ದಿ ತಿಳಿಯುತ್ತಿದ್ದಂತೆಯೇ ಅವರು ಮಾಡಿದ ಮೊದಲ ಕೆಲಸ, ಅಲ್ಲಿ ಕೇರಳಿಗರು ಎಷ್ಟು ಜನ ಇದ್ದಾರೆ ಎಂಬ ಮಾಹಿತಿ ತರಿಸಿಕೊಂಡಿದ್ದು ಮತ್ತು 'ನಿಮ್ಮೊಡನೆ ನಾವಿದ್ದೇವೆ' ಎಂಬ ಸಂದೇಶ ರವಾನಿಸಿದ್ದು. ಎಚ್ಚರಿಕೆಯ ಗಂಟೆ ಬಡಿಯುವ ಮೊದಲೇ ಸಿದ್ಧತೆ ಮಾಡಿಕೊಂಡಿದ್ದು ಮಾತ್ರವಲ್ಲ, ಸರ್ಕಾರ ಎಂಬ ತಾಯಿಯ ಅಭಯವನ್ನು ಪ್ರಜೆಗಳು ಎಂಬ ಮಕ್ಕಳಿಗೆ ನೀಡಿದ ಭದ್ರತೆಯ ಭಾವವಿದೆಯಲ್ಲಾ ಅದನ್ನು ಎಲ್ಲರೂ ಮಾಡಲಾರರು.

ನಮ್ಮಲ್ಲಿ ಕ್ರಿಮಿನಲ್ ಕುಶಾಗ್ರಮತಿ ಹಲವರಲ್ಲಿ ಇರುತ್ತದೆ. ಇಂತಹ ಕಷ್ಟಕಾಲದಲ್ಲೂ ತಮ್ಮ ಬೇಳೆ ಬೇಯಿಸಿಕೊಳ್ಳುವ, ವಿರೋಧಿಗಳನ್ನು ಹಣಿಯಲು ಅವಕಾಶ ಸೃಷ್ಟಿಸಿಕೊಳ್ಳುವ, ತಮ್ಮನ್ನು ಟೀಕಿಸಿದವರನ್ನು ನಾಶ ಮಾಡುವ ಎಲ್ಲ ದಾರಿಗಳನ್ನು ಹೆಣೆಯುವವರಿದ್ದಾರೆ. ನಮಗೀಗ ಬೇಕಿರುವುದು ಇದ್ಯಾವುದೂ ಅಲ್ಲ. ಶೈಲಜಾರ ವಿಷಯದಲ್ಲಿ ಇನ್ನೊಂದು ಉದಾಹರಣೆಯನ್ನು ನೆನಪಿಸಿಕೊಳ್ಳಬಹುದು. ತಾವು ವಿರೋಧ ಪಕ್ಷದಲ್ಲಿದ್ದಾಗ, ಸೌಮ್ಯ ಕೊಲೆ ಪ್ರಕರಣದಲ್ಲಿ ಫೊರೆನ್ಸಿಕ್ ವಿಭಾಗದ ಡಾ. ಉನ್ಮೇಶ್ ಅವರನ್ನು ಶೈಲಜಾ ತೀವ್ರವಾಗಿ ಟೀಕಿಸಿದ್ದರು. ತನಿಖೆಯ ನಂತರ ಅವರು ನಿರಪರಾಧಿ ಎಂದು ತಿಳಿಯುತ್ತದೆ. ಶೈಲಜಾ ಅವರು ಮಂತ್ರಿಯಾದ ಮೇಲೆ ಅವರ ವಿಭಾಗಕ್ಕೆ ಭೇಟಿ ಕೊಡುವ ಸನ್ನಿವೇಶ ಬರುತ್ತದೆ. ಅಲ್ಲಿ ಉನ್ಮೇಶ್‌ರನ್ನು ನೋಡಿದ್ದೇ ಶೈಲಜಾ ಎಲ್ಲರ ಮುಂದೆ ಅವರ ಕ್ಷಮೆ ಕೇಳುತ್ತಾರೆ. ಇದು ನಮಗಿಂದು ಬೇಕಿರುವುದು. ಈ ಹಲವು ಕಾರಣಗಳಿಗಾಗಿ ಶೈಲಜಾ ಉಳಿದ ಮಹಿಳಾ ರಾಜಕಾರಣಿಗಳಿಗಿಂತಲೂ ಭಿನ್ನ. ಹುಲಿಯಂತೆ ದಾಳಿ ಮಾಡುವ, ಸೇರಿಗೆ ಸವ್ವಾಸೇರು ಎಂಬಂತಿರುವುದೇ ನಾಯಕತ್ವವಲ್ಲ.

ಶೈಲಜಾ ಅವರದು ಎಲ್ಲ ಗಂಡಸರೂ ಹೆಂಗಸರೂ ಅನುಸರಿಸಬೇಕಾದ ಪೋಷಣೆಯ ಹೆಣ್ಣು ಮಾದರಿ. ಪಿಣರಾಯಿ ವಿಜಯನ್ ನೇತೃತ್ವದ ಹಿಂದಿನ ಸರ್ಕಾರವೂ ಈ ಮಾದರಿಗೆ ನೀರೆರೆದಿದೆ. ಇದನ್ನು ಗುರುತಿಸಿ ಪುನರಾಯ್ಕೆ ಮಾಡಿದ ಕೇರಳದ ಜನರ ವಿವೇಕ ಮತ್ತು ಭಾವನಾತ್ಮಕ ಪ್ರತಿಕ್ರಿಯೆಯನ್ನು ಕೇವಲ ಭಾವುಕವಾದದ್ದೆಂದು ನಿರ್ಲಕ್ಷಿಸುವಂತಿಲ್ಲ. ಸಿದ್ಧಾಂತ, ನಿಯಮಗಳಾಚೆಗೆ ವಿಜಯನ್‌ರಂತೆಯೇ ಶೈಲಜಾ ಅವರ ನಾಯಕತ್ವದ ಫಲವೂ ಜನರಿಗೆ ಸಿಗುವಂತಾಗಬೇಕಿದೆ. ಎಲ್ಲ ಅತ್ಯುತ್ತಮ ತಂದೆಯರು ಅಂತಿಮವಾಗಿ ತಾಯಿಯರೇ ಆದಾಗ ಅಲ್ಲಿ ಭಾವನಾತ್ಮಕ ಸ್ಪರ್ಶದ ಮೃದುತ್ವವಿರುತ್ತದೆ. ಹಾಗಿದ್ದಾಗ, ಈ ಲೇಖನದ ಆರಂಭದಲ್ಲಿ ಉಲ್ಲೇಖಿಸಿದ ದುರಂತಗಳಿಗೆ ಅವಕಾಶವೇ ಇರುವುದಿಲ್ಲ. ಈಗ ನಮಗೆ ತುರ್ತಾಗಿ, ಶೈಲಜಾ ಟೀಚರ್ ಜೊತೆಗೆ ನೂರಾರು ಶೈಲಜೆಯರು ಬೇಕಾಗಿದ್ದಾರೆ.

ಚುರುಮುರಿ



ಕ್ವಿಟ್ ಇಂಡಿಯಾ...

• ಸಿ.ಎನ್.ರಾಜು

ವಿದೇಶದಿಂದ ದಂಡೆತ್ತಿ ಬಂದಿರುವ ಕೋವಿಡ್, ಪ್ರಾಂತೀಯ ಕಾಯಿಲೆಗಳನ್ನು ಸದೆಬಡಿದು ಸಾಮಂತರನ್ನಾಗಿ ಮಾಡಿಕೊಂಡು ಸಾರ್ವಭೌಮನಾಗಿ ಮೆರೆಯುತ್ತಿದೆ. ಕೋವಿಡ್ ಅಬ್ಬರದಲ್ಲಿ ಲೋಕಲ್ ಕಾಯಿಲೆಗಳು ಮಾನ್ಯತೆ ಕಳೆದುಕೊಂಡು ಮಂಕಾಗಿವೆ. ಅಸ್ತಿತ್ವ ಕಳೆದುಕೊಳ್ಳುತ್ತಿರುವ ಆತಂಕದಲ್ಲಿ ಲೋಕಲ್ ಕಾಯಿಲೆಗಳು ಸಭೆ ಸೇರಿ ಸಂಕಟ ತೋಡಿಕೊಂಡವು.

'ಕೋವಿಡ್ ಸರ್ವಾಧಿಕಾರಿ, ಕ್ರೂರಿ. ಸಂಚಾರ, ವ್ಯವಹಾರಗಳನ್ನು ಅಸ್ತವ್ಯಸ್ತ ಮಾಡಿದೆ. ಸರ್ಕಾರ, ಸಂಸಾರಗಳನ್ನು ತಲ್ಲಣಗೊಳಿಸಿದೆ. ನಮಗೆ ಹೆದರುತ್ತಿದ್ದ ಜನ ನಮ್ಮನ್ನು ಕಡೆಗಣಿಸಿ ಕೋವಿಡ್‌ಗೆ ಅಡಿಯಾಳಾಗುತ್ತಿದ್ದಾರೆ' ಲೋಕಲ್ ಕಾಯಿಲೆಯೊಂದು ನೋವು ಹೇಳಿಕೊಂಡಿತು.

'ಕಾಯಿಲೆಗಳಿಗೆ ಕೇರ್ ಮಾಡದ ಡಾಕ್ಟರ್‌ಗಳೂ ಕೋವಿಡ್‌ಗೆ ಹೆದರಿ ಮಾಸ್ಕ್, ಪಿಪಿಇ ಕಿಟ್ ಧರಿಸುವಂತಾಗಿದೆ. ಕೋವಿಡ್ ನಮ್ಮ ಆಸ್ಪತ್ರೆಗಳನ್ನು ಆಕ್ರಮಿಸಿ ತನ್ನ ಆಸ್ಪತ್ರೆಗಳನ್ನಾಗಿ ಮಾಡಿಕೊಂಡಿದೆ. ಅಲೆಅಲೆಯಾಗಿ ಅಪ್ಪಳಿಸುತ್ತಾ ನಮ್ಮ ನೆಲೆ ಕಳೆಯುತ್ತಿದೆ...' ಇನ್ನೊಂದು ಕಾಯಿಲೆ ಕಣ್ಣೀರು ಹಾಕಿತು.

'ಕೋವಿಡ್ ಅನ್ನು ಭಾರತದಿಂದ ತೊಲಗಿಸಬೇಕು, ಅದರ ವಿರುದ್ಧ ಕ್ವಿಟ್ ಇಂಡಿಯಾ ಚಳವಳಿ ಮಾಡಬೇಕು. ಶಾಂತಿ ಸತ್ಯಾಗ್ರಹ ಮಾಡಿದರೆ ಕೋವಿಡ್ ಕೇರ್ ಮಾಡುವುದಿಲ್ಲ, ಕ್ರಾಂತಿಕಾರಿ ಚಳವಳಿ ಆಗಬೇಕು' ಎಂದಿತು ಇನ್ನೊಂದು.

'ಹೌದು, ಇಂಜೆಕ್ಷನ್, ಮಾತ್ರೆಗೆ ಗುಣವಾಗುವಷ್ಟು ಶಕ್ತಿಹೀನರು ನಾವು. ಇನ್ನುಮೇಲೆ ಪ್ರಾಬಲ್ಯ ಬೆಳೆಸಿಕೊಂಡು ಸಂಘಟಿತರಾಗಿ ಕೋವಿಡ್ ಅನ್ನು ದೇಶದಿಂದ ಒದ್ದೋಡಿಸಬೇಕು'.

'ಇಷ್ಟು ವರ್ಷ ನಮ್ಮಿಂದ ನರಳಿದ ಮನುಷ್ಯರನ್ನು ನಾವು ಕೋವಿಡ್‌ನಿಂದ ಕಾಪಾಡಬೇಕು' ಹಿರಿಯ ಕಾಯಿಲೆ ಸಲಹೆ ಮಾಡಿತು.

'ಹೌದು, ನಮ್ಮ ಬಲಶಾಲಿ ವೈರಸ್‌ಗಳು ಒಟ್ಟಾಗಿ ಕೊರೊನಾ ವೈರಸ್ ಮೇಲೆ ದಾಳಿ ಮಾಡಿ ನಿರ್ನಾಮ ಮಾಡಿ ಮನುಷ್ಯರನ್ನು ಉಳಿಸಬೇಕು. ಅವರು ಉಳಿದರಷ್ಟೇ ನಾವೂ ಉಳಿಯಲು ಸಾಧ್ಯ...' ಎಂದು ಯುವ ಕಾಯಿಲೆ ತೊಡೆ ತಟ್ಟಿತು. ಉಳಿದ ಕಾಯಿಲೆಗಳು ಚಪ್ಪಾಳೆ ತಟ್ಟಿ ಬೆಂಬಲಿಸಿದವು.

ಸಂಗತ

ಆನ್‌ಲೈನ್ ತರಗತಿ: ನಾವೀನ್ಯದಿಂದ ಸಹ್ಯ

ಕೊರೊನಾದಿಂದ ಸೃಷ್ಟಿಯಾಗಿರುವ ಅನಿವಾರ್ಯ ಪರಿಸ್ಥಿತಿಯನ್ನು ಒಂದು ಅವಕಾಶವನ್ನಾಗಿ ಬಳಸಿಕೊಳ್ಳಲು ಶಾಲಾ ಕಾಲೇಜುಗಳು ಸೃಜನಶೀಲತೆಯನ್ನು ತೋರಬೇಕಿದೆ

• ಡಾ. ಎಚ್.ಬಿ.ಚಂದ್ರಶೇಖರ್

ಲಾಕ್‌ಡೌನ್ ರಜೆಯಲ್ಲಿ ಆನ್‌ಲೈನ್ ಮೂಲಕ ಯೋಗ ಕಲಿಯುವ ಕೋರ್ಸ್ ಒಂದಕ್ಕೆ ದಾಖಲಾಗಿರುವೆ. ಯೋಗ ಕೌಶಲವನ್ನು ಕೆಲವು ಪರಿಣಾಮಕಾರಿ ವಿಧಾನಗಳನ್ನು ಅನುಸರಿಸಿ ಕಲಿಸುತ್ತಿದ್ದಾರೆ. 70ಕ್ಕೂ ಅಧಿಕ ಕಲಿಕಾರ್ಥಿಗಳಿಗೆ ನಾಲ್ವರು ಶಿಕ್ಷಕರು ಯೋಗ ಕಲಿಕೆಗೆ ಅನುಕೂಲ ಕಲ್ಪಿಸುತ್ತಿದ್ದಾರೆ.

ಒಬ್ಬರು ಶಿಕ್ಷಕರು ಯೋಗಾಸನ ಮಾಡುವ ವಿಧಾನವನ್ನು ಸರಳ ಸೂಚನೆಗಳ ಸಹಿತ ವಿವರಿಸಿದರೆ, ಉಳಿದ ಶಿಕ್ಷಕರು ಕಲಿಕಾರ್ಥಿಗಳು ಹೇಗೆ ಕಲಿಯುತ್ತಿದ್ದಾರೆ ಎಂಬುದನ್ನು ಗಮನಿಸಿ, ದೋಷಗಳನ್ನು ತಿದ್ದಿಕೊಳ್ಳಲು ಸಲಹೆ ಸೂಚನೆ ನೀಡುತ್ತಾರೆ. ಎಲ್ಲಾ ಕಲಿಕಾರ್ಥಿಗಳು ತಾವು ಶಿಕ್ಷಕರಿಗೆ ಕಾಣಿಸಲು ಅನುಕೂಲವಾಗುವಂತೆ ತಮ್ಮ ಮೊಬೈಲ್ ಅಥವಾ ಲ್ಯಾಪ್‌ಟಾಪ್‌ನ ವಿಡಿಯೊವನ್ನು ಕಡ್ಡಾಯವಾಗಿ ಆನ್ ಮಾಡಲೇಬೇಕು. ಆ ಮೂಲಕ ಪ್ರತೀ ಕಲಿಕಾರ್ಥಿಯನ್ನು ನಿಗಾದಲ್ಲಿ ಇರಿಸಿ, ಮೃದು ಮಾತುಗಳಿಂದ ಸಲಹೆ, ಸೂಚನೆಗಳನ್ನು ನೀಡಿ ಕಲಿಸಲಾಗುತ್ತದೆ.

ಕೊನೆಯ 10 ನಿಮಿಷಗಳಲ್ಲಿ ಎಲ್ಲಾ ಕಲಿಕಾರ್ಥಿಗಳನ್ನು ಝೂಮ್ ತಂತ್ರಾಂಶದಲ್ಲಿ ಲಭ್ಯವಿರುವ ಆಯ್ಕೆ ಬಳಸಿ, ಹಲವು ಗುಂಪುಗಳನ್ನಾಗಿ ಮಾಡಿ, ಅವರ ಅನುಭವಗಳನ್ನು ಹಂಚಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ಜೊತೆಗೆ ಪ್ರತಿದಿನವೂ ಒಂದೊಂದು ಸರಳ ಚಟುವಟಿಕೆಗಳನ್ನು ಮಾಡಲು ಕಲಿಕಾರ್ಥಿಗಳನ್ನು ಪ್ರೇರೇಪಿಸಿ, ಅದನ್ನು ಗುಂಪಿನಲ್ಲಿ ಹಂಚಿಕೊಳ್ಳಲು ತಿಳಿಸಲಾಗುತ್ತದೆ. ಆನ್‌ಲೈನ್ ಮೂಲಕ ಆಸಕ್ತಿಯುತವಾಗಿ ಕಲಿಕೆಯನ್ನುಂಟು ಮಾಡಲು ಸಾಧ್ಯವಿದೆ ಎಂಬುದನ್ನು ಇದರಿಂದ ನಾನು ಗಮನಿಸಿದೆ.

ಕೋವಿಡ್‌ನಿಂದ ಉದ್ಭವಿಸಿರುವ ಶೈಕ್ಷಣಿಕ ಬಿಕ್ಕಟ್ಟು ಇನ್ನೂ ಹಲವು ತಿಂಗಳುಗಳ ಕಾಲ ಮುಂದುವರಿಯುವ ಲಕ್ಷಣಗಳಿವೆ. ಕೆಲವು ಖಾಸಗಿ ಶಾಲೆಗಳು ಈಗಾಗಲೇ ಮುಂದಿನ ಶೈಕ್ಷಣಿಕ ಸಾಲಿನ ತರಗತಿಗಳನ್ನು ಆನ್‌ಲೈನ್ ಮೂಲಕ ಪ್ರಾರಂಭಿಸಿವೆ. ಪ್ರತಿದಿನ 5ರಿಂದ 6 ಗಂಟೆಗಳ ಕಾಲ ಆನ್‌ಲೈನ್ ತರಗತಿಗಳನ್ನು ನಡೆಸುತ್ತಿದ್ದು, ಹೆಚ್ಚಿನ ಶಾಲೆಗಳ ತರಗತಿಗಳು ಏಕತಾನತೆಯಿಂದ ಕೂಡಿರುತ್ತವೆ. ಮೊದಲೇ ಲಾಕ್‌ಡೌನ್ ಕಾರಣ ಮನೆಯಲ್ಲಿದ್ದು ಬೇಸರದಲ್ಲಿರುವ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳು ತೀವ್ರ ಸಪ್ಪೆ, ನೀರಸ ಎನಿಸುವ ಸಾಧ್ಯತೆ ಇದೆ.

ಈ ಸನ್ನಿವೇಶ ಬಹು ದಿನ ಮುಂದುವರಿದಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳಲ್ಲಿ ಆಸಕ್ತಿ ಕಳೆದುಕೊಳ್ಳುವ ಅಪಾಯವಿದೆ. ಪಠ್ಯಾಂಶಗಳನ್ನು ಪೂರೈಸಿ, ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಏಕೈಕ ಉದ್ದೇಶವನ್ನು ಈ ತರಗತಿಗಳು ಹೊಂದಿವೆ. ಕಳೆದ ವರ್ಷದಿಂದಲೇ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸುತ್ತಿದ್ದರೂ ತಾವು ಕಲಿಸುವ ವಿಧಾನದಲ್ಲಿ ಯಾವುದೇ ರೀತಿಯ ನಾವೀನ್ಯ, ಪ್ರಯೋಗಶೀಲತೆಯನ್ನು ಉಪಯೋಗಿಸುತ್ತಿರುವುದು ಕಂಡುಬರುತ್ತಿಲ್ಲ.

ಪ್ರಸ್ತುತ ಕೋವಿಡ್ ಸನ್ನಿವೇಶವು ಲಭ್ಯವಿರುವ ಮಿತಿಗಳಲ್ಲಿ ಪರ್ಯಾಯ ಕಲಿಕಾ ವಿಧಾನಗಳನ್ನು ಬಳಸಲು ಶಾಲಾ ಕಾಲೇಜುಗಳಿಗೆ ಅವಕಾಶ ಕಲ್ಪಿಸಬೇಕಿದೆ. ಈಗ ಸೃಷ್ಟಿಯಾಗಿರುವ ಅನಿವಾರ್ಯ ಪರಿಸ್ಥಿತಿಯನ್ನು ಒಂದು ಅವಕಾಶವನ್ನಾಗಿ ಬಳಸಿಕೊಳ್ಳಲು ಶಾಲಾ ಕಾಲೇಜುಗಳು ಸೃಜನಶೀಲತೆಯನ್ನು ತೋರಬೇಕಿದೆ. ತಂತ್ರಜ್ಞಾನದಿಂದ ಕಲಿಕೆ ಸಾಗಬೇಕಾದ ಕಾರಣ, ಆಫ್‌ಲೈನ್ ತರಗತಿಗಳಿಗಿಂತ ಆನ್‌ಲೈನ್ ತರಗತಿಗಳ ಅವಧಿ ಕಡಿಮೆ ಇರಬೇಕಾಗುತ್ತದೆ. ಈ ಕುರಿತು ಈಗಾಗಲೇ ಸರ್ಕಾರವೇ ಹೊರಡಿಸಿರುವ ಮಾರ್ಗಸೂಚಿಗಳಂತೆ ಕಲಿಕಾ ಅವಧಿಯನ್ನು ಸೀಮಿತಗೊಳಿಸುವುದು ಪರಿಣಾಮಕಾರಿ.

ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸುವುದನ್ನು ಗಮನದಲ್ಲಿ ಇಟ್ಟುಕೊಂಡು ಆನ್‌ಲೈನ್ ತರಗತಿಯ ಚಟುವಟಿಕೆಗಳನ್ನು ರೂಪಿಸಲು ಸಾಧ್ಯವಿದೆ. ಪ್ರತೀ ವಿದ್ಯಾರ್ಥಿಯನ್ನು ನಿಗಾದಲ್ಲಿರಿಸಿ, ತರಗತಿಯಲ್ಲಿ ವಿದ್ಯಾರ್ಥಿಗಳು ತೋರುವ ವರ್ತನೆ, ಅವರ ಕಲಿಕಾ ಮಟ್ಟ, ಅವರು ತೋರುವ ಸ್ಪಂದನೆಯನ್ನು ವಿಶ್ಲೇಷಿಸಿ, ಅವರ ಪಾಲ್ಗೊಳ್ಳುವಿಕೆ ಆಧಾರದ ಮೇಲೆ ವಿದ್ಯಾರ್ಥಿವಾರು ಕಾರ್ಯತಂತ್ರವನ್ನು ರೂಪಿಸಬೇಕು.



ಶಿಕ್ಷಕರು ಅರ್ಧ ಗಂಟೆ ಪಾಠ ಬೋಧನೆ ಮಾಡಿ ನಂತರ ವಿದ್ಯಾರ್ಥಿಗಳ ಚಿಕ್ಕ ಗುಂಪುಗಳಲ್ಲಿ ಪರಸ್ಪರ ಚರ್ಚೆ, ಸಂವಹನಕ್ಕೆ ಮುಕ್ತ ಅವಕಾಶ ಕಲ್ಪಿಸಬೇಕು. ಮನೆಯಲ್ಲಿ ಲಭ್ಯವಿರುವ ಸಾಮಗ್ರಿಗಳನ್ನು ಬಳಸಿ ಪಾಠಕ್ಕೆ ಸಂಬಂಧಿಸಿದಂತೆ ಸರಳ ಚಟುವಟಿಕೆಗಳನ್ನು ವಿದ್ಯಾರ್ಥಿಗಳು ನಿರ್ವಹಿಸಿ, ಪ್ರದರ್ಶಿಸಲು ಅವಕಾಶ ಕಲ್ಪಿಸಬೇಕು.

ಆನ್‌ಲೈನ್ ತರಗತಿಗಳು ಒಂದಷ್ಟು ಹಾಸ್ಯ, ಲಘು ಮಾತುಕತೆ, ಹರಟೆಗಳಿಂದ ಕೂಡಿದ್ದಲ್ಲಿ ವಿದ್ಯಾರ್ಥಿಗಳು ಸಹಜವಾಗಿ ಅವುಗಳಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ, ಉತ್ಸಾಹ ತೋರುತ್ತಾರೆ ಹಾಗೂ ತಮ್ಮನ್ನು ತಾವು ತೆರೆದುಕೊಳ್ಳುತ್ತಾರೆ. ತರಗತಿಯ ನಂತರ ವಿದ್ಯಾರ್ಥಿಗಳು ತಮ್ಮ ಪೋಷಕರ ಸಹಾಯ, ಬೆಂಬಲ ಹಾಗೂ ಸಹಪಾಠಿಗಳ ಚಿಕ್ಕ ಗುಂಪುಗಳಲ್ಲಿ ದೂರವಾಣಿ ಮೂಲಕ ಸಂವಹನದಲ್ಲಿ ತೊಡಗಿಕೊಂಡು ಪಾಠಕ್ಕೆ ಪೂರಕವಾದ ಕಲಿಕೆ, ಚಟುವಟಿಕೆಗಳಲ್ಲಿ ಪಾಲ್ಗೊಂಡು, ತಮಗಾದ ಕಲಿಕೆಯ ಅನುಭವಗಳನ್ನು ತರಗತಿಯಲ್ಲಿ ಹಂಚಿಕೊಳ್ಳಲು ಯೋಜನೆ ರೂಪಿಸಬೇಕು. ಶಾಲೆಯ ಮೂರು– ನಾಲ್ಕು ಮಂದಿ ಶಿಕ್ಷಕರು ಕೂಡಿ ಪ್ರತೀ ಆನ್‌ಲೈನ್ ತರಗತಿಯನ್ನು ವ್ಯವಸ್ಥಿತವಾಗಿ ಆಯೋಜಿಸಲು ಸೂಕ್ತ ತಯಾರಿ ನಡೆಸಬೇಕು.

ತರಗತಿಗಳ ಸಂಖ್ಯೆ ಕಡಿಮೆಯಾದರೂ ಆನ್‌ಲೈನ್ ತರಗತಿಯು ನಾವೀನ್ಯ ಹಾಗೂ ವಿದ್ಯಾರ್ಥಿಗಳ ಭಾಗವಹಿಸುವಿಕೆಯಿಂದ ಕೂಡಿದ್ದಲ್ಲಿ ಕಲಿಕೆಯನ್ನು ಪರಿಣಾಮಕಾರಿಯಾಗಿಸಲು ಸಾಧ್ಯ.

ವಾಚಕರ ವಾಣಿ

ಈ ಪ್ರಶ್ನೆಗಳು ಎಲ್ಲ ಶಾಸಕರಿಗೂ ಅನ್ವಯ

ರಾಜ್ಯದಲ್ಲಿ ಆಮ್ಲಜನಕ ಕೊರತೆಯನ್ನು ನೀಗಿಸಲು ಇಸ್ರೊದಿಂದ ಆಕ್ಸಿಜನ್ ಪಡೆಯಲು ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ವೇಳೆ, ಕಾಂಗ್ರೆಸ್ ಮುಖಂಡ ಎಚ್.ಕೆ.ಪಾಟೀಲ ಅವರಿಗೆ ಹೈಕೋರ್ಟ್‌ನ ವಿಭಾಗೀಯ ಪೀಠ ಕೇಳಿರುವ ಪ್ರಶ್ನೆಗಳು ಸಮಯೋಚಿತವಾಗಿವೆ. ಇವು ಪಾಟೀಲರಿಗೆ ಕೇಳಿದವಾದರೂ ರಾಜ್ಯದ ಎಲ್ಲ ಶಾಸಕರಿಗೆ ಅವರವರ ಕ್ಷೇತ್ರದ ಮತದಾರರು ಕೇಳಿದ ಪ್ರಶ್ನೆಗಳಂತಿವೆ.

ವಕೀಲರ ಮೂಲಕ ಹೈಕೋರ್ಟ್ ಕೇಳಿರುವ ಪ್ರಶ್ನೆಗಳಾದ, ರಾಜ್ಯವನ್ನು ಕಾಡುತ್ತಿರುವ ಕೊರೊನಾ ಸಮಸ್ಯೆ ಎದುರಿಸಲು ಶಾಸಕರಾದ ನಿಮ್ಮ ಕಕ್ಷಿದಾರರು ಏನು ಕೊಡುಗೆ ನೀಡಿದ್ದಾರೆ? ನಿಮ್ಮ ಕಕ್ಷಿದಾರರು ತಮ್ಮ ಕ್ಷೇತ್ರದಲ್ಲಿ ಎಷ್ಟು ಹಾಸಿಗೆಗಳನ್ನು ಒದಗಿಸಿದ್ದಾರೆ? ಎಷ್ಟು ಆಕ್ಸಿಜನ್ ಘಟಕಗಳನ್ನು ಸ್ಥಾಪಿಸಿದ್ದಾರೆ ಎಂಬ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡುವ ಶಾಸಕರ ಸಂಖ್ಯೆ ತೀರಾ ಕಡಿಮೆ ಎಂಬುದು ನನ್ನ ಅನಿಸಿಕೆ. ಅವರು ತಮ್ಮ ಮತದಾರರಿಗೆ ಮಾತಿನಿಂದಲ್ಲ, ಕೃತಿಯಿಂದ ಉತ್ತರ ಕೊಡಬೇಕಾಗಿದೆ. ಕೊರೊನಾ ಸಾಂಕ್ರಾಮಿಕ ಈಗ ಹಳ್ಳಿಗಳಿಗೂ ಪ್ರವೇಶಿಸಿದೆ. ಇಂಥ ಸಮಯದಲ್ಲಿ ತಮ್ಮ ಕ್ಷೇತ್ರಗಳತ್ತ ಗಮನಹರಿಸದ ಶಾಸಕರ ಹೊಣೆಗೇಡಿತನವನ್ನು ಮತದಾರರು ಕ್ಷಮಿಸಬಾರದು. ಶಾಸಕರು ಈಗಲಾದರೂ ತಮ್ಮ ತಮ್ಮ ಕ್ಷೇತ್ರಗಳತ್ತ ಮುಖ ತಿರುಗಿಸಬೇಕು.

ಡಾ. ಜಿನದತ್ತ ದೇಸಾಯಿ, ಬೆಳಗಾವಿ

ಭಯೋತ್ಪಾದಕರಿದ್ದಾರೆ... ದೂರ ಇರಿ

ಪರಿಚಿತರ ಗೂಡಂಗಡಿಗೆ ಪಡಿತರ ತರಲು ಹೋಗಿದ್ದೆ. ಅಂಗಡಿಗೆ ಹೊಂದಿಕೊಂಡಂತಿರುವ ಕಟ್ಟೆಯ ಮೇಲೆ ನಾಲ್ಕಾರು ಗ್ರಾಮಸ್ಥರು ಕುಳಿತಿದ್ದರು. ಸ್ವಲ್ಪ ಸಮಯದ ಬಳಿಕ ಅವರೆಲ್ಲಾ ಲಗುಬಗೆಯಿಂದ ಕಟ್ಟೆಯಿಂದಿಳಿದು ಅವಸರವಸರವಾಗಿ ಚದುರತೊಡಗಿದರು. ಕುತೂಹಲಗೊಂಡು, ಅವರನ್ನೇ ಅಡ್ಡಗಟ್ಟಿ ಕೇಳಿದೆ. ಅದಕ್ಕವರು 'ಗಡಾ ಮನಿತಾಕ್ ಹೋಗಿಬಿಡ್ರೀ ಭಯೋತ್ಪಾದಕರು ಬರಾಕತ್ಯಾರ' ಎಂದರು. ಅವರ ಮಾತು ಕೇಳಿದ ಕೂಡಲೆ ಜಂಘಾಬಲವೇ ಉಡುಗಿ ಹೋದಂತಾಯಿತು. ಅವರನ್ನು ನಿಲ್ಲಿಸಿ ಅದರ ಪೂರ್ಣ ಅರ್ಥವನ್ನು ಕೇಳಿದೆ. 'ಏನಿಲ್ ರೀ, ಊರಾಗ ಸುಳ್ ಸುಳ್ಳಾ ಅವರಿಗೆ ಕೊರೊನಾ ಬಂದೈತಿ ಇವರಿಗೆ ಕೊರೊನಾ ಬಂದೈತಿ, ಅಲ್ಲಿ ಹಂಗೈತಿ ಇಲ್ಲಿ ಹಿಂಗೈತಿ ಅಂತಾ ಸುಳ್ಳು ಸುದ್ದಿ ಹಬ್ಸಾರ ಈ ಭಯೋತ್ಪಾದಕರು. ಹುಚ್ಚು ಮಂದಿಗೆ ಹೆದರಿಕೆ ಹುಟ್ಸಾರನಾ ಮತ್ತೆ ಭಯೋತ್ಪಾದಕರು ಅನ್ನಬೇಕು ಹೌದಿಲ್ಲಾ?' ಎಂದರು.

ಹೌದಲ್ಲವೇ? ಸುಖಾಸುಮ್ಮನೆ ಸುಳ್ಳು ಸುದ್ದಿ ಸೃಷ್ಟಿಸುವ, ಅದನ್ನು ಬೆಳೆಸುತ್ತಾ ಅಳ್ಳೆದೆಯವರಿಗೆ ಭಯ ಹುಟ್ಟಿಸುವ ವಾಂಛೆಯೊಂದು ಬಹುತೇಕ ಎಲ್ಲಾ ಊರುಗಳಲ್ಲಿದೆ. ಕೆಲವರಿಗೆ ಇದೊಂದು ಮೋಜಿನ ವಿಚಾರವೇ ಇರಬಹುದು, ಆದರೆ ಕೇಳುಗರಿಗೆ ಭಯ ಹುಟ್ಟಿಸಿ ಅವರ ಮನೋಸ್ಥೈರ್ಯವನ್ನು ಅಲ್ಲಾಡಿಸುವುದರಲ್ಲಿ ಅನುಮಾನವಿಲ್ಲ. ಮಕ್ಕಳು, ಮಹಿಳೆಯರು ಮತ್ತು ವೃದ್ಧರ ಮನಸ್ಸಿನಲ್ಲೂ ಭಯವೆಂಬ ವಿಷಹೊಕ್ಕಿ ಪೀಡಿಸುತ್ತದೆ. ಅಂದಹಾಗೆ ಹೀಗೆ ಸುಳ್ಳು ಸುದ್ದಿ ಹಬ್ಬಿಸುವವರಲ್ಲಿ ಬಹುತೇಕರು ಸುಶಿಕ್ಷಿತರು, ಹಾಗೆಯೇ ಇಂತಹದ್ದನ್ನ ಕಡೆಗಣಿಸುವವರು ಅನಕ್ಷರಸ್ಥರು ಎಂಬುದು ಸೋಜಿಗವೇ ಸರಿ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಹೀಗಿದ್ದರು...

ಸುಂದರಲಾಲ್ ಬಹುಗುಣ
ಹಸಿರಿರದೆ ಉಸಿರಿಲ್ಲವೆಂದರು
ಜನಜಾಗೃತಿಗೆ ದೇಶ ಸುತ್ತಿದರು
ಜಗತ್ತಿನ ಗಮನ ಸೆಳೆದರು,
ವಿಪರ್ಯಾಸವೆಂದರೆ
ಆ ಉಸಿರು ಸಿಗದೆ
ತಾವೇ ಜೀವ ತೆತ್ತು
ಸಾವಿನಲೂ ಮತ್ತದರ
ಮಹತ್ವ ಸಾರಿದರು!

ಅಶೋಕ ವಿ. ಬಳ್ಳಾ
ಸೂಳೇಬಾವಿ

ದ್ರಾವಿಡ್ ಪ್ರತಿಭೆಗೆ ಸಂದ ಗೌರವ

ಭಾರತ ಕ್ರಿಕೆಟ್ ತಂಡ ಕೈಗೊಳ್ಳಲಿರುವ ಶ್ರೀಲಂಕಾ ಪ್ರವಾಸದಲ್ಲಿ ರಾಹುಲ್ ದ್ರಾವಿಡ್ ಅವರು ಟೀಂ ಇಂಡಿಯಾ ಕೋಚ್ ಆಗಿ ತೆರಳುವ ಸಾಧ್ಯತೆ ಇರುವುದು ಸಂತಸದ ಸಂಗತಿ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ವಾಲ್ ಎಂದೇ ಖ್ಯಾತರಾಗಿರುವ ದ್ರಾವಿಡ್, ಭಾರತೀಯ ಕ್ರಿಕೆಟ್ ಕಂಡ ಕೆಲವೇ ಅಪರೂಪದ ಆಟಗಾರರಲ್ಲಿ ಒಬ್ಬರು. ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ ನಂತರ ಭಾರತೀಯ ಆಟಗಾರರಲ್ಲಿ ಪ್ರಮುಖ ಸ್ಥಾನ ಪಡೆದಿರುವ ದ್ರಾವಿಡ್, ಭಾರತೀಯ ತಂಡಕ್ಕೆ ಕೋಚ್ ಆಗಿ ನೇಮಕಗೊಳ್ಳುವುದು ಅವರ ಪ್ರತಿಭೆಗೆ ಸಂದ ಗೌರವವೇ ಸರಿ.

ರಾಜ್ಯ ರಾಜಧಾನಿ ಬೆಂಗಳೂರಿನಿಂದ ರಾಷ್ಟ್ರ ರಾಜಧಾನಿ ದೆಹಲಿವರೆಗೆ ದ್ರಾವಿಡ್ ಪಯಣ ಸುಲಭವಾದುದೇನಲ್ಲ. ತಮ್ಮ ತಪಸ್ಸಿನಂತಹ ಕ್ರಿಕೆಟ್ ಆರಾಧನೆಯಿಂದ ಯಶೋಗಾಥೆಗೆ ಕಾರಣರಾದ ದ್ರಾವಿಡ್ ತಮ್ಮನ್ನು ಮತ್ತೊಂದು ಮೈಲಿಗಲ್ಲಿಗೆ ಒಡ್ಡಿಕೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆಗಳು.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

ಪಾರಂಪರಿಕ ತಾಣ: ಕಠಿಣ ನಿಯಮ ಪಾಲನೆಯಾಗಲಿ

ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿ ಸೇರ್ಪಡೆಗೆ ಪರಿಶೀಲಿಸಲು ಭಾರತ ಸಲ್ಲಿಸಿರುವ ಯಾದಿಯಲ್ಲಿ ಕೊಪ್ಪಳ ಜಿಲ್ಲೆಯ ಶಿಲಾಯುಗದ ಹಿರೇಬೆಣಕಲ್‌ನ ಗೋರಿಗಳು ಮತ್ತು ಗುಹಾ ಚಿತ್ರಗಳು ಸ್ಥಾನ ಪಡೆದಿರುವುದು ಸಾಮಾನ್ಯದ ಸಂಗತಿಯಲ್ಲ. ನಮ್ಮ ಜಿಲ್ಲೆಗೆ ಹತ್ತಿರವಿರುವ ಇನ್ನೊಂದು ವಿಶ್ವ ಪಾರಂಪರಿಕ ಸ್ಥಳವೆಂದರೆ ಹಂಪಿ. ಇಲ್ಲಿಗೆ ಪ್ರತಿನಿತ್ಯವೂ ಬಹಳಷ್ಟು ವಿದೇಶಿಗರು ಮತ್ತು ಪ್ರವಾಸಿಗರು ಭೇಟಿ ನೀಡುತ್ತಾರೆ. ಆದರೆ ಆ ಜಾಗದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದು ನೋವಿನ ಸಂಗತಿ. ಜಿಲ್ಲಾಡಳಿತವು ಈ ವಿಷಯದ ಬಗ್ಗೆ ಗಮನ ಹರಿಸಿದರೂ ಜಿಲ್ಲಾಧಿಕಾರಿಗಳನ್ನೇ ಎತ್ತಂಗಡಿ ಮಾಡಿಸುವ ಚಾಲಾಕಿಗಳು ಈ ಗುಂಪಿನವರಾಗಿರುತ್ತಾರೆ. ಜಿಲ್ಲೆಯ ಜನರು ಈ ವಿಷಯಗಳನ್ನು ತಿಳಿದೂ ತಿಳಿಯದಂತೆ ಇರಬೇಕಾದ ಪರಿಸ್ಥಿತಿ ಇದೆ. ಹಿರೇಬೆಣಕಲ್ ವಿಶ್ವ ಪಾರಂಪರಿಕ ತಾಣವಾಗುತ್ತದೆ ಎನ್ನುವುದು ಹಿರಿಮೆಯ ಗರಿ. ಆದರೆ ಯುನೆಸ್ಕೊ ಮಾರ್ಗಸೂಚಿಯನ್ನು ಕಠಿಣವಾಗಿ ಪಾಲಿಸಿ, ಯಾವುದೇ ಪಾರಂಪರಿಕ ತಾಣದಲ್ಲಿಯೂ ಅನೈತಿಕ ಚಟುವಟಿಕೆಗಳಿಗೆ ಅನುವಾಗದಂತೆ ನೋಡಿಕೊಳ್ಳಬೇಕು.

ಸಂಪತ್ ಆಕಳವಾಡಿ, ಕೊಪ್ಪಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅರಬ್ಬಿ ಸಮುದ್ರದಲ್ಲಿ ಸೃಷ್ಟಿಯಾದ ತೌತೆ ಎಂಬ ಚಂಡಮಾರುತವು ಅಬ್ಬರಿಸಿ, ಮರೆಯಾಗಿ ಒಂದು ವಾರವೂ ಆಗಿಲ್ಲ; ಬಂಗಾಳ ಕೊಲ್ಲಿಯಲ್ಲಿ ಯಸ್ ಎಂಬ ಹೆಸರಿನ ಮತ್ತೊಂದು ಚಂಡಮಾರುತ ರೂಪುಗೊಂಡು ಅದು ಇದೇ ಬುಧವಾರ ಒಡಿಶಾ ಕರಾವಳಿಯನ್ನು ಅಪ್ಪಳಿಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಂಗಾರು ಋತುವಿಗೆ ಮೊದಲು ಮತ್ತು ಮುಂಗಾರು ಋತುವಿನ ನಂತರ ಸಮುದ್ರದಲ್ಲಿ ಉಂಟಾಗುವ ಚಂಡಮಾರುತಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಹವಾಮಾನ ಬದಲಾವಣೆಯಿಂದಾಗಿ ಸಾಗರದ ಮೇಲ್ಮೈಯ ತಾಪದಲ್ಲಿ ಏರಿಕೆ ಇದಕ್ಕೆ ಮುಖ್ಯ ಕಾರಣ ಎಂದು ವಿಜ್ಞಾನಿಗಳು ಗುರುತಿಸಿದ್ದಾರೆ. 2014ರಲ್ಲಿ ನಡೆಸಿದ ಅಧ್ಯಯನದ ಪ್ರಕಾರ, ಹಿಂದೂ ಮಹಾಸಾಗರದ ಮೇಲ್ಮೈಯ ಸರಾಸರಿ ತಾಪವು 0.7 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿದೆ. ಇತರ ಸಾಗರಗಳಿಗೆ ಹೋಲಿಸಿದರೆ ಹಿಂದೂ ಮಹಾಸಾಗರವು ಹೆಚ್ಚು ತಂಪು. ಹಾಗಿದ್ದರೂ ಬೇಸಿಗೆಯ ಅವಧಿಯಲ್ಲಿ ಸಾಗರದ ಮೇಲ್ಮೈ ತಾಪವು 1.2 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗಿತ್ತು.

ಹಸಿರುಮನೆ ಅನಿಲಗಳು ಹೊರಸೂಸುವ ತಾಪದ ಶೇ 90ರಷ್ಟನ್ನು ಸಮುದ್ರವು ಹೀರಿಕೊಳ್ಳುತ್ತದೆ. ಮಾರುತಗಳಿಗೆ ಶಕ್ತಿ ನೀಡುವುದೇ ನೀರಿನ ತಾಪ. ಇತರ ಸಮುದ್ರಗಳಿಗೆ ಹೋಲಿಸಿದರೆ ಅರಬ್ಬಿಸಮುದ್ರದ ತಾಪವು ಅತ್ಯಂತ ವೇಗವಾಗಿ ಏರಿಕೆಯಾಗುತ್ತಿದೆ ಎಂದು ಗುರುತಿಸಲಾಗಿದೆ.


ಹವಾಮಾನ ಬದಲಾವಣೆಯಿಂದಾಗಿ ಸಮುದ್ರ ಮಟ್ಟ ಏರಿಕೆಯಾಗುತ್ತದೆ ಮತ್ತು ಚಂಡಮಾರುತದ ವೇಗ ಹೆಚ್ಚಳವಾಗುತ್ತದೆ. ಇದು ಮಾರುತವು ಕರಾವಳಿಯನ್ನು ಪ್ರವೇಶಿಸಿದ ನಂತರ ಪರಿಣಾಮ ಬೀರುವ ಭೂ ಪ್ರದೇಶದ ವ್ಯಾಪ್ತಿಯನ್ನೂ ಹೆಚ್ಚಿಸುತ್ತದೆ. ಚಂಡಮಾರುತದ ಅವಧಿಯಲ್ಲಿ ಬೀಳುವ ಮಳೆಯ ಪ್ರಮಾಣ ಹೆಚ್ಚಳವಾಗಿ, ಜಲಾವೃತಗೊಳ್ಳುವ ಪ್ರದೇಶವೂ ಹೆಚ್ಚುತ್ತದೆ. ಯೋಜಿತವಲ್ಲದ ನಗರಾಭಿವೃದ್ಧಿ, ಕಾಂಡ್ಲಾ ವನಗಳ ನಾಶ ಚಂಡಮಾರುತಗಳ ಪರಿಣಾಮವನ್ನು ತೀವ್ರವಾಗಿಸುತ್ತವೆ ಎಂಬುದು ತಜ್ಞರ ವಿಶ್ಲೇಷಣೆ.

ಬಂಗಾಳ ಕೊಲ್ಲಿ ಮತ್ತು ಅರಬ್ಬಿ ಸಮುದ್ರಗಳೆರಡಲ್ಲೂ ಚಂಡಮಾರುತಗಳು ಸೃಷ್ಟಿಯಾಗುತ್ತಿವೆ. ಬಂಗಾಳ ಕೊಲ್ಲಿಗೆ ಹೋಲಿಸಿದರೆ ಅರಬ್ಬಿ ಸಮುದ್ರದಲ್ಲಿ ಚಂಡಮಾರುತಗಳ ಸಂಖ್ಯೆ ಕಡಿಮೆ. 1891ರಿಂದ 2,000ದವರೆಗೆ ಬಂಗಾಳ ಕೊಲ್ಲಿಯಲ್ಲಿ 308 ಚಂಡಮಾರುತಗಳು ಸೃಷ್ಟಿಯಾಗಿವೆ. ಅವುಗಳ ಪೈಕಿ 103 ತೀವ್ರವಾಗಿದ್ದವು. ಅರಬ್ಬಿ ಸಮುದ್ರದಲ್ಲಿ ಸೃಷ್ಟಿಯಾದ 48 ಬಿರುಗಾಳಿಗಳಲ್ಲಿ 24 ತೀವ್ರ ಪರಿಣಾಮ ಉಂಟು ಮಾಡಿದ್ದವು.

7,516 ಕಿ.ಮೀ. ಉದ್ದದ ಕರಾವಳಿ ಹೊಂದಿರುವ ಭಾರತದಲ್ಲಿ ಚಂಡಮಾರುತಗಳ ಅಪಾಯ ಹೆಚ್ಚು. 13 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಕರಾವಳಿಯನ್ನು ಹೊಂದಿವೆ. ಪೂರ್ವ ಕರಾವಳಿಯಲ್ಲಿರುವ ಆಂಧ್ರ ಪ್ರದೇಶ, ತಮಿಳುನಾಡು, ಪುದುಚೇರಿ, ಒಡಿಶಾ ಮತ್ತು ಪಶ್ಚಿಮ ಬಂಗಾಳ ಹೆಚ್ಚು ಅಪಾಯ ಎದುರಿಸುವ ಪ್ರದೇಶಗಳು. ಪಶ್ಚಿಮ ಕರಾವಳಿಯಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳು ಚಂಡಮಾರುತಗಳಿಂದ ಹೆಚ್ಚಿನ ಹಾನಿಗೆ ಒಳಗಾಗುತ್ತವೆ.

ಚಾರಿತ್ರಿಕವಾಗಿ ನೋಡಿದರೆ, ಅರಬ್ಬಿ ಸಮುದ್ರದಲ್ಲಿ ವರ್ಷಕ್ಕೆ ಒಂದು ಅಥವಾ ಎರಡು ಚಂಡಮಾರುತಗಳಷ್ಟೇ ಸೃಷ್ಟಿಯಾಗುತ್ತಿದ್ದವು. ಅವುಗಳು ಕೂಡ ದುರ್ಬಲವಾಗಿರುತ್ತಿದ್ದವು. ಬಂಗಾಳ ಕೊಲ್ಲಿಯಲ್ಲಿ ಕೂಡ ಚಂಡಮಾರುತಗಳ ಸಂಖ್ಯೆ ಬಹಳ ಕಡಿಮೆ ಇತ್ತು.

2018ರಲ್ಲಿ ಬಂಗಾಳ ಕೊಲ್ಲಿಯಲ್ಲಿ ನಾಲ್ಕು ಮತ್ತು ಅರಬ್ಬಿ ಸಮುದ್ರದಲ್ಲಿ ಮೂರು ತೀವ್ರವಾದ ಚಂಡಮಾಡರುತಗಳು ಸೃಷ್ಟಿಯಾಗಿವೆ. 2014ರಿಂದ 2019ರ ಅವಧಿ ಯಲ್ಲಿ ಚಂಡಮಾರುತಗಳ ಪ್ರಮಾಣವು ಶೇ 32ರಷ್ಟು ಏರಿಕೆಯಾಗಿದೆ.



ಚಂಡಮಾರುತ ಹೆಚ್ಚುತ್ತಿರುವುದೇಕೆ?

ನಾಮಕರಣ ಹೇಗೆ?

ಚಂಡಮಾರುತಗಳು ಒಂದು ವಾರ ಅಥವಾ ಅದಕ್ಕಿಂತ ಹೆಚ್ಚು ಸಮಯ ಇರಬಹುದು. ಹಾಗಾಗಿ, ಒಂದೇ ಸಮಯದಲ್ಲಿ ಒಂದಕ್ಕಿಂತ ಹೆಚ್ಚು ಚಂಡಮಾರುತ ಬೀಸುವ ಸಾಧ್ಯತೆ ಇದೆ. ಹಾಗಾದಾಗ ಗೊಂದಲ ಸಹಜ. ಈ ಗೊಂದಲ ನಿವಾರಣೆಗಾಗಿ ಚಂಡಮಾರುತಗಳಿಗೆ ಹೆಸರು ಇರಿಸುವ ಪರಿಪಾಟ ಶುರುವಾಯಿತು. ಪ್ರಾದೇಶಿಕವಾಗಿ ಒಪ್ಪಿತವಾದ ನಿಯಮಾನುಸಾರ ಹೆಸರು ಇರಿಸಲಾಗುತ್ತದೆ.

ಚಂಡಮಾರುತಗಳ ಮೇಲೆ ನಿಗಾ ಇರಿಸುವ ಆರು ಪ್ರಾದೇಶಿಕ ವಿಶೇಷ ಹವಾಮಾನ ಕೇಂದ್ರಗಳು (ಆರ್‌ಎಸ್‌ಎಂಸಿ) ಮತ್ತು ಐದು ಪ್ರಾದೇಶಿಕ ಚಂಡಮಾರುತ ಎಚ್ಚರಿಕೆ ಕೇಂದ್ರಗಳು (ಟಿಸಿಡಬ್ಲ್ಯುಸಿ) ಇವೆ. ಚಂಡಮಾರುತದ ಮುನ್ನೆಚ್ಚರಿಕೆ ನೀಡುವುದು ಮತ್ತು ಹೆಸರು ಇರಿಸುವುದು ಈ ಕೇಂದ್ರಗಳ ಹೊಣೆಯಾಗಿದೆ. ಹಿಂದೂ ಮಹಾಸಾಗರ ಪ್ರದೇಶದ 13 ದೇಶಗಳಿಗೆ ಚಂಡಮಾರುತ ಎಚ್ಚರಿಕೆ ನೀಡುವುದು ದೆಹಲಿಯಲ್ಲಿರುವ ಆರ್‌ಎಸ್‌ಎಂಸಿಯ ಜವಾಬ್ದಾರಿ. ಈ 13 ದೇಶಗಳೆಂದರೆ, ಬಾಂಗ್ಲಾದೇಶ, ಭಾರತ, ಇರಾನ್, ಮಾಲ್ಡೀವ್ಸ್, ಮ್ಯಾನ್ಮಾರ್, ಒಮಾನ್, ಪಾಕಿಸ್ತಾನ, ಕತಾರ್, ಸೌದಿ ಅರೇಬಿಯಾ, ಶ್ರೀಲಂಕಾ, ಥಾಯ್ಲೆಂಡ್, ಅರಬ್ ಸಂಯುಕ್ತ ಸಂಸ್ಥಾನ ಮತ್ತು ಯೆಮನ್.

ಅರಬ್ಬಿ ಸಮುದ್ರ ಮತ್ತು ಬಂಗಾಳ ಕೊಲ್ಲಿಯಲ್ಲಿ ಸೃಷ್ಟಿಯಾಗುವ ಚಂಡಮಾರುತಳಿಗೆ ಹೆಸರು ಇರಿಸುವುದು ಕೂಡ ದೆಹಲಿಯ ಆರ್‌ಎಸ್‌ಎಂಸಿಯ ಹೊಣೆ. ಈ ಪ್ರದೇಶದ ದೇಶಗಳು ಸೂಚಿಸಿದ ಹೆಸರುಗಳನ್ನು ಪಟ್ಟಿ ಮಾಡಿ ಇರಿಸಲಾಗುತ್ತದೆ. ಈ ಪಟ್ಟಿಯಲ್ಲಿರುವ ಹೆಸರುಗಳನ್ನು ಸರದಿಯಂತೆ ಇರಿಸಬೇಕಾಗುತ್ತದೆ. ಚಂಡಮಾರುತ ಸೃಷ್ಟಿಯಾಗುವುದಕ್ಕೆ ಎಷ್ಟೋ ವರ್ಷ ಮೊದಲೇ ಹೆಸರು ನಿರ್ಧಾರ ಆಗಿರುತ್ತದೆ.

2004ರಲ್ಲಿ ರೂಪಿಸಿದ್ದ 64 ಹೆಸರುಗಳ ಪಟ್ಟಿಯಲ್ಲಿದ್ದ ಕೊನೆಯ ಹೆಸರನ್ನು ಕಳೆದ ವರ್ಷ ಬೀಸಿದ ಆಂಫನ್ ಚಂಡಮಾರುತಕ್ಕೆ ಇರಿಸಲಾಗಿದೆ.

ಭಾರತೀಯ ಹವಾಮಾನ ಇಲಾಖೆಯು 2020ರಲ್ಲಿ ಹೊಸ ಪಟ್ಟಿ ರೂಪಿಸಿದೆ. 13 ದೇಶಗಳು ಸೂಚಿಸಿದ ತಲಾ 13 ಹೆಸರುಗಳು ಹೊಸ ಪಟ್ಟಿಯಲ್ಲಿ ಸೇರಿವೆ. ಒಟ್ಟು 169 ಹೆಸರುಗಳಿವೆ. ಈಗ ಹೊಸ ಪಟ್ಟಿಯಲ್ಲಿರುವ ಹೆಸರುಗಳನ್ನು ಬಳಸಲಾಗುತ್ತಿದೆ. ಈ ವಾರ ಅಪ್ಪಳಿಸಲಿರುವ ಚಂಡಮಾರುತ 'ಯಸ್' ಹೆಸರನ್ನು ಒಮಾನ್ ಸೂಚಿಸಿದೆ. ಮುಂದಿನ ಚಂಡಮಾರುತದ ಹೆಸರು 'ಗುಲಾಬ್', ಇದನ್ನು ಪಾಕಿಸ್ತಾನ ಸೂಚಿಸಿದೆ.

ಇತ್ತೀಚಿನ ಕೆಲವು ಚಂಡಮಾರುತಗಳು

- ಕಳೆದ ವರ್ಷ ಬಂಗಾಳ ಕೊಲ್ಲಿಯಲ್ಲಿ ಸೃಷ್ಟಿಯಾಗಿದ್ದ ಆಂಫನ್ ಚಂಡಮಾರುತವು ಅತ್ಯಂತ ತೀವ್ರವಾದ 'ಸೂಪರ್ ಸೈಕ್ಲೋನ್' ವರ್ಗದ್ದಾಗಿತ್ತು. ಪಶ್ಚಿಮ ಬಂಗಾಳದಲ್ಲಿ 72 ಜನರು, ಬಾಂಗ್ಲಾದೇಶದಲ್ಲಿ 12 ಜನರು ಇದಕ್ಕೆ ಬಲಿಯಾಗಿದ್ದರು. ಬಂಗಾಳದಲ್ಲಿ 1.40 ಕೋಟಿ ಜನರು ವಿದ್ಯುತ್ ಸಂಪರ್ಕ ಕಳೆದುಕೊಂಡಿದ್ದರು. ಗಂಟೆಗೆ 160 ಕಿಲೋಮೀಟರ್ ವೇಗದಲ್ಲಿ ಬೀಸಿದ ಇದು, ಒಟ್ಟು ₹95,000 ಕೋಟಿ ನಷ್ಟ ಉಂಟು ಮಾಡಿತ್ತು ಎಂದು ಅಂದಾಜಿಸಲಾಗಿದೆ.
- ಕಳೆದ ವರ್ಷ ಅರಬ್ಬಿ ಸಮುದ್ರದ ಮೂಲಕ 'ನಿಸರ್ಗ' ಚಂಡಮಾರುತವು ಮುಂಬೈ ಕರಾವಳಿಗೆ ಅಪ್ಪಳಿಸಿತ್ತು. ಆಗ ಮುಂಬೈನಲ್ಲಿ ಕೋವಿಡ್‌ನ ಮೊದಲ ಅಲೆ ಭಾರಿ ಜೋರಾಗಿತ್ತು. ಆದರೆ ಚಂಡಮಾರುತ ಒಮಾನ್ ಕಡೆಗೆ ದಿಕ್ಕು ಬದಲಿಸಿದ್ದರಿಂದ, ಭಾರಿ ಪ್ರಮಾಣದ ಹಾನಿ ತಪ್ಪಿತು.
- 'ಫನಿ' ಚಂಡಮಾರುತವು 1998ರ ಬಳಿಕ ಒಡಿಶಾಗೆ ಅಪ್ಪಳಿಸಿದ ಅತ್ಯಂತ ಪ್ರಬಲ ಉಷ್ಣವಲಯದ ಚಂಡಮಾರುತವಾಗಿದೆ. 2019ರಲ್ಲಿ ಒಡಿಶಾ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ಮತ್ತು ಪೂರ್ವ ಭಾರತದಲ್ಲಿ ಭಾರಿ ಪ್ರಮಾಣದ ಜೀವ ಮತ್ತು ಆಸ್ತಿ ನಷ್ಟ ಉಂಟುಮಾಡಿತು. ಬಾಂಗ್ಲಾದೇಶ, ಭೂತಾನ್ ಮತ್ತು ಶ್ರೀಲಂಕಾಗೂ ಅಪ್ಪಳಿಸಿತ್ತು.
- 'ನಿವಾರ್' ಚಂಡಮಾರುತವು 2020ರಲ್ಲಿ ತಮಿಳುನಾಡು, ಪುದುಚೇರಿಗೆ ಅಪ್ಪಳಿಸಿ ರೌದ್ರಾವತಾರ ತೋರಿತ್ತು. ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದರಿಂದ ಹೆಚ್ಚಿನ ಸಾವುನೋವು ಉಂಟಾಗದಿದ್ದರೂ, ರೈತಾಪಿ ವರ್ಗ ಕಷ್ಟ ಅನುಭವಿಸಿತು.
- 2019ರಲ್ಲಿ 'ಬುಲ್‌ಬುಲ್' ಚಂಡಮಾರುತವು ಪಶ್ಚಿಮ ಬಂಗಾಳವನ್ನು ಅಪ್ಪಳಿಸಿದ ತೀವ್ರ ಸ್ವರೂಪದ ಚಂಡಮಾರುತವಾಗಿತ್ತು. ಇದು ಭಾರಿ ಮಳೆ, ಪ್ರವಾಹ ಇತ್ಯಾದಿಗಳಿಗೆ ಕಾರಣವಾಯಿತು. ಇದರಿಂದಾಗಿ ಜೀವ ಮತ್ತು ಆಸ್ತಿ ನಾಶವಾಯಿತು. ಬಾಂಗ್ಲಾದೇಶಕ್ಕೂ ತೊಂದರೆ ಕೊಟ್ಟಿತ್ತು.
- 'ವಾಯು' ಚಂಡಮಾರುತವು ಅರಬ್ಬಿ ಸಮುದ್ರದ ಮೂಲಕ ಅಪ್ಪಳಿಸಿ ಗುಜರಾತ್ ರಾಜ್ಯದಲ್ಲಿ ಜೀವ ಮತ್ತು ಆಸ್ತಿಗೆ ಹಾನಿ ಉಂಟು ಮಾಡಿತು. ಇದು 1998ರ ಗುಜರಾತ್ ಚಂಡಮಾರುತದ ನಂತರ ರಾಜ್ಯಕ್ಕೆ ಅಪ್ಪಳಿಸಿದ ಪ್ರಬಲ ಚಂಡಮಾರುತವಾಗಿತ್ತು. ಇದು ಮಾಲ್ಡೀವ್ಸ್, ಪಾಕಿಸ್ತಾನ ಮತ್ತು ಒಮಾನ್‌ಗಳ ಮೇಲೂ ಪರಿಣಾಮ ಬೀರಿತು.

ಸಾವು ನೋವಿಗೆ ಕಡಿವಾಣ

ಚಂಡಮಾರುತಗಳ ತೀವ್ರತೆ ಹೆಚ್ಚಾಗಿದ್ದರೂ ಈಚಿನ ಕೆಲವು ವರ್ಷಗಳಲ್ಲಿ ಅವುಗಳಿಂದ ಸಂಭವಿಸುವ ಸಾವುನೋವಿನ ಸಂಖ್ಯೆ ತೀರಾ ಕಡಿಮೆಯಾಗಿದೆ. ಹಿಂದೆಲ್ಲ ಚಂಡಮಾರುತಗಳು ಆಸ್ತಿ ನಾಶ ಮಾಡುವುದರ ಜತೆಗೆ ಸಾವಿರಾರು ಮಂದಿಯ ಪ್ರಾಣವನ್ನೂ ತೆಗೆಯುತ್ತಿದ್ದವು. ಈಗ ನಿಖರ ಮುನ್ಸೂಚನಾ ವ್ಯವಸ್ಥೆ ಅಭಿವೃದ್ಧಿ ಹೊಂದಿರುವುದರಿಂದ ಸಾವು ನೋವಿನ ಪ್ರಮಾಣ ಕಡಿಮೆಯಾಗಿದೆ.

ಚಂಡಮಾರುತಗಳನ್ನು ಗ್ರಹಿಸುವ ವ್ಯವಸ್ಥೆಯು ಹಲವು ದಶಕಗಳಿಂದಲೇ ಇದ್ದರೂ, ಬರಲಿರುವ ಚಂಡಮಾರುತವು ಎಷ್ಟು ಶಕ್ತಿಶಾಲಿಯಾದುದು, ಅದು ಉಂಟುಮಾಡಬಹುದಾದ ಹಾನಿ ಯಾವ ಪ್ರಮಾಣದ್ದು ಎಂಬುದನ್ನು ನಿಖರವಾಗಿ ಊಹಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ 'ಇನ್‌ಸ್ಯಾಟ್' ಉಪಗ್ರಹಗಳು ಹಾಗೂ ಚಂಡಮಾರುತ ಪತ್ತೆ ರೇಡಾರ್ ವ್ಯವಸ್ಥೆ ಅಭಿವೃದ್ಧಿಯಾದ ನಂತರ ಚಂಡಮಾರುತವು ರೂಪುಗೊಳ್ಳುವ ಹಂತದಿಂದ ಕ್ಷಣಕ್ಷಣದ ಮಾಹಿತಿಯನ್ನು ಪಡೆಯಲು ಸಾಧ್ಯವಾಗುತ್ತಿದೆ. ಸಮುದ್ರದಲ್ಲಿ ನೂರಾರು ಮೈಲಿ ದೂರದಲ್ಲಿ ವಾಯುಭಾರ ಕುಸಿತವಾದಾಗ ಅದನ್ನು ಗುರುತಿಸಬಹುದಾದ ವ್ಯವಸ್ಥೆ ಈಗ ಇದೆ. ಅದು ಚಂಡಮಾರುತವಾಗಿ ರೂಪುಗೊಳ್ಳುತ್ತಿದೆಯೇ, ಎಷ್ಟು ವೇಗದಲ್ಲಿ, ಯಾವ ದಿಕ್ಕಿನಲ್ಲಿ ಸಾಗುತ್ತಿದೆ. ಯಾವ ಸಮಯದಲ್ಲಿ ಭೂಮಿಯನ್ನು ಅಪ್ಪಳಿಸಲಿದೆ, ಭೂಮಿಗೆ ಅಪ್ಪಳಿಸುವಾಗ ಅದರ ವೇಗ ಎಷ್ಟಿರುತ್ತದೆ, ಎಷ್ಟು ಹಾನಿ ಸಂಭವಿಸಬಹುದು ಎಂಬೆಲ್ಲಾ ವಿಚಾರಗಳನ್ನು ಕೆಲವು ದಿನಗಳ ಮುಂಚಿತವಾಗಿಯೇ ನಿಖರವಾಗಿ ಪತ್ತೆ ಮಾಡಬಹುದಾಗಿದೆ. ಇದರಿಂದಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರಗಳಿಗೆ ಸಾಧ್ಯವಾಗುತ್ತಿದೆ. ಈ ಕಾರಣದಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಸಂಭವಿಸಿದ ಚಂಡಮಾರುತಗಳಿಂದ ಪ್ರಾಣ ಹಾನಿಯ ಪ್ರಮಾಣ ತುಂಬಾ ಕಡಿಮೆಯಾಗಿರುತ್ತದೆ. ಜನರು ಆಡಳಿತಕ್ಕೆ ಸಂಪೂರ್ಣ ಸಹಕಾರ ನೀಡಿದರೆ ಪ್ರಾಣಹಾನಿಯನ್ನು ಸಂಪೂರ್ಣವಾಗಿ ತಡೆಯಬಹುದು ಎನ್ನುತ್ತಾರೆ ತಜ್ಞರು.

ಭಾರತೀಯ ಹವಾಮಾನ ಇಲಾಖೆಯು ಈಗ ತಮ್ಮ ಪ್ರಾದೇಶಿಕ ಚಂಡಮಾರುತ ಮುನ್ನೆಚ್ಚರಿಕೆ ಕೇಂದ್ರಗಳು (ಎಸಿಡಬ್ಲ್ಯುಸಿ) ಮತ್ತು ಚಂಡಮಾರುತ ಮುನ್ನೆಚ್ಚರಿಕೆ ಕೇಂದ್ರಗಳ (ಸಿಡಬ್ಲ್ಯುಸಿ) ಮೂಲಕ ಆಯಾ ಕರಾವಳಿ ರಾಜ್ಯಗಳಿಗೆ ಮುಂಚಿತವಾಗಿ ಎಚ್ಚರಿಕೆಗಳನ್ನು ನೀಡುತ್ತಿದೆ.

ಆದರೆ ಪ್ರಕೃತಿಯ ಮುಂದೆ ಈ ವ್ಯವಸ್ಥೆಯೂ ಕೆಲವೊಮ್ಮೆ ಸ್ವಲ್ಪ ವಿಫಲವಾಗುವುದಿದೆ. ಉಪಗ್ರಹ ಹಾಗೂ ಇತರ ವ್ಯವಸ್ಥೆಯ ಮೂಲಕ ಮಾಡಿರುವ ಅಂದಾಜು ತಪ್ಪುವುದಿದೆ. ಗುಜರಾತ್ ಕರಾವಳಿಯನ್ನು ಅಪ್ಪಳಿಸಲಿದೆ ಎಂದು ಭಾವಿಸಿದ್ದ ಚಂಡಮಾರುತವು ಕರಾವಳಿಯನ್ನು ತಲುಪುವ ವೇಳೆಗೆ ದುರ್ಬಲವಾಗುವುದು, ಅಥವಾ ತನ್ನ ಹಾದಿಯನ್ನು ಬದಲಿಸಿರುವ ಉದಾಹರಣೆ ಇದೆ. ಅದೇ ರೀತಿ, ಚಂಡಮಾರುತವು ಹಠಾತ್ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಶಕ್ತಿಶಾಲಿಯಾಗಿ ತೀರವನ್ನು ಅಪ್ಪಳಿಸಿದ್ದೂ ಇದೆ. ಏನೇ ಆದರೂ, ಸಾವುನೋವಿನ ಪ್ರಮಾಣವನ್ನು ತಗ್ಗಿಸುವಲ್ಲಿ ಮುನ್ನೆಚ್ಚರಿಕೆ ವ್ಯವಸ್ಥೆ ಸಹಾಯ ಮಾಡಿದೆ ಎಂದು ಹಿಂದಿನ ಕೆಲವು ಚಂಡಮಾರುತಗಳಲ್ಲಿ ಸಂಭವಿಸಿದ ಮತ್ತು ಇತ್ತೀಚೆಗೆ ಸಂಭವಿಸುತ್ತಿರುವ ಸಾವುನೋವುಗಳ ಸಂಖ್ಯೆಯನ್ನು ತಾಳೆ ಮಾಡಿದಾಗ ಸ್ಪಷ್ಟವಾಗುತ್ತದೆ.

ಡಯಾನಾ ಸಂದರ್ಶನದ ಹಿಂದೆ ಮೋಸದ ತಂತ್ರ

ಲಂಡನ್ (ಎಎಫ್‌ಪಿ): 'ಬಿಬಿಸಿಯ ಪತ್ರಕರ್ತ ಮಾರ್ಟಿನ್ ಬಷೀರ್ ಅವರು 1995ರಲ್ಲಿ ರಾಜಕುಮಾರಿ ಡಯಾನಾ ಅವರ ಸಂದರ್ಶನಕ್ಕಾಗಿ ಮೋಸದ ತಂತ್ರವನ್ನು ಅನುಸರಿಸಿದ್ದರು. ಡಯಾನಾ ಅವರ ಸಾವಿಗೆ ಆ ಸಂದರ್ಶನವೂ ಕಾರಣವಾಗಿತ್ತು' ಎಂಬ ವರದಿಯೊಂದು ಪ್ರಕಟವಾಗಿದೆ.



ಮಾರ್ಟಿನ್ ಬಷೀರ್



ಡಯಾನಾ

ತನಿಖೆಯ ವರದಿ ಸಲ್ಲಿಕೆಯಾಗುವುದಕ್ಕೂ ಕೆಲವೇ ದಿನ ಮೊದಲು ಬಷೀರ್ ಅವರು ಅನಾರೋಗ್ಯದ ಕಾರಣ ನೀಡಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಲ್ಲದೆ, ಡಯಾನಾ ಅವರ ಪುತ್ರರಾದ ರಾಜಕುಮಾರ ವಿಲಿಯಂ ಹಾಗೂ ಹ್ಯಾರಿ ಅವರಲ್ಲಿ ಕ್ಷಮೆ ಯಾಚಿಸಿದ್ದಾರೆ.

'ಡಯಾನಾ ಅವರನ್ನು ಸಂಪರ್ಕಿಸಲು ಬಷೀರ್ ಅವರು ಡಯಾನಾ ಅವರ ಅತ್ಯಂತ ಆತ್ಮೀಯರೆನಿಸಿಕೊಂಡ ಕೆಲವರ ನಕಲಿ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳನ್ನು ತಯಾರಿಸಿದ್ದರು. ಈ ಸ್ಟೇಟ್‌ಮೆಂಟ್‌ಗಳನ್ನು ಡಯಾನಾ ಅವರ ಸಹೋದರ ಚಾರ್ಲ್ಸ್ ಸ್ಪೆನ್ಸರ್ ಅವರಿಗೆ ತೋರಿಸಿ, 'ಡಯಾನಾ ಅವರ ಚಲನವಲನಗಳ ಮೇಲೆ ನಿಗಾ ಇಡಲು ಅವರ ಸಮೀಪವರ್ತಿಗಳಿಗೆ ಭದ್ರತಾ ಏಜೆನ್ಸಿಗಳು ಭಾರಿ ಪ್ರಮಾಣದಲ್ಲಿ ಹಣನೀಡುತ್ತಿವೆ' ಎಂದು ನಂಬಿಸಿದ್ದರು. ಅವುಗಳನ್ನು ಇಟ್ಟುಕೊಂಡೇ ಡಯಾನಾ ಅವರ ಸಂದರ್ಶನದ ಅವಕಾಶವನ್ನೂ ಪಡೆದಿದ್ದರು' ಎಂದು ನಿವೃತ್ತ ನ್ಯಾಯಾಧೀಶ ಜಾನ್ ಡೈಸನ್ ಅವರು ನಡೆಸಿದ ತನಿಖಾ ವರದಿಯಲ್ಲಿ ತಿಳಿಸಲಾಗಿದೆ.

'ಬಷೀರ್ ಅವರ ವರ್ತನೆ ಹಾಗೂ ಆ ಸಂದರ್ಶನವು ನಮ್ಮ ಪಾಲಕರ ನಡುವಿನ ಸಂಬಂಧ ಹದಗೆಡಲು ಕಾರಣವಾಗಿತ್ತು. ತಾಯಿ ಡಯಾನಾ ಅವರು ಕೊನೆಯ ದಿನಗಳಲ್ಲಿ ಅನುಭವಿಸುತ್ತಿದ್ದ ಭಯ, ಆತಂಕ ಮತ್ತು ಒಂಟಿತನಕ್ಕೆ ಆ ಸಂದರ್ಶನ ಗಮನಾರ್ಹ ಕಾಣಿಕೆ ನೀಡಿದೆ' ಎಂದು ಡಯಾನಾ ಅವರ ಪುತ್ರ ಪ್ರಿನ್ಸ್ ವಿಲಿಯಮ್ಸ್ ಆರೋಪಿಸಿದ್ದಾರೆ.

'ನನ್ನ ತಾಯಿಯ ಸಾವಿಗೆ ಆ ಮೋಸದ ಸಂದರ್ಶನವೂ ಕಾರಣ. ಶೋಷಣೆ ಹಾಗೂ ಈ ಅನೈತಿಕ ನಡವಳಿಕೆಯು ಅವರನ್ನು ಬಲಿ ತೆಗೆದುಕೊಂಡಿದೆ' ಎಂದು ಇನ್ನೊಬ್ಬ ಪುತ್ರ ಹ್ಯಾರಿ ಹೇಳಿದ್ದಾರೆ.

ಕ್ಷಮೆ ಯಾಚಿಸಿದ ಬಷೀರ್

ತನಿಖೆಯ ವರದಿಯು ಪ್ರಕಟವಾಗುತ್ತಿದ್ದಂತೆಯೇ ಬಷೀರ್ ಅವರು ತಮ್ಮ ವರ್ತನೆಗೆ ಕ್ಷಮೆ ಯಾಚಿಸಿದ್ದಾರೆ. 'ಡಯಾನಾ ಅವರಿಗೆ ಹಾನಿ ಉಂಟುಮಾಡಲು ನಾನು ಯಾವತ್ತೂ ಬಯಸಿರಲಿಲ್ಲ. ಅವರ ಸಾವಿಗೆ ನಾನೇ ಕಾರಣ ಎಂಬ ಆರೋಪವನ್ನು ಒಪ್ಪಿಕೊಳ್ಳಲಾಗದು' ಎಂದಿದ್ದಾರೆ.

'ಡಯಾನಾ ಅವರ ಜೀವನದಲ್ಲಿ ನಡೆಯುತ್ತಿದ್ದ ಅನೇಕ ಬೆಳವಣಿಗೆಗಳು ಹಾಗೂ ಕೆಲವು ಸಂಕೀರ್ಣ ವಿಷಯಗಳಿಗೆ ನಾನು ಕಾರಣ ಎಂಬುದನ್ನು ಒಪ್ಪಿಕೊಳ್ಳಲಾರೆ. ಅವರ ಷರತ್ತುಗಳನ್ನು ಒಪ್ಪಿಕೊಂಡೇ ಆ ಸಂದರ್ಶನ ನಡೆಸಲಾಗಿತ್ತು. ಅದನ್ನು 2.28 ಕೋಟಿ ಜನರು ವೀಕ್ಷಿಸಿದ್ದರು. ಇದಾದ ನಂತರವೂ ನಮ್ಮ ಸ್ನೇಹ ಮುಂದುವರಿದಿತ್ತು. ಸಂದರ್ಶನದಲ್ಲಿ ಡಯಾನಾ ಅವರು ಬಹಿರಂಗಪಡಿಸಿರುವ ವಿಚಾರಗಳ ಮೇಲೆ, ಅವರ ಸಹೋದರನಿಗೆ ನಾನು ತೋರಿಸಿರುವ ದಾಖಲೆಗಳ ಯಾವುದೇ ಪ್ರಭಾವ ಇರಲಿಲ್ಲ' ಎಂದು ಬಷೀರ್ ಹೇಳಿದ್ದಾರೆ.

1997ರಲ್ಲಿ ಬೆನ್ನಟ್ಟಿ ಬರುತ್ತಿದ್ದ ಛಾಯಾಗ್ರಾಹಕರಿಂದ ತಪ್ಪಿಸಲು ಕಾರಿನಲ್ಲಿ ವೇಗವಾಗಿ ಹೋಗುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಡಯಾನಾ ಅವರು ಸಾವನ್ನಪ್ಪಿದ್ದರು.

ಬಿಬಿಸಿಗೆ ಧನಸಹಾಯ ಒದಗಿಸುವುದು ಹಾಗೂ ಅದರ ಆಡಳಿತದ ವಿಚಾರವಾಗಿ ಸರ್ಕಾರದ ಪರಿಶೀಲನೆಯು ಮುಂದಿನ ವರ್ಷ ನಡೆಯಲಿದೆ. ಇದು ಅತಿ ಮುಖ್ಯವಾದ ಘಟ್ಟ ಎಂದು ಗೃಹ ಕಾರ್ಯದರ್ಶಿ ಪ್ರೀತಿ ಪಟೇಲ್ ಹೇಳಿದ್ದಾರೆ.

'ವಿಶ್ವಾಸಕ್ಕೆ ಧಕ್ಕೆಯಾಗಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಈ ವರದಿಗೆ ಸೂಕ್ತವಾಗಿ ಸ್ಪಂದಿಸುವುದು ಮತ್ತು ವಿಶ್ವಾಸವನ್ನು ಪುನಃ ಸ್ಥಾಪಿಸುವುದು ಬಿಬಿಸಿಯ ಹೊಣೆಯಾಗಿದೆ' ಎಂದು ಪ್ರೀತಿ ಅವರು ಹೇಳಿದ್ದಾರೆ.

ಸಂದರ್ಶನದಲ್ಲಿ ಹೇಳಿದ್ದೇನು?: ಡಯಾನಾ ಅವರು ತಮ್ಮ ಮತ್ತು ಪತಿ ಚಾರ್ಲ್ಸ್ ನಡುವಿನ ಸಂಬಂಧ ಹಳಸಿದ್ದನ್ನು ಬಿಬಿಸಿಗೆ ನೀಡಿದ್ದ ಸಂದರ್ಶನದಲ್ಲಿ ಬಹಿರಂಗಪಡಿಸಿದ್ದರು. ಜತೆಗೆ. ಚಾರ್ಲ್ಸ್ ಮತ್ತು ಕೆಮಿಲಾ ಪಾರ್ಕರ್ (ಆ ನಂತರ ಇವರ ವಿವಾಹ ನಡೆದಿತ್ತು) ನಡುವೆ ಸಂಬಂಧವಿದೆ ಎಂದೂ ಹೇಳಿದ್ದರು. ತಾವು ಬೇರೊಬ್ಬನನ್ನು ಪ್ರೀತಿಸಿರುವ ವಿಚಾರವನ್ನು ಹೇಳಿಕೊಂಡಿದ್ದರು. ಇದು ಬ್ರಿಟನ್‌ನಲ್ಲಿ ಭಾರಿ ಕೋಲಾಹಲ ಸೃಷ್ಟಿಸಿತ್ತು.

ಮೈಕಲ್ ಜಾಕ್ಸನ್ ಸಂದರ್ಶನ


ಡಯಾನಾ ಸಂದರ್ಶನದ ವೇಳೆಗೆ ಬಷೀರ್ ಪತ್ರಿಕೋದ್ಯಮದಲ್ಲಿ ಅಷ್ಟೇನೂ ಪರಿಚಿತ ಹೆಸರಾಗಿರಲಿಲ್ಲ. ಆದರೆ, ಆ ಸಂದರ್ಶನದ ನಂತರ ಅವರು ಇನ್ನೂ ಹಲವು ದಿಗ್ಗಜರ ಸಂದರ್ಶನ ನಡೆಸಿದ್ದರು. ಪಾಪ್ ಗಾಯಕ ಮೈಕಲ್ ಜಾಕ್ಸನ್ ಅವರ ಸಂದರ್ಶನವನ್ನೂ ನಡೆಸಿದ್ದರು.

ಮೈಕಲ್ ಸಾವಿನ ನಂತರವೂ ಅವರ ಕುಟುಂಬದವರು, 'ಮೈಕಲ್ ಸಾವಿಗೆ ಬಷೀರ್ ಅವರೇ ಕಾರಣ' ಎಂದು ಆರೋಪಿಸಿದ್ದರು. 'ಆ ಸಂದರ್ಶನ ಪ್ರಸಾರವಾದ ನಂತರ ಮೈಕಲ್ ಅವರು ಹೆಚ್ಚುಹೆಚ್ಚು ಮಾದಕ ವಸ್ತುಗಳ ಮೇಲೆ ಅವಲಂಬಿತರಾಗಿದ್ದರು' ಎಂದು ಕುಟುಂಬದವರು ಆರೋಪಿಸಿದ್ದರು.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಡಾ. ರೆಡ್ಡೀಸ್ ಲ್ಯಾಬ್ ಸಹಯೋಗದಲ್ಲಿ ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ 2ಡಿಜಿ ಔಷಧ ಕೊರೊನಾ ವೈರಸ್ ವಿರುದ್ಧ ಪರಿಣಾಮಕಾರಿಯಾಗಿ ಕೆಲಸ ಮಾಡುವ ವಿಶ್ವಾಸ ಹುಟ್ಟುಹಾಕಿದೆ. ಔಷಧ ಎಲ್ಲಿ ಲಭ್ಯ, ಪಡೆಯುವುದು ಹೇಗೆ, ಬೆಲೆ ಎಷ್ಟು ಎಂಬೆಲ್ಲ ಪ್ರಶ್ನೆಗಳು ಇವೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಒಂದು ಸಂದೇಶದಲ್ಲಿ ಈ ಕುರಿತ ಮಾಹಿತಿ ಇದೆ. ಡಾ. ರೆಡ್ಡೀಸ್ ಲ್ಯಾಬ್‌ಗೆ ಸಂಬಂಧಿಸಿದವರು ಎನ್ನಲಾದ ಇಬ್ಬರ ಇ-ಮೇಲ್ ವಿಳಾಸವನ್ನು ನೀಡಲಾಗಿದ್ದು, ರೋಗಿಯ ಮಾಹಿತಿ, ಆಸ್ಪತ್ರೆಯ ಮಾಹಿತಿಯನ್ನು ಈ ವ್ಯಕ್ತಿಗಳಿಗೆ ಇ-ಮೇಲ್ ಮುಖಾಂತರ ಕಳುಹಿಸಿ 2ಡಿಜಿ ಔಷಧ ಪಡೆದುಕೊಳ್ಳಬಹುದು ಎಂದು ಈ ಸಂದೇಶ ತಿಳಿಸುತ್ತದೆ.



ಸಂದೇಶದಲ್ಲಿರುವ ಮಾಹಿತಿ ನಕಲಿ ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ತಿಳಿಸಿದೆ. ಡಿಆರ್‌ಡಿಒ ಅಥವಾ ರೆಡ್ಡೀಸ್ ಲ್ಯಾಬ್ ಔಷಧದ ಬೆಲೆ, ಲಭ್ಯತೆ, ಸಂಪರ್ಕಿಸುವ ವಿಧಾನದ ಬಗ್ಗೆ ಈವರೆಗೆ ಅಧಿಕೃತ ಮಾಹಿತಿ ನೀಡಿಲ್ಲ. ಜೂನ್ ಮಧ್ಯಭಾಗದ ಹೊತ್ತಿಗೆ ಔಷಧವು ಜನಬಳಕೆಗೆ ಲಭ್ಯವಾಗಲಿದೆ. ರೆಡ್ಡೀಸ್ ಲ್ಯಾಬ್ ಇದನ್ನು ದೃಢಪಡಿಸಿದೆ. 2ಡಿಜಿಗೆ ಸಂಬಂಧಿಸಿದ ಏನೇ ಮಾಹಿತಿಗೆ 2DG@drreddys.comಗೆ ಮೇಲ್ ಮಾಡುವಂತೆ ಸಲಹೆ ನೀಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ತಮ್ಮ ಭಾಗ್ಯಕ್ಕೆ ಬಾಧ್ಯರು

ಮಕ್ಕಳ ಭವಿಷ್ಯಕ್ಕೆ ಕಕ್ಕುಲತೆಗೊಳಬೇಡ |
ಪಕ್ಕಾಗುವುದು ಭಾಗ್ಯವೆಂತೆಂತೊ ಜಗದಿ ||
ದಕ್ಕಿತೇಂ ಕುರುಪಾಂಡುತನಯರ್ಗೆ ರಾಜ್ಯಸುಖ? |
ದಿಕ್ಕವರಿಗವರವರೆ – ಮಂಕುತಿಮ್ಮ || 420 ||

ಪದ-ಅರ್ಥ: ಕಕ್ಕುಲತೆ = ಕನಿಕರ, ಮರುಕ, ಅತಿಯಾದ ಕಾಳಜಿ, ಪಕ್ಕಾಗುವುದು = ಪಕ್ವವಾಗುವುದು, ಭಾಗ್ಯವೆಂತೆಂತೊ = ಭಾಗ್ಯ + ಎಂತೆಂತೊ, ದಕ್ಕಿತೇಂ = ದೊರಕಿತೆ, ದಿಕ್ಕವರಿಗವರವರೆ = ದಿಕ್ಕು + ಅವರಿಗೆ + ಅವರವರೆ.

ವಾಚ್ಯಾರ್ಥ: ಮಕ್ಕಳ ಭವಿಷ್ಯಕ್ಕಾಗಿ ಅತಿಯಾದ ಕಳವಳಪಡುವುದು ಬೇಡ. ಅವರ ಭಾಗ್ಯ ಎಂತೆಂತೊ ಜಗತ್ತಿನಲ್ಲಿ ಪಕ್ವವಾಗುತ್ತದೆ. ಕುರುವಂಶಜರಾದ ಕೌರವರು ಮತ್ತು ಪಾಂಡವರಿಗೆ ರಾಜ್ಯಸುಖ ದೊರಕಿತೇ? ಅವರವರ ದಿಕ್ಕಿಗೆ, ಭಾಗ್ಯಕ್ಕೆ ಅವರವರೇ ಕಾರಣರು.

ಮಕ್ಕಳೆಂದರೆ ನಮ್ಮ ಜೀವನದ ಮುಂದುವರಿಕೆ. ಅವರು ನಮ್ಮ ಅಪೂರ್ಣ ಕನಸುಗಳನ್ನು ಪೂರ್ತಿಮಾಡಿಯಾರು ಎಂಬ ನಂಬಿಕೆ ಪಾಲಕರದು. ಅವರ ಭವಿಷ್ಯದ ಭದ್ರತೆಗೆ ಏನೆಲ್ಲ ತ್ಯಾಗಗಳು, ಯೋಜನೆಗಳು, ಕನಸುಗಳು! ಅವು ನಮ್ಮ ಪ್ರಯತ್ನ ಮಾತ್ರ. ಅವರಿಗೆ ನಿಜವಾಗಿಯೂ ಭವಿಷ್ಯದಲ್ಲಿ ಏನು ದಕ್ಕಬೇಕೋ ಅದು ದೊರಕಿಯೇ ತೀರುತ್ತದೆ. ಅವರ ಭಾಗ್ಯವನ್ನು ಅವರೇ ಕಂಡುಕೊಳ್ಳುತ್ತಾರೆ.

ಮಗು ಹುಟ್ಟಿದಾಗ ಜ್ಯೋತಿಷಿಗಳು ಹೇಳಿದರಂತೆ, ಈ ಮಗುವಿನ ಜಾತಕ ತುಂಬ ಅಪರೂಪದ್ದು. ಈತ ಚಕ್ರವರ್ತಿಯೂ ಆಗಬಹುದು, ಸನ್ಯಾಸಿಯೂ ಆಗಬಹುದು. ತಂದೆ ರಾಜ. ಮಗ ಸನ್ಯಸಿಯಾಗಬಾರದು, ತನ್ನಂತೆ ರಾಜನಾಗಬೇಕು ಎಂದು ಚಿಂತಿಸಿದ. ಮಗನನ್ನು ದುಃಖದ, ವೃದ್ಧಾಪ್ಯದ, ಅನಾರೋಗ್ಯದ ಎಳೆಯೂ ಕಾಣದಂತೆ ಇಪ್ಪತ್ತೊಂಭತ್ತು ವರ್ಷ ಬೆಳೆಸಿದ. ಸುಂದರವಾದ ಹೆಣ್ಣಿನೊಡನೆ ಮದುವೆ ಮಾಡಿಸಿ ಬಂಧನಕ್ಕೆ ಕಟ್ಟಿ ಹಾಕಲು ನೋಡಿದ. ಒಂದು ದಿನ ಬದುಕಿನ ಮತ್ತೊಂದು ಮುಖವನ್ನು ಕಂಡ ತರುಣ ಎಲ್ಲ ಬಂಧನಗಳನ್ನು ಕಿತ್ತೊಗೆದು ಸನ್ಯಾಸಿಯಾಗಿ, ಬುದ್ಧನಾಗಿ ಸನ್ಯಾಸ ಧರ್ಮದ ಚಕ್ರವರ್ತಿಯಾದ. ತಂದೆ ಬಯಸಿದ್ದು ರಾಜಪದವಿ, ಮಗ ಪಡೆದದ್ದು ಸನ್ಯಾಸಪದವಿ. ತಂದೆ-ತಾಯಿ ಅನನ್ಯವಾದ ಕನಸು ಕಟ್ಟಿ ತಮ್ಮ ಮಗ ಅತ್ಯಂತ ಶ್ರೇಷ್ಠ ರಾಜನಾಗಲಿ ಎಂದು ಅತ್ಯುತ್ತಮವಾದ ಶಿಕ್ಷಣ ಕೊಡಿಸಿ, ದೇಶ-ವಿದೇಶಗಳಲ್ಲಿ ತರಬೇತಿ ಕೊಡಿಸಿ ತಮ್ಮ ತರುವಾಯ ಆತ ರಾಜ ಸಿಂಹಾಸನವನ್ನೇರಲಿ ಎಂದು ಹೆಣಗಿದರು. ಆದರೆ ಒಂದು ಕ್ಷಣದಲ್ಲಿ ಮನಸ್ಥಿಮಿತತೆಯನ್ನು ಕಳೆದುಕೊಂಡು, ತಂದೆ-ತಾಯಿ, ಸೋದರಮಾವ ಮುಂತಾದ ಒಂಭತ್ತು ಜನರನ್ನು ಗುಂಡಿನಲ್ಲಿ ಹೊಡೆದು ಕೊಂದು ತಾನೂ ತಲೆಗೆ ಗುಂಡುಹೊಡೆದುಕೊಂಡು ಸತ್ತದ್ದು ನೇಪಾಳದ ರಾಜಮನೆತನದಲ್ಲಿ ಇಪ್ಪತ್ತು ವರ್ಷಗಳ ಹಿಂದೆ ನಡೆದ ಮರೆಯಬಾರದ ಘಟನೆ. ತಂದೆ-ತಾಯಿ ಅಪೇಕ್ಷಿಸಿದ್ದು ಏನು, ಆದದ್ದೇನು?

ಕಗ್ಗ ಈ ಮಾತನ್ನೇ ಹೇಳುತ್ತದೆ. ಮಕ್ಕಳ ಭವಿಷ್ಯಕ್ಕೆ ಅತಿಶಯವಾದ ತಳಮಳ ಬೇಡ. ಜಗತ್ತಿನಲ್ಲಿ ಅವರ ಭಾಗ್ಯ ಹೇಗೆ ತೆರೆದುಕೊಳ್ಳುತ್ತದೆಂಬುದನ್ನು ಹೇಳುವುದು ಅಸಾಧ್ಯ. ಕುರುವಂಶ ಲಲಾಮರಾದ ಕೌರವ-ಪಾಂಡವರಿಗೆ ಯಾವುದರಲ್ಲಿ ಕಡಿಮೆ ಇತ್ತು? ಅತ್ಯಂತ ಸಮೃದ್ಧಿಯಿಂದ, ಸಂತೋಷವಾಗಿ ಬದುಕಲು ಎಲ್ಲ ಅವಕಾಶಗಳನ್ನು ಪಡೆದಿದ್ದ ದಾಯಾದಿಗಳು, ಮತ್ಸರದಿಂದ ಹೊಡೆದಾಡಿ, ಮನುಕುಲವನ್ನೇ ಹಿಂಸೆಯ ಕುಂಡವನ್ನಾಗಿಸಿದರಲ್ಲ! ತಾವಾದರೂ ಸುಖಪಟ್ಟರೆ? ಯುದ್ಧಭೂಮಿಯಲ್ಲಿ ಅನಾಥರಂತೆ ಕೌರವರು ಸತ್ತರೆ, ಪಶ್ಚಾತ್ತಾಪದಲ್ಲಿ ಪಾಂಡವರು ನರಳಿದರು. ಆದ್ದರಿಂದ ಮಕ್ಕಳಿಗೆ ಅವಕಾಶಗಳನ್ನು ಕಲ್ಪಿಸೋಣ, ಅತಿಯಾದ ಕಾಳಜಿ, ತಳಮಳ ಬೇಡ. ಅವರವರ ದಿಕ್ಕಿಗೆ, ಭಾಗ್ಯಕ್ಕೆ ಅವರೇ ಬಾಧ್ಯರು.

ದಿನ ಭವಿಷ್ಯ

ಸೋಮವಾರ ಮೇ 24, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ತ್ರಯೋದಶಿ ಗಂ. 40-5 (ರಾ. 10-03) ಸೋಮವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 3-25 (ಬೆ. 7-23) ಉಪರಿ ಸ್ವಾತಿ ಗಂ. 56-0 (ಬೆ.ಝಾ. 5-47) ವ್ಯತೀಪಾತ ನಾಮ ಯೋಗ ಗಂ 8-6 ಕೌಲವ ಕರಣ ಗಂ. 12-56 ವಿಷ ಗಂ. 16-29 ಅಮೃತ ಗಂ. 38-45 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 5-57 ಸೂರ್ಯಾಸ್ತ: 6-36 ಅದೃಷ್ಟ ಸಂಖ್ಯೆ 3, 5

ಮೇಷ: ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ದೊರಕುವ ಸಾಧ್ಯತೆ. ಸಾಹಿತ್ಯ, ಸಂಗೀತ ಕ್ಷೇತ್ರದಲ್ಲಿರುವವರಿಗೆ ವಿಶೇಷ ಸಾಮಾಜಿಕ ಮಾನ್ಯತೆ. ಬಂಧುಮಿತ್ರರ ಆಗಮನದಿಂದ ಮನೆಯಲ್ಲಿ ಹಬ್ಬದ ವಾತಾವರಣ. ಶುಭ ಸಮಾಚಾರ.

ವೃಷಭ: ಕೋರ್ಟು ಕಚೇರಿಗಳಲ್ಲಿನ ಕೆಲಸಗಳು ನಿಮಗೆ ಅನುಕೂಲಕರವಾಗಿ ನಡೆಯಲಿವೆ. ಆತ್ಮೀಯರೊಂದಿಗೆ ಅತಿಯಾದ ಮಾತಿನಿಂದಾಗಿ ಮನಸ್ತಾಪ ಉಂಟಾದೀತು. ಆರೋಗ್ಯದ ವಿಚಾರದಲ್ಲಿ ಜಾಗರೂಕರಾಗಿರುವುದು ಉತ್ತಮ.

ಮಿಥುನ: ಉದ್ಯೋಗದಲ್ಲಿರುವವರಿಗೆ ಮೇಲಧಿಕಾರಿಗಳಿಂದ ಕಿರಿಕಿರಿ. ಅಸ್ತಮ, ವಾತ ಮುಂತಾದ ಕಾಯಿಲೆಗಳು ಉಲ್ಬಣಗೊಳ್ಳುವ ಸಾಧ್ಯತೆ ಕಂಡಬರುತ್ತಿದೆ. ಮತ್ತೊಮ್ಮೆ ಯೋಚಿಸಿ ಮುಂದಡಿ ಇಟ್ಟಲ್ಲಿ ಯಶಸ್ಸು ನಿಮ್ಮದಾಗಲಿದೆ.

ಕರ್ಕಾಟಕ: ವ್ಯಾಪಾರ, ವ್ಯವಹಾರಗಳಲ್ಲಿ ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು. ವಿದ್ಯಾರ್ಥಿಗಳಿಗೆ ಪ್ರಗತಿ. ವಾಹನ, ಭೂಮಿ ಮುಂತಾದ ಆಸ್ತಿಯನ್ನು ಖರೀದಿಸುವ ಸಾಧ್ಯತೆ. ಆರೋಗ್ಯದ ಬಗ್ಗೆ ಎಚ್ಚರದಿಂದಿರಿ.

ಸಿಂಹ: ದೂರದ ಪ್ರಯಾಣ ಮತ್ತು ಹಿರಿಯರ ಆರೋಗ್ಯದ ನಿಮಿತ್ತ ಧನ ವ್ಯಯವಾಗುವ ಸಾಧ್ಯತೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಸಾಧಿಸಲಿದ್ದಾರೆ. ಒಟ್ಟಾರೆ ಆದಾಯದಲ್ಲಿನ ಹೆಚ್ಚಳವು ಕಂಡುಬರುತ್ತಿದೆ.

ಕನ್ಯಾ: ಸಹೋದ್ಯೋಗಿಗಳೊಂದಿಗೆ ವೃಥಾ ಮನಸ್ತಾಪ ಉಂಟಾಗುವ ಸಾಧ್ಯತೆ. ಕರ್ತವ್ಯದ ಕ್ಷೇತ್ರದಲ್ಲಿ ಕಿರಿಕಿರಿ. ಮಕ್ಕಳ ವಿದ್ಯಾಭ್ಯಾಸದ ನಿಮಿತ್ತ ದೂರದ ಊರುಗಳಿಗೆ ಪ್ರಯಾಣ ಮಾಡುವ ಸಾಧ್ಯತೆ. ಸಂಸಾರದಲ್ಲಿ ಸಂತಸ.

ತುಲಾ: ಮದುವೆ, ಮುಂಜಿ ಮುಂತಾದ ಶುಭ ಸಮಾರಂಭಗಳಲ್ಲಿ ಭಾಗವಹಿಸಲಿದ್ದೀರಿ. ಕಲಾವಿದರು, ವಿದ್ವಾಂಸರು, ಸಾಮಾಜಿಕ ಕ್ಷೇತ್ರದಲ್ಲಿರುವವರ ಪ್ರತಿಭೆಗಳು ಅನಾವರಣಗೊಂಡು ಗೌರವಾದರಗಳು ದೊರಕುವವು.

ವೃಶ್ಚಿಕ: ವಿದ್ಯಾರ್ಥಿಗಳಿಗೆ ಹೆಚ್ಚಿನ ಪರಿಶ್ರಮ ಬೇಡುವ ದಿನವಾಗಲಿದೆ. ನಿಮ್ಮ ಕೆಲಸ-ಕಾರ್ಯಗಳು ಆಶ್ಚರ್ಯಕರ ರೀತಿಯಲ್ಲಿ ನಡೆದುಹೋಗುವವು. ವ್ಯಾಪಾರ ವ್ಯವಹಾರದಲ್ಲಿ ನಷ್ಟ ತಪ್ಪಿಸಿಕೊಳ್ಳಲು ಹೆಚ್ಚಿನ ಜಾಗೃತೆ ವಹಿಸಿ.

ಧನು: ಉದ್ಯೋಗದಲ್ಲಿ ಪದೋನ್ನತಿ ಅಥವಾ ವೃತ್ತಿ ಬದಲಾವಣೆ ಕಂಡುಬರುತ್ತಿದೆ. ಮನೋಭಿಲಾಷೆಗಳು ನಿಮ್ಮ ನಿರೀಕ್ಷೆಯಂತೆ ನೆರವೇರಲಿವೆ. ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಿ. ಸಂಗಾತಿಯ ಸಲಹೆ ದೊರಕಲಿದೆ.

ಮಕರ: ಕೌಟುಂಬಿಕ ಮತ್ತು ಸಾಂಸಾರಿಕ ಸುಖ ಸಂತೋಷಗಳು ನಿಮ್ಮದಾಗಲಿವೆ. ಉದ್ಯೋಗದಲ್ಲಿ ಹೆಚ್ಚಿನ ಪ್ರಗತಿ. ಸ್ಥಿರಾಸ್ತಿ, ವಾಹನ ಮುಂತಾದವುಗಳನ್ನು ಖರೀದಿಸುವ ಸಾಧ್ಯತೆ. ಆರ್ಥಿಕ ಉನ್ನತಿಯು ನಿಮ್ಮದಾಗಲಿದೆ.

ಕುಂಭ: ತಾಳ್ಮೆ ಸಮಾಧಾನದಿಂದ ವ್ಯವಹರಿಸಿದಲ್ಲಿ ಅಭಿವೃದ್ಧಿ ಕಾಣುವುದು ನಿಶ್ಚಿತ. ಉದ್ಯೋಗದ ಕ್ಷೇತ್ರದಲ್ಲಿ ಸಹಕಾರ ದೊರಕಿ ಸಮಾಧಾನ. ಮನೆಯವರ ಸಹಕಾರದಿಂದ ಕ್ಲಿಷ್ಟಕರವಾದ ಕೆಲಸವೊಂದನ್ನು ಪೂರೈಸುವ ಸಾಧ್ಯತೆ.


ಮೀನ: ವಿವಾಹಾಕಾಂಕ್ಷಿಗಳಿಗೆ ಕಂಕಣ ಭಾಗ್ಯ ಕೂಡಿಬರುವುದು. ಆರ್ಥಿಕ ವಿಚಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಕಂಡಬಂದರೂ ಆತಂಕಪಡುವ ಅವಶ್ಯಕತೆ ಇಲ್ಲ. ವಿದ್ಯಾರ್ಥಿಗಳಲ್ಲಿ ಉನ್ನತ ಪ್ರಗತಿ. ಸಂತೋಷದ ಸುದ್ದಿ ಆಲಿಸಲಿದ್ದೀರಿ.

ನಿಮ್ಮ ಜನ್ಮದಿನ 24-ಮೇ: ಈ ದಿನ ಅತ್ಯಂತ ಶುಭಕರ. ಸದಾ ಹೊಸ ಹೊಸ ವಿಚಾರಧಾರೆಗಳನ್ನು ಮೈಗೂಡಿಸಿಕೊಳ್ಳಲಿದ್ದೀರಿ. ಸಾಮಾಜಿಕವಾಗಿ ವಿವಿಧ ಸ್ತರಗಳಲ್ಲಿ ದುಡಿದು ಹೋರಾಟದ ಬದುಕನ್ನು ರೂಪಿಸಿಕೊಳ್ಳುವಿರಿ. ಆರ್ಥಿಕವಾಗಿ ಅಷ್ಟೊಂದು ಸಬಲರಲ್ಲದಿದ್ದರೂ ಸಾಮಾಜಿಕ ಮನ್ನಣೆಗೆ ಕೊರತೆಯಿಲ್ಲದ ಜೀವನ ನಡೆಸುವಿರಿ.

ಪದಬಂಧ 4606 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಎಲ್ಲದರ ಒಡೆಯ ಸರದೊಳಗಿರುವನು (4)
3.ಉತ್ತರದವರು ಏರುವ ಮೆಟ್ಟಿಲು (4)
5.ಚತುರ್ವರ್ಣಗಳಲ್ಲಿ ಎರಡನೆಯ ವರ್ಗ (3)
6.ರಸಿಕನಲ್ಲದವ ಇಲ್ಲಿದ್ದಾನೆ (4)
8.ಸರ ತಂದಿದ್ದಕ್ಕೆ ತೋರಿದ ಆದರ (3)
10.ಮೋಕ್ಷ ಮಾಡಿಸಿಕೊಂಡ ಕೆನ್ನೆ ಉಲ್ಟಾ ಕಾಣುತ್ತಿದೆ (3)
12.ತಮ್ಮನು ತೋರಿದ ಭೇದಭಾವ (4)
15.ವರನೊಳಗೆ ಮಾತುಗಾರ ಅಡಗಿಹನಲ್ಲಾ? (3)
16.ಈಕೆ ಬಹಳ ಬುದ್ಧಿವಂತೆ (4)
17.ದೇವಸ್ಥಾನದ ಬಳಿ ಇರುವ ಕೆತ್ತನೆಗಾರ (4)

ಮೇಲಿಂದ ಕೆಳಕ್ಕೆ
1.ಮಡಿವಾಳನಿಲ್ಲಿ ತಿರುಗಿದ್ದಾನಲ್ಲಾ? (3)
2.ಕಾಪಾಡುವವ ಇಲ್ಲಿದ್ದಾನೆ (3)
3.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
4.ಶರೀರದಲ್ಲಿ ರೋಗದಿಂದ ಬೆಳೆಯುವ ಗಂಟು (2)
7.ರುಚಿಕರವಾದ ಭೋಜನ (5)
9.ಬೆಲೆಯುಳ್ಳ ಮಣಿಗಳನ್ನು ಕುಂದಣಿಸಿದ್ದು (5)
11.ಕಲ್ಲಿನಿಂದ ಬೀಸಿ ಹೊಡೆಯುವ ಸಾಧನ (3)
12.ಒಣಗಿದ ವಸ್ತುವಿಲ್ಲಿದೆ (3)
13.ಸವಿಯಾದುದು ಮರದೊಳಗಿದೆ (3)
14.ಕಂಬಿಯ ಹಿಂದೆ ನಿಂತು ತೋರಿದ ಡೌಲು! (2)



4605ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪತ್ತಲ 3.ಶಮನ 5.ವರ್ಣಸಂಕರ 6.ಶರ 8.ಮೂಕ 9.ಅಂಕೆ 10.ಕದ 14.ದಾಸಾನುದಾಸ 15.ಕತ್ತರಿ 16.ಕುಣಿಕೆ

ಮೇಲಿಂದ ಕೆಳಕ್ಕೆ: 1.ಪರವಶ 2.ಲವಣ 3.ಶರಧಿ 4.ನಕ್ಷತ್ರಿಕ 7.ರಸಿಕೆ 8.ಮೂಷಿಕ 9.ಅಂಗಾರಕ 11.ದಬ್ಬಾಳಿಕೆ 12.ಉದಾರಿ 13.ಮಸಕು

ಸುಡೊಕು 4992

		9			7	1		4
	6			3				
		7	4		6	2		3
					5			1
	5	1		8			2	7
3			9					
		2		1			9	
9			7		8		1	2
	8	3		2		4		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4991 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

'ಕಿ.ಮೀ.ಗೆ ₹ 4 ಸಾವಿರ ಕೇಳಿದ ಆಂಬುಲೆನ್ಸ್‌ನವರು'

ಬೆಳಗಾವಿ: ಕುಟುಂಬವೊಂದು ವೃದ್ಧರೊಬ್ಬರ ಸಿಟಿ ಸ್ಕ್ಯಾನ್ ಮಾಡಿಸಲು ವೀಲ್ ಚೇರ್‌ನಲ್ಲೇ ಕರೆದುಕೊಂಡು ಬಂದಿದ್ದ ಘಟನೆ ನಗರದಲ್ಲಿ ಭಾನುವಾರ ನಡೆದಿದೆ.

'ಒಂದು ಕಿ.ಮೀ. ದೂರದಲ್ಲಿರುವ ಸ್ಕ್ಯಾನಿಂಗ್ ಕೇಂದ್ರಕ್ಕೆ ಕರೆದೊಯ್ಯಲು ಖಾಸಗಿ ಆಂಬುಲೆನ್ಸ್‌ನವರು ₹ 4 ಸಾವಿರ ಕೇಳಿದರು. ಆಟೊ ಕೂಡ ಸಿಗಲಿಲ್ಲ. ಹೀಗಾಗಿ, ಅನಿವಾರ್ಯವಾಗಿ ವೀಲ್ ಚೇರ್ ಅನ್ನೇ ತಳ್ಳಿಕೊಂಡು ಬಂದಿದ್ದೇವೆ' ಎಂದು ಕುಟುಂಬದವರು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು. ಗೋಂದಳಿ ಗಲ್ಲಿಯ ಅವರು ಅಯೋಧ್ಯಾ ನಗರದ ಸ್ಕ್ಯಾನಿಂಗ್ ಕೇಂದ್ರಕ್ಕೆ ಬಂದಿದ್ದರು.

ಹಳ್ಳಿಗಳಲ್ಲಿ ಸೋಂಕು ಹೆಚ್ಚಳ • ಗ್ರಾಮ ಪಂಚಾಯಿತಿಗೆ ಕೋವಿಡ್ ನಿಯಂತ್ರಣ ಹೊಣೆ

'ಮುಂಚೂಣಿ' ಪಟ್ಟಿಯಲ್ಲಿಲ್ಲ ಸಿಬ್ಬಂದಿ!

• ರಾಜೇಶ್ ರೈ ಚಟ್ಲ



ನಮ್ಮ ಇಲಾಖೆಯ ಸಿಬ್ಬಂದಿಗೆ ಏನೇ ಆದರೂ ಶೇ 100ರಷ್ಟು ಜವಾಬ್ದಾರಿಯನ್ನು ರಾಜ್ಯ ಸರ್ಕಾರ ವಹಿಸಿಕೊಳ್ಳಲಿದೆ. ಬೇರೆ ಇಲಾಖೆಗೆ ಇರುವಂತೆ ನಮ್ಮ ನೌಕರರಿಗೂ ಪರಿಹಾರ ಕೊಡಲು ಬದ್ಧ

ಕೆ.ಎಸ್. ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ

ಬೆಂಗಳೂರು: ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು, 'ಮುಂಚೂಣಿ'ಯಲ್ಲಿ ನಿಂತು ಕಾರ್ಯನಿರ್ವಹಿಸುವಂತೆ ಗ್ರಾಮ ಪಂಚಾಯಿತಿಗಳ ಸಿಬ್ಬಂದಿಗೆ ರಾಜ್ಯ ಸರ್ಕಾರ ಸೂಚಿಸಿದೆ. ಆದರೆ, ಈ ಸಿಬ್ಬಂದಿಯನ್ನು 'ಕೋವಿಡ್ ಮುಂಚೂಣಿ ಕಾರ್ಯಕರ್ತರು' (ಫ್ರಂಟ್‌ಲೈನ್ ವರ್ಕರ್) ಎಂದು ರಾಜ್ಯ ಸರ್ಕಾರ ಇನ್ನೂ ಪರಿಗಣಿಸಿಲ್ಲ!

ಕೋವಿಡ್ ಕರ್ತವ್ಯದ ವೇಳೆ ರೋಗಿಗಳ ಸಂಪರ್ಕದಿಂದ ಸೋಂಕು ತಗುಲಿ ಗ್ರಾಮ ಪಂಚಾಯಿತಿಯಿಂದ ನಿಯೋಜಿತ ಸಿಬ್ಬಂದಿ ಮೃತಪಟ್ಟರೆ ಜಿಲ್ಲಾ ಆರೋಗ್ಯ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಪ್ರಮಾಣೀಕರಿಸಿದರೆ ಜಿಲ್ಲಾ ಅಥವಾ ತಾಲ್ಲೂಕು ಪಂಚಾಯಿತಿಗಳಲ್ಲಿ ಲಭ್ಯವಿರುವ ಅನುದಾನದಿಂದ ₹ 30 ಲಕ್ಷ ಪರಿಹಾರ ನೀಡಲು 2020ರ ಆಗಸ್ಟ್ 29 ರಂದು ಆದೇಶ ಹೊರಡಿಸಲಾಗಿದೆ. ಅಲ್ಲದೆ, ಗ್ರಾಮ ಪಂಚಾಯಿತಿ ಎಲ್ಲ ಸಿಬ್ಬಂದಿಯನ್ನು ಕೋವಿಡ್ ಮುಂಚೂಣಿ ಕಾರ್ಯಕರ್ತರೆಂದು ಪರಿಗಣಿಸುವಂತೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಈ ಮಧ್ಯೆ, ಕೋವಿಡ್ ನಿಯಂತ್ರಣ ಕರ್ತವ್ಯದ ವೇಳೆ ಸೋಂಕು ತಗಲಿ 35 ಕ್ಕೂ ಹೆಚ್ಚು ಸಿಬ್ಬಂದಿ, ನೌಕರರು ಈವರೆಗೆ ಮೃತಪಟ್ಟಿದ್ದಾರೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, 'ಏಪ್ರಿಲ್‌ನಿಂದ ಇಲ್ಲಿಯವರೆಗೆ ಕೋವಿಡ್ ಕಾರಣದಿಂದ ಮೃತಪಟ್ಟ ಗ್ರಾಮ ಪಂಚಾಯಿತಿ ಸಿಬ್ಬಂದಿ ಮತ್ತು ನೌಕರರ ಜಿಲ್ಲಾವಾರು ವಿವರ, ಆಸ್ಪತ್ರೆಗೆ ದಾಖಲಾದ ವಿವರ ಮತ್ತು ಮೃತಪಟ್ಟ ವಿವರ, ಮೃತಪಟ್ಟ ಸಿಬ್ಬಂದಿ, ನೌಕರರ ವಯೋಮಾನ, ಯಾವ ಕಾರಣದಿಂದ ಕೋವಿಡ್ ಸೋಂಕಿತರಾದರು ಎಂಬ ಮಾಹಿತಿಯನ್ನು ತಕ್ಷಣ ನೀಡಬೇಕು' ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಇದೇ 18ರಂದು ಸೂಚಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂಚಾಯತ್‌ರಾಜ್) ಉಮಾ ಮಹಾದೇವನ್, 'ಕೋವಿಡ್ ಕರ್ತವ್ಯದಲ್ಲಿ ನಿರತರಾಗಿದ್ದಾಗ ಸೋಂಕು ತಗಲಿ ಮೃತಪಟ್ಟವರ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಈ ಮಾಹಿತಿ ಜಿಲ್ಲೆಗಳಲ್ಲಿವೆ. ಗ್ರಾಮ ಪಂಚಾಯಿತಿ ಸಿಬ್ಬಂದಿಯನ್ನು ಮುಂಚೂಣಿ ಕಾರ್ಯಕರ್ತರೆಂದು ಪರಿಗಣಿಸಿ ಜನವರಿಯಿಂದ ಲಸಿಕೆ ನೀಡಲು ಆದೇಶ ನೀಡಲಾಗಿದೆ' ಎಂದರು.

ಇತ್ತೀಚಿನ ದಿನಗಳಲ್ಲಿ ಹಳ್ಳಿಗಳಲ್ಲಿ ಸೋಂಕಿತರ ಸಂಖ್ಯೆ ಹಾಗೂ ಸಾವಿನ ಸಂಖ್ಯೆ ಹೆಚ್ಚುತ್ತಿದೆ. ಸೋಂಕಿತರಿಗೆ ಹಳ್ಳಿಗಳಲ್ಲಿ ಮನೆ ಆರೈಕೆ (ಹೋಮ್ ಐಸೋಲೇಷನ್) ನಿರಾಕರಿಸಲಾಗಿದ್ದು, ಕೋವಿಡ್ ಆರೈಕೆ ಕೇಂದ್ರಗಳಲ್ಲಿಯೇ ಚಿಕಿತ್ಸೆ ನೀಡುವಂತೆ ಸೂಚಿಸಲಾಗಿದೆ. ಈ ಸಂಪೂರ್ಣ ಹೊಣೆಯನ್ನು ಗ್ರಾಮ ಪಂಚಾಯಿತಿಗಳ ಸಿಬ್ಬಂದಿಗೆ ವಹಿಸಲಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು (ಗ್ರೇಡ್ 1 ಮತ್ತು ಗ್ರೇಡ್ 2), ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸರ್ಕಾರದಿಂದ ನೇರವಾಗಿ ವೇತನ ಪಡೆಯುತ್ತಾರೆ. ಉಳಿದಂತೆ, ಕರ ವಸೂಲಿಗಾರರು, ಕ್ಲರ್ಕ್, ಡಾಟಾ ಎಂಟ್ರಿ ಆಪರೇಟರ್, ವಾಟರ್‌ಮನ್, ಪಂಪ್ ಆಪರೇಟರ್, ಜವಾನ, ಸ್ವಚ್ಛತಾಗಾರರಿಗೆ ಪಂಚಾಯಿತಿಯ ಸಂಪನ್ಮೂಲದಿಂದ ವೇತನ ನೀಡಲಾಗುತ್ತಿದೆ. 'ಎಲ್ಲರನ್ನೂ ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ ಸರ್ಕಾರ ಸೂಚಿಸಿದೆ. ಆದರೆ, ಇನ್ನೂ ಕೋವಿಡ್ ಮುಂಚೂಣಿ ಕಾರ್ಯಕರ್ತರೆಂದು ಪರಿಗಣಿಸಿಲ್ಲ' ಎನ್ನುವುದು ಈ ಸಿಬ್ಬಂದಿಯ ಅಳಲು.

ಕೋವಿಡ್: ಈವರೆಗೆ 39 ಸಿಬ್ಬಂದಿ ಸಾವು

ಕೋವಿಡ್ ಕರ್ತವ್ಯಕ್ಕೆ ನಿಯೋಜನೆಗೊಂಡವರ ಪೈಕಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು 15, ಕಾರ್ಯದರ್ಶಿಗಳು 5, ಡಾಟಾ ಎಂಟ್ರಿ ಆಪರೇಟರ್‌ಗಳು 4, ವಾಟರ್‌ಮನ್ 3, ಕರ ವಸೂಲಿಗಾರರು 6, ಸ್ವಚ್ಛತಾಗಾರರು 2, ಗ್ರಂಥಪಾಲಕರು, ಕ್ಲರ್ಕ್, ಜವಾನ, ಗುಮಾಸ್ತ ತಲಾ ಒಬ್ಬರು ಸೇರಿ 39 ಮಂದಿ ಸೋಂಕು ತಗಲಿ ಮೃತಪಟ್ಟಿರುವ ಮಾಹಿತಿ ಇದೆ.

ಈ ಪೈಕಿ, ದಾವಣಗೆರೆ ಜಿಲ್ಲೆಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯೊಬ್ಬರಿಗೆ ₹ 20 ಲಕ್ಷ ಪರಿಹಾರ ನೀಡಲಾಗಿದೆ. ಶಿವಮೊಗ್ಗ ಜಿಲ್ಲೆಯ ಒಬ್ಬ ಕರ ವಸೂಲಿಗಾರ ಮತ್ತು ಜವಾನನಿಗೆ ತಲಾ ₹ 17 ಲಕ್ಷ ಪರಿಹಾರ ನೀಡಲಾಗಿದೆ. ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಜೈನಾಪುರ ಗ್ರಾಮ ಪಂಚಾಯಿತಿಯ ಕರ ವಸೂಲಿಗಾರ ಶಿವಾನಂದ ರಾಮಪ್ಪ ಘರಬುಡೆ ಮತ್ತು ಸವದತ್ತಿ ತಾಲ್ಲೂಕಿನ ಗ್ರಾಮ ಪಂಚಾಯಿತಿ ನೌಕರ ಈರಪ್ಪ ಶ್ರೀಶೈಲಾ ಯಕ್ಕುಂಡಿ ಅವರ ಕುಟುಂಬಕ್ಕೆ ತಲಾ ₹ 30 ಲಕ್ಷ ಬಿಡುಗಡೆ ಮಾಡುವಂತೆ ಇದೇ 13ರಂದು ಆದೇಶ ಹೊರಡಿಸಲಾಗಿದೆ ಎಂದು ಇಲಾಖೆಯ ಮೂಲಗಳು ಹೇಳಿವೆ.



ಜನದಟ್ಟಣೆ... ಕಲಬುರ್ಗಿ ನಗರದಲ್ಲಿ ಜಾರಿಗೊಳಿಸಿದ ಮೂರು ದಿನಗಳ ಸಂಪೂರ್ಣ ಲಾಕ್‌ಡೌನ್ ಭಾನುವಾರ ಕೊನೆಗೊಂಡಿದ್ದು, ನಗರದ ಎಂ ಎಸ್ ಕೆ ಮಿಲ್ ಬಳಿ ಸ್ಥಳಾಂತರಗೊಂಡ ಕಣ್ಣಿ ಮಾರುಕಟ್ಟೆಯಲ್ಲಿ ತರಕಾರಿ ಕೊಳ್ಳುವುದಕ್ಕೆ ಜನರು ಮುಗಿಬಿದ್ದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಕೋವಿಡ್: ರಾಜ್ಯದಲ್ಲಿ ಮೃತರ ಸಂಖ್ಯೆ ಮತ್ತಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆಯಲ್ಲಿ ಇಳಿಕೆ ಕಂಡರೂ ಸೋಂಕಿನ ತೀವ್ರತೆಗೆ ಮೃತಪಡುವವರ ಸಂಖ್ಯೆ ನಿಯಂತ್ರಣಕ್ಕೆ ಬಂದಿಲ್ಲ. ಕಾಯಿಲೆ ಎದುರಿಸುತ್ತಿರುವವರಲ್ಲಿ ಬೆಂಗಳೂರಿನಲ್ಲಿ 362 ಮಂದಿ ಸೇರಿದಂತೆ ರಾಜ್ಯದಲ್ಲಿ 626 ಮಂದಿ ಸಾವಿಗೀಡಾಗಿರುವುದು ಭಾನುವಾರ ದೃಢಪಟ್ಟಿದೆ.

ಈವರೆಗೆ 24 ಗಂಟೆಗಳ ಅವಧಿಯಲ್ಲಿ ದೃಢಪಟ್ಟ ಗರಿಷ್ಠ ಮರಣ ಪ್ರಕರಣಗಳು ಇವಾಗಿವೆ. ಮರಣ ಪ್ರಮಾಣ ದರ ಶೇ 2.40ಕ್ಕೆ ಏರಿಕೆಯಾಗಿದೆ. ಮೃತಪಟ್ಟವರು ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆಯನ್ನು (ಸಾರಿ) ಎದುರಿಸಿದ್ದಾರೆ. ಕೇವಲ 7 ದಿನಗಳಲ್ಲಿ 3,445 ಮಂದಿ ಸಾವಿಗೀಡಾಗಿರುವುದು ಖಚಿತಪಟ್ಟಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 25,282ಕ್ಕೆ ಏರಿಕೆಯಾಗಿದೆ.

ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, 25,979 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 1.25 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 20.76ಕ್ಕೆ ಇಳಿಕೆ ಕಂಡಿದೆ.

ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 24.24 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, ಸದ್ಯ 4.72 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 35,573 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 19.26 ಲಕ್ಷ ದಾಟಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರು ಗ್ರಾಮಾಂತರದಲ್ಲಿ 30 ಮಂದಿ, ಮೈಸೂರಿನಲ್ಲಿ 22 ಮಂದಿ, ಬಳ್ಳಾರಿಯಲ್ಲಿ 18 ಮಂದಿ, ಉತ್ತರ ಕನ್ನಡದಲ್ಲಿ 17 ಮಂದಿ, ಕಲಬುರ್ಗಿಯಲ್ಲಿ 15 ಮಂದಿ, ತುಮಕೂರು, ಶಿವಮೊಗ್ಗ, ಮಂಡ್ಯ ಹಾಗೂ ಬೆಳಗಾವಿಯಲ್ಲಿ ತಲಾ 13 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ.

ಬೆಂಗಳೂರಿನಲ್ಲಿ 7,494 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಮೈಸೂರು (2,222), ಹಾಸನ (1,618), ತುಮಕೂರು (1,269), ಬಳ್ಳಾರಿ (1,190), ಬೆಳಗಾವಿ (1,066) ಜಿಲ್ಲೆಯಲ್ಲಿ ಅಧಿಕ ಪ್ರಕಣಗಳು ಹೊಸದಾಗಿ ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಸಾವಿರಕ್ಕಿಂತ ಕಡಿಮೆ ವರದಿಯಾಗಿದೆ.

ಸುದ್ದಿ 2 ನಿಮಿಷ

'ಪೂನಾವಾಲಾ ಬಿಟ್ಟು ಉಳಿದವರ ಹೇಳಿಕೆ ನಗಣ್ಯ'

ನವದೆಹಲಿ: 'ಲಸಿಕೆ ಲಭ್ಯತೆ ಅರಿವಿಲ್ಲದೇ ಎಲ್ಲ ವರ್ಷದವರಿಗೆ ಕೇಂದ್ರ ಸರ್ಕಾರ ಲಸಿಕೆ ಅಭಿಯಾನ ಆರಂಭಿಸಿತು' ಎಂಬ ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕ ಸುರೇಶ್ ಜಾಧವ್ ಹೇಳಿಕೆಯಿಂದ ಅಂತರ ಕಾಯ್ದುಕೊಳ್ಳಲು ಸೀರಂ ಇನ್‌ಸ್ಟಿಟ್ಯೂಟ್ ನಿರ್ಧರಿಸಿದ್ದು, ಸಿಇಒ ಆದಾರ್ ಪೂನಾವಾಲಾ ಹೊರತು ಬೇರೆ ಯಾರ ಮಾತಿಗೂ ಕಿಮ್ಮತ್ತಿಲ್ಲ ಎಂದಿದೆ.

'ಸುರೇಶ್ ಜಾಧವ್ ಅವರು ಶುಕ್ರವಾರ ನೀಡಿರುವ ಹೇಳಿಕೆ ಕಂಪನಿಯ ನಿಲುವಲ್ಲ' ಎಂದು ಸಂಸ್ಥೆ ಸ್ಪಷ್ಟಪಡಿಸಿದೆ. ಈ ಕುರಿತು ಶನಿವಾರ ಕೇಂದ್ರ ಆರೋಗ್ಯ ಸಚಿವಾಲಯದ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್ ಅವರಿಗೆ ಪತ್ರ ಬರೆದಿದೆ.

'ಕಂಪನಿಯ ಸಿಇಒ ಆದಾರ್ ಪೂನಾವಾಲಾ ಪರವಾಗಿ ಸ್ಪಷ್ಟನೆ ನೀಡುತ್ತಿದೆ. ಅದು ಕಂಪನಿಯು ನೀಡಿದ ಹೇಳಿಕೆಯಲ್ಲ. ಈ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿದೆ. ಪೂನಾವಾಲಾ ಅವರಷ್ಟೇ ಕಂಪನಿಯ ಅಧಿಕೃತ ವಕ್ತಾರರು' ಎಂದು ತಿಳಿಸಿದೆ.

ಸೀರಂ ಇನ್‌ಸ್ಟಿಟ್ಯೂಟ್ ಸದ್ಯ ಕೋವಿಶೀಲ್ಡ್ ಲಸಿಕೆಯ ಉತ್ಪಾದನೆ ಪ್ರಮಾಣವನ್ನು ಹೆಚ್ಚಿಸಲಿದೆ ಎಂಬುದು ಸ್ಪಷ್ಟವಾಗಿದೆ ಹಾಗೂ ಕೋವಿಡ್ ವಿರುದ್ಧದ ಹೋರಾಟದಲ್ಲಿ ಸರ್ಕಾರದ ಜೊತೆಗೆ ಕೈಜೋಡಿಸಲಿದೆ ಎಂಬ ಭರವಸೆ ಈ ಸ್ಪಷ್ಟನೆ ಮೂಲಕ ದೊರೆತಿದೆ ಎಂದು ಮೂಲಗಳು ತಿಳಿಸಿವೆ.



ಲಸಿಕೆ ಲಭ್ಯತೆ– ಜಿಲ್ಲಾವಾರು ವಿವರ ಪ್ರಕಟಿಸಲಿ: ರಾಹುಲ್ ಗಾಂಧಿ ಆಗ್ರಹ

ನವದೆಹಲಿ (ಪಿಟಿಐ): ದೇಶದಲ್ಲಿ ಲಸಿಕೆ ಕೊರತೆ ಇದೆ ಎಂದು ಕಾಂಗ್ರೆಸ್ ಆರೋಪಿಸಿದ್ದು, ಚುಚ್ಚುಮದ್ದಿನ ಲಭ್ಯತೆ ಕುರಿತಂತೆ ಜಿಲ್ಲಾವಾರು ಅಂಕಿ ಅಂಶಗಳನ್ನು ಪ್ರಕಟಿಸಬೇಕು ಎಂದು ಒತ್ತಾಯಿಸಿದೆ. ರಾಜ್ಯವಾರು ಅಂಕಿ ಅಂಶ ಸಂಪೂರ್ಣವಾಗಿಲ್ಲ ಎಂದಿದೆ.

ದೇಶದಲ್ಲಿ ಒಂದು ಕಡೆ ಕೋವಿಡ್ ಪಿಡುಗು ಆವರಿಸಿದೆ. ಇನ್ನೊಂದೆಡೆ ಉನ್ನತ ನಾಯಕನಿಗೆ ಸೊಕ್ಕು ಆವರಿಸಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ರಾಹುಲ್ ಗಾಂಧಿ ಅವರು, 'ಲಸಿಕೆ ಕುರಿತು ತೀರ್ಮಾನಿಸುವಾಗ ವಿಶ್ವ ಆರೋಗ್ಯ ಸಂಸ್ಥೆ ಈ ಸಂಬಂಧ ನೀಡಿದ್ದ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಿಲ್ಲ' ಎಂಬ ಸೀರಂ ಇನ್‌ಸ್ಟಿಟ್ಯೂಟ್ ಅಧಿಕಾರಿ ಹೇಳಿಕೆ ಉಲ್ಲೇಖಿಸಿದ್ದಾರೆ.

ಕೇಂದ್ರದ ಪ್ರಕಾರ, ಸದ್ಯ ರಾಜ್ಯಗಳಲ್ಲಿ 1.6 ಕೋಟಿ ಡೋಸ್ ಲಸಿಕೆ ಲಭ್ಯವಿದೆ. ಆದರೆ ಕರ್ನಾಟಕ, ದೆಹಲಿ ಸೇರಿದಂತೆ ಹಲವು ರಾಜ್ಯಗಳು 18–44 ವರ್ಷದವರಿಗೆ ಲಸಿಕೆ ನೀಡುವುದನ್ನು ಸ್ಥಗಿತಗೊಳಿಸಿವೆ ಎಂದು ಹೇಳಿದ್ದಾರೆ.

ಕೋವಿಡ್‌ಗೆ ಪರ್ಯಾಯ ಚಿಕಿತ್ಸಾ ವಿಧಾನ ಡಾ. ರೆಡ್ಡೀಸ್ ಲ್ಯಾಬೊರೇಟರಿಸ್ ಚಿಂತನೆ

ನವದೆಹಲಿ (ಪಿಟಿಐ): ಪ್ರಮುಖ ಔಷಧ ಉತ್ಪಾದಕ ಸಂಸ್ಥೆ ಡಾ.ರೆಡ್ಡೀಸ್ ಲ್ಯಾಬೊರೇಟರಿಸ್ ಸಂಸ್ಥೆಯು ಕೋವಿಡ್ ರೋಗಿಗಳಿಗೆ ಪರ್ಯಾಯ ಚಿಕಿತ್ಸಾ ಕ್ರಮವನ್ನು ಅಭಿವೃದ್ಧಿಪಡಿಸುತ್ತಿದೆ. ಕೆಲವೇ ತಿಂಗಳಲ್ಲಿ ಬಿಡುಗಡೆ ಮಾಡುವ ವಿಶ್ವಾಸವನ್ನೂ ಹೊಂದಿದೆ.

ಸಾಂಕ್ರಾಮಿಕ ರೋಗ ಚಿಕಿತ್ಸೆಗಾಗಿ ಸಂಸ್ಥೆಯ ವಿವಿಧ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಅನಿಯಮಿತವಾಗಿ ಸಿಗುವಂತೆ ನೋಡಿಕೊಳ್ಳಲಾಗುವುದು ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

ಹೈದರಾಬಾದ್ ಮೂಲಕ ಸಂಸ್ಥೆಯು ಈಗಾಗಲೇ 'ಸ್ಪುಟ್ನಿಕ್ ವಿ' ಲಸಿಕೆ ಉತ್ಪಾದನೆಗೆ ಸಂಬಂಧಿಸಿದಂತೆ ದೇಶದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಸೇರಿ ವಿವಿಧ ಸಂಸ್ಥೆಗಳ ಜೊತೆಗೆ ಸಹಭಾಗಿತ್ವವನ್ನು ಹೊಂದಿದೆ.

ಹೊಸ ಕೋವಿಡ್‌ಗೆ ಹೊಸ, ಪರ್ಯಾಯ ಚಿಕಿತ್ಸಾ ಕ್ರಮ ಕುರಿತೂ ಚಿಂತನೆ ನಡೆಸಿದ್ದೇವೆ. ನಾವು ವಿವಿಧ ಸಹಭಾಗಿತ್ವ ಹೊಂದಿದ್ದು, ಕೋವಿಡ್‌ಗೆ ನೂತನ ಚಿಕಿತ್ಸಾ ಕ್ರಮಗಳ ಅಭಿವೃದ್ಧಿ ಕುರಿತು ಚರ್ಚೆ ನಡೆಸಿದ್ದೇವೆ' ಎಂದು ಕಂಪನಿಯ ಸಹ ಅಧ್ಯಕ್ಷ ಮತ್ತು ವ್ಯವಸ್ಥಾಪ ನಿರ್ದೇಶಕ ಜಿ.ಪಿ.ಪ್ರಸಾದ್ ಅವರು ತಿಳಿಸಿದರು.

ಜನರ ನೆರವಿಗೆ ಧಾವಿಸಿ: ನಡ್ಡಾ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಸಂಕಷ್ಟದ ನಡುವೆ ಬಿಜೆಪಿಯವರು ನಾಪತ್ತೆಯಾಗಿದ್ದಾರೆ ಎಂಬ ಟೀಕೆಗಳ ಹಿಂದೆಯೇ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು, 'ಜನರಿಗೆ ನೆರವಾಗಬೇಕು. ಜನರ ನಡುವೆ ಕಾಣಿಸಿಕೊಳ್ಳಬೇಕು' ಎಂದು ಕಾರ್ಯಕರ್ತರಿಗೆ ಸೂಚಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಏಳನೇ ವರ್ಷದ ಆಡಳಿತವನ್ನು ಪೂರೈಸುತ್ತಿರುವ ಈ ಸಂದರ್ಭದಲ್ಲಿ ಕಾರ್ಯಕರ್ತರು, ಸಂಕಷ್ಟದಲ್ಲಿರುವ ಜನರ ನೆರವಿಗೆ ಮುಂದಾಗಬೇಕು ಎಂದು ಸಲಹೆ ಮಾಡಿದ್ದಾರೆ.

'ಸೇವೆಯೇ ಸಂಘಟನೆ' ಹೆಸರಿನಲ್ಲಿ ನಡೆದಿರುವ ಬಿಜೆಪಿ ಕಾರ್ಯಕರ್ತರು ಕೈಗೊಂಡಿರುವ ಪರಿಹಾರ ಕಾರ್ಯಗಳನ್ನು ಪರಿಶೀಲಿಸಿದ ಅವರು, ಸಾರ್ವಜನಿಕ ಸೇವೆಯಲ್ಲಿ ಕಾರ್ಯಕರ್ತರ ಭಕ್ತಿ, ಪಕ್ಷದ ಸಂಸ್ಕಾರ ಬಿಂಬಿತವಾಗಬೇಕು ಎಂದಿದ್ದಾರೆ.

ಮೋದಿ ನೇತೃತ್ವದ ಸರ್ಕಾರ ಆಡಳಿತದ ಏಳನೇ ವರ್ಷ ಪೂರೈಸುತ್ತಿರುವ ಸಂದರ್ಭದಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ.

'ನಾನು ಉಪೇಂದ್ರ, ಈ ರಾಜ್ಯದ ಮುಖ್ಯಮಂತ್ರಿ ಆಗ್ಬೇಕು'



ಉಪೇಂದ್ರ

ಬೆಂಗಳೂರು: ಕೋವಿಡ್ ಪ್ರಕರಣಗಳನ್ನು ನಿಯಂತ್ರಿಸಲು ಜಾರಿಗೊಳಿಸಲಾಗಿರುವ ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೀಡಾಗಿರುವವರಿಗೆ ನೆರವು ನೀಡುತ್ತಿರುವ ನಟ ಉಪೇಂದ್ರ, ಇದರ ಜೊತೆಗೆ ತಮ್ಮ ಪಕ್ಷ 'ಪ್ರಜಾಕೀಯ'ದ ಚಿಂತನೆಗಳನ್ನೂ ಜನರೆದುರಿಗೆ ಇಡುತ್ತಿದ್ದಾರೆ. ಈ ಸಂದರ್ಭದಲ್ಲೇ 'ನಾನು ಈ ರಾಜ್ಯದ ಮುಖ್ಯಮಂತ್ರಿ ಆಗ್ಬೇಕು. ನಾನು ಚುನಾವಣೆಯಲ್ಲಿ ಸ್ಪರ್ಧಿಸಿದರೆ ನೀವು ನನ್ನನ್ನು ಗೆಲ್ಲಿಸ್ತೀರಾ?' ಎಂಬ ಪ್ರಶ್ನೆಯನ್ನೂ ಅಭಿಮಾನಿಗಳು, ಜನರೆದುರಿಗೆ ಉಪೇಂದ್ರ ಇರಿಸಿದ್ದಾರೆ.

ಈ ಕುರಿತು ಪತ್ರವೊಂದನ್ನು ಟ್ವಿಟರ್‌ನಲ್ಲಿ ಉಪೇಂದ್ರ ಅಪ್‌ಲೋಡ್ ಮಾಡಿದ್ದಾರೆ. 'ನೋಡಿ ನಾನು ಸಮಾಜ ಸೇವೆ ಮಾಡ್ತಿದ್ದೀನಿ. ರೈತರಿಂದ ಬೆಳೆ ಕೊಂಡು ಉಚಿತವಾಗಿ ಕಷ್ಟದಲ್ಲಿರೋರಿಗೆ ಹಂಚುತ್ತಿದ್ದೇನೆ. ಚುನಾವಣೆ ಸಮಯದಲ್ಲಿ ಹೋರಾಟನೂ ಮಾಡುತ್ತೇನೆ. ಆಡಳಿತ ಪಕ್ಷ, ವಿರೋಧ ಪಕ್ಷ ಜನರಿಗೆ ಏನೂ ಮಾಡದೆ ಸಂಪೂರ್ಣ ವಿಫಲ ಆಗಿದೆ ಅಂತ ಮಾಧ್ಯಮದಲ್ಲಿ ಕೂಗಿ ಹೇಳ್ತೇನೆ, ಇವರನ್ನೆಲ್ಲಾ ಕಿತ್ತಾಕಿ ನನಗೆ ಒಂದು ಅವಕಾಶ ಕೊಡಿ. ನಿಮ್ಮ ಮುಂದಿನ ಉಜ್ವಲ ಭವಿಷ್ಯಕ್ಕೆ ನಾನು ಕೆಲಸ ಮಾಡುತ್ತೇನೆ. ಹಗಲು ರಾತ್ರಿ ಕಷ್ಟಪಟ್ಟು ಸುವರ್ಣ ಕರ್ನಾಟಕ ಮಾಡ್ತೀನೆ. ನನ್ನನ್ನು ಗೆಲ್ಲಿಸ್ತೀರಾ..'ಎಂದು ಪತ್ರದಲ್ಲಿ ಉಪೇಂದ್ರ ಕೇಳಿದ್ದಾರೆ.

ದೇಶದಲ್ಲಿ 3,741 ಮಂದಿ ಸಾವು

ನವದೆಹಲಿ (ಪಿಟಿಐ): ದೇಶದಾದ್ಯಂತ 24 ಗಂಟೆಗಳಲ್ಲಿ 2.40 ಲಕ್ಷ ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 3,741 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಇಲಾಖೆ ಸಚಿವಾಲಯ ತಿಳಿಸಿದೆ.

ಇದರೊಂದಿಗೆ ದೇಶದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 2,65,30,132ಕ್ಕೆ ಏರಿಕೆಯಾಗಿದೆ. ಆ ಪೈಕಿ 2,99,266 ಮಂದಿ ಸೋಂಕಿತರು ಸಾವಿಗೀಡಾಗಿದ್ದಾರೆ.

ಸೋಂಕು ಕಾಣಿಸಿಕೊಂಡಾಗಿನಿಂದ ಇದುವರೆಗೆ 2,34,25,467 ಮಂದಿ ಗುಣಮುಖರಾಗಿದ್ದಾರೆ. ಸದ್ಯ ದೇಶದಲ್ಲಿ 28,05,399 ಸಕ್ರಿಯ ಪ್ರಕರಣಗಳಿವೆ.

ಬೆಳಗಾವಿ: ಕಪ್ಪು ಶಿಲೀಂಧ್ರ–ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕೋವಿಡ್ 2ನೇ ಅಲೆ ಕಾಣಿಸಿಕೊಂಡ ನಂತರ, ಜಿಲ್ಲೆಯಲ್ಲಿ 15 ದಿನಗಳಿಂದ 9 ಮಂದಿಯಲ್ಲಿ ಕಪ್ಪು ಶಿಲೀಂಧ್ರ ಪ್ರಕರಣಗಳು ಕಂಡುಬಂದಿವೆ. ಎರಡು ಸಂಶಯಾಸ್ಪದ ಸಾವುಗಳು ಸಂಭವಿಸಿವೆ. ಮೃತರು ಗೋಕಾಕ ಹಾಗೂ ಅಥಣಿಯವರಾಗಿದ್ದು, 70 ವರ್ಷ ಮೇಲಿನವರಾಗಿದ್ದಾರೆ. 2 ಬಿಳಿ ಶಿಲೀಂಧ್ರ ಪ್ರಕರಣಗಳು ವರದಿಯಾಗಿವೆ' ಎಂದು ಡಿಎಚ್‌ಒ ಡಾ.ಎಸ್.ವಿ. ಮುನ್ಯಾಳ ತಿಳಿಸಿದರು.

ಇಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಕೋವಿಡ್ ಉಪಚಾರದಲ್ಲಿ ಆಗುವ ಅಡ್ಡಪರಿಣಾಮದಲ್ಲಿ ಇದೂ ಒಂದಾಗಿದೆ. ಆಮ್ಲಜನಕ ಪೈಪ್‌ಲೈನ್‌ನಲ್ಲಿ ಬಳಸುವ 'ಹ್ಯುಮಿಡಿಫೈರ್' ನೀರನ್ನು ಸಮರ್ಪಕವಾಗಿ ಹಾಗೂ ಉತ್ತಮ ನೀರನ್ನು ಆಮ್ಲಜನಕ ಪೆನಲ್‌ನಲ್ಲಿ ಬಳಸದಿರುವುದು ಇದಕ್ಕೆ ಕಾರಣವಾಗಿದೆ' ಎಂದು ಹೇಳಿದರು.

'ಆಮ್ಲಜನಕ ಪೈಪ್‌ಲೈನ್ ಅನ್ನು ಹಾಗೂ ರೋಗಿಗಳಿಗೆ ನೀಡುವ ಮಾಸ್ಕ್‌ಗಳನ್ನೂ 48 ಗಂಟೆಗಳ ಬಳಿಕ ಬದಲಿಸಬೇಕು. ನಿತ್ಯವೂ ಸ್ವಚ್ಛವಾದ ಮಾಸ್ಕ್ ಬಳಸಬೇಕು. ಬಟ್ಟೆ ಮಾಸ್ಕ್ ಕೂಡ ಪರಿಣಾಮಕಾರಿ. ಅದನ್ನು ನಿತ್ಯವೂ ತೊಳೆದು ಬಿಸಿಲಿನಲ್ಲಿ ಒಣಗಿಸಿ, ಇಸ್ತ್ರಿ ಮಾಡಿ ಬಳಸಬೇಕು. 2-3 ದಿನ ಒಂದನ್ನೇ ಬಳಸುವುದರಿಂದ ಬೆವರು ಹಾಗೂ ತೇವಾಂಶದಿಂದಾಗಿ ಆ ಸ್ಥಳದಲ್ಲಿ ಶಿಲೀಂಧ್ರಗಳು ಬೆಳವಣಿಗೆ ಆಗುತ್ತವೆ. ಸ್ಟಿರಾಯ್ಡ್ ಬಳಕೆಯಿಂದಲೂ ಕಂಡುಬರುತ್ತಿದೆ' ಎಂದು ತಿಳಿಸಿದರು.

'ರೋಗಿಗಳಲ್ಲಿ ವೃದ್ಧರಲ್ಲಿ, ಮಧುಮೇಹ ಸಮಸ್ಯೆ ಇದ್ದವರಲ್ಲಿ ಕಪ್ಪು ಶಿಲೀಂಧ್ರ ಕಾಣಿಸಿಕೊಳ್ಳುತ್ತಿದೆ. ಹೀಗೆ ಸೋಂಕು ದೃಢಪಟ್ಟವರು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಿಮ್ಸ್‌ನಲ್ಲೂ ಚಿಕಿತ್ಸೆ ದೊರೆಯುವಂತೆ ಮಾಡಲು ಪ್ರಯತ್ನಿಸುತ್ತಿದ್ದೇವೆ' ಎಂದರು.

ಹಳಿಯಾಳ, ಕೂಡ್ಲಿಗಿಯಲ್ಲೂ ಪ್ರಕರಣ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಗುಂಡೊಳ್ಳಿ ಗ್ರಾಮದ ನಿವಾಸಿಯೊಬ್ಬರಲ್ಲಿ ಕಪ್ಪು ಶಿಲೀಂಧ್ರ ಸೋಂಕಿನ ಲಕ್ಷಣಗಳು ಕಂಡುಬಂದಿವೆ. ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ 'ವೆನ್ಲಾಕ್' ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಕೊರೊನಾ ಸೋಂಕಿತ ವ್ಯಕ್ತಿಯೊಬ್ಬರಲ್ಲಿ ಕಪ್ಪು ಶಿಲೀಂಧ್ರ ದೃಢಪಟ್ಟಿದೆ. ಕೂಡ್ಲಿಗಿ ಸಾರ್ವಜನಿಕ ಆಸ್ಪತ್ರೆಗೆ ಬಂದು ಅವರು ದಾಖಲಾಗಿದ್ದಾರೆ.

ತುಮಕೂರು ಜಿಲ್ಲೆಯಲ್ಲೂ ಇಬ್ಬರು ಸಾವು

ತುಮಕೂರು: ಕಪ್ಪು ಶಿಲೀಂಧ್ರದಿಂದ ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ.

ಕುಣಿಗಲ್ ತಾಲ್ಲೂಕು ಉತ್ರಿದುರ್ಗ ಹೋಬಳಿಯ ಇಪ್ಪಾಡಿ ಗ್ರಾಮದ ವ್ಯವಸಾಯೋತ್ಪನ್ನ ಸಹಕಾರ ಸಂಘದ ಅಧ್ಯಕ್ಷ ಐ.ಜಿ. ರಮೇಶ್ (57) ಶನಿವಾರ ರಾತ್ರಿ ಬೆಂಗಳೂರಿನ ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹುಲಿಯೂರುದುರ್ಗ ಹೋಬಳಿ ಮಾರಗೊಂಡನಹಳ್ಳಿ ರಾಮಚಂದ್ರಯ್ಯ (48) ಕಳೆದ ಕೆಲ ದಿನಗಳ ಹಿಂದೆ ಸಾವನ್ನಪ್ಪಿದ್ದಾರೆ.

ಇಪ್ಪಾಡಿ ಗ್ರಾಮದ ರಮೇಶ್ ಕೋವಿಡ್‌ನಿಂದ ಗುಣಮುಖರಾಗಿದ್ದು, ಕೆಲ ದಿನಗಳ ನಂತರ ತೀವ್ರವಾದ ಕಣ್ಣು ನೋವು ಕಾಣಿಸಿಕೊಂಡಿತ್ತು. ತುಮಕೂರಿನಲ್ಲಿ ಚಿಕಿತ್ಸೆ ಪಡೆದ ನಂತರ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರು ಆಸ್ಪತ್ರೆಗೆ ಸೇರಿಸಲಾಗಿತ್ತು. ಕಣ್ಣಿಗೆ ತೀವ್ರ ಹಾನಿಯಾಗಿದ್ದರಿಂದ ಒಂದು ಕಣ್ಣು ತೆಗೆಯಲಾಗಿತ್ತು. ಈಚೆಗೆ ಮತ್ತೊಂದು ಕಣ್ಣಿಗೂ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು.

'ಬೆಂಗಳೂರಿನಲ್ಲಿ ಇಬ್ಬರು ನಿಧನರಾಗಿದ್ದಾರೆ ಎಂಬುದು ಗೊತ್ತಾಗಿದೆ. ಈ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಾಗೇಂದ್ರಪ್ಪ ತಿಳಿಸಿದರು.

ರೆಮ್‌ಡಿಸಿವಿರ್ ಹಂಚಿಕೆ: ಪಾರದರ್ಶಕತೆಗೆ ತಂತ್ರಜ್ಞಾನ ವ್ಯವಸ್ಥೆ– ಸಚಿವ ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಪೀಡಿತರಿಗೆ ಅಗತ್ಯವಿರುವ 'ರೆಮ್‌ಡಿಸಿವಿರ್' ಔಷಧ ಹಂಚಿಕೆಯಲ್ಲಿ ಪಾರದರ್ಶಕತೆ ತರಲು ತಂತ್ರಜ್ಞಾನ ಆಧಾರಿತ ವ್ಯವಸ್ಥೆ ರೂಪಿಸಲಾಗಿದೆ. ಸೋಂಕಿತ ವ್ಯಕ್ತಿಯ ಹೆಸರಿನಲ್ಲಿ ಯಾವ ಆಸ್ಪತ್ರೆಗೆ ಔಷಧ ಹಂಚಿಕೆ ಮಾಡಲಾಗಿದೆ ಎಂಬ ಬಗ್ಗೆ ಇನ್ನುಮುಂದೆ ದೂರವಾಣಿ ಸಂದೇಶ ರವಾನೆಯಾಗುತ್ತದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

'ರೆಮ್‌ಡಿಸಿವಿರ್' ಔಷಧಕ್ಕೆ ಸಂಬಂಧಿಸಿದಂತೆ ಸರ್ಕಾರವು covidwar.karnataka.gov.in/service2 ಪೋರ್ಟಲ್ ಅಭಿವೃದ್ಧಿಪಡಿಸಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಸುಧಾಕರ್, 'ಸೋಂಕಿತ ವ್ಯಕ್ತಿಯ ಎಸ್‌ಆರ್‌ಎಫ್ ಐಡಿಗೆ ಔಷಧ ಹಂಚಿಕೆಯಾಗಿ, ಆಸ್ಪತ್ರೆ ಅದನ್ನು ಆ ವ್ಯಕ್ತಿಯ ಚಿಕಿತ್ಸೆಗೆ ಬಳಸದಿದ್ದಲ್ಲಿ ಸರ್ಕಾರಕ್ಕೆ ವರದಿ ಮಾಡುವ ಆಯ್ಕೆಯನ್ನೂ ಪೋರ್ಟಲ್‌ನಲ್ಲಿ ನೀಡಲಾಗಿದೆ. ಕಾಳಸಂತೆಯಲ್ಲಿ ಮಾರಾಟ ಹಾಗೂ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಇದು ಸಹಕಾರಿಯಾಗಲಿದೆ' ಎಂದು ಹೇಳಿದ್ದಾರೆ.



ಡಾ.ಸುಧಾಕರ್

ಹಾಸಿಗೆ ಸಂಖ್ಯೆ ಹೆಚ್ಚಳ: ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಳ್ಳುವ ಮೊದಲು ಆರೋಗ್ಯ ಇಲಾಖೆಯಡಿ 1,970 ಹಾಸಿಗೆಗಳು ಆಮ್ಲಜನಕ ಸಂಪರ್ಕ ಹೊಂದಿದ್ದವು. ಈಗ ಆ ಸಂಖ್ಯೆ 23,971ಕ್ಕೆ ಏರಿಕೆಯಾಗಿದೆ. ಅದೇ ರೀತಿ, ತೀವ್ರ ನಿಗಾ ಘಟಕದ (ಐಸಿಯು) ಹಾಸಿಗೆಗಳ ಸಂಖ್ಯೆ 444 ರಿಂದ 1,145ಕ್ಕೆ ಹೆಚ್ಚಳವಾಗಿದೆ. ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಕೂಡ ಹಾಸಿಗೆಗಳ ಸಂಖ್ಯೆಯನ್ನು ಏರಿಕೆ ಮಾಡಲಾಗಿದೆ.

'ಕೋವಿಡ್ ನಂತರದ ಕಾಲದಲ್ಲಿ ಆರೋಗ್ಯ ಮೂಲಸೌಕರ್ಯದಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಆರ್ಥಿಕ ಸಂಕಷ್ಟವಿದ್ದರೂ ಹೆಚ್ಚು ಸಂಪನ್ಮೂಲಗಳನ್ನು ಬಳಸಿ, ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಗಮನಹರಿಸಲಾಗಿದೆ. ಇದರಿಂದ ಭವಿಷ್ಯದಲ್ಲಿ 'ಆರೋಗ್ಯ ಕರ್ನಾಟಕ' ನಿರ್ಮಾಣವಾಗಲಿದೆ' ಎಂದು ಸುಧಾಕರ್ ತಿಳಿಸಿದ್ದಾರೆ.

ರಾಯಗಡ, ವಲ್ಸದ್ ಕರಾವಳಿ: 10 ದೇಹಗಳು ಪತ್ತೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ರಾಯಗಡ ಕರಾವಳಿಯ ವಿವಿಧ ಭಾಗಗಳಲ್ಲಿ ಎಂಟು ಮೃತದೇಹಗಳು ಒಂದೆರಡು ದಿನಗಳಲ್ಲಿ ಪತ್ತೆಯಾಗಿವೆ. ಗುಜರಾತ್‌ನ ವಲ್ಸದ್ ಜಿಲ್ಲೆಯ ಕರಾವಳಿಯಲ್ಲಿಯೂ ಎರಡು ಮೃತದೇಹಗಳು ಭಾನುವಾರ ಸಿಕ್ಕಿವೆ.

ತೌತೆ ಚಂಡಮಾರುತದ ಸಂದರ್ಭದಲ್ಲಿ ಮುಂಬೈ ಕರಾವಳಿಯಲ್ಲಿ ಮುಳುಗಡೆಯಾದ ಪಿ305 ಬಾರ್ಜ್‌ನಿಂದ ನಾಪತ್ತೆಯಾದವರ ದೇಹಗಳು ಇವು ಆಗಿರಬಹುದು ಎಂದು ಅಂದಾಜಿಸಲಾಗಿದೆ. ಶನಿವಾರ ಸಂಜೆಯ ಬಳಿಕ ವಲ್ಸದ್ ಜಿಲ್ಲೆಯ ಕರಾವಳಿಯಲ್ಲಿ ಒಟ್ಟು ಆರು ಮೃತದೇಹಗಳು ಸಿಕ್ಕಿವೆ.

ಶನಿವಾರ ಸಿಕ್ಕ ನಾಲ್ಕು ದೇಹಗಳ ಪೈಕಿ ಮೂರು ತಿಥಲ್ ಕಿನಾರೆಯಲ್ಲಿ ಮತ್ತು ಇನ್ನೊಂದು ದೇಹವು ಡುಂಗ್ರಿ ಗ್ರಾಮದ ಸಮೀಪದ ಕರಾವಳಿಯಲ್ಲಿ ಸಿಕ್ಕಿವೆ ಎಂದು ವಲ್ಸದ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಜದೀಪ್‌ಸಿಂಹ ಝಾಲಾ ತಿಳಿಸಿದ್ದಾರೆ. ಭಾನುವಾರ ಸಿಕ್ಕ ಎರಡೂ ದೇಹಗಳು ತಿಥಲ್ ಕಿನಾರೆಯಲ್ಲಿಯೇ ಪತ್ತೆಯಾದವು.

ಇವರ ಗುರುತಿನ ಚೀಟಿ ಮತ್ತು ಇತರ ಕೆಲವು ದಾಖಲೆಗಳು ಪೊಲೀಸರಿಗೆ ಸಿಕ್ಕಿವೆ. ತನಿಖೆ ಮುಂದುವರಿದಿದೆ. ಅವರ ಸಮವಸ್ತ್ರ, ಅವರು ತೊಟ್ಟಿದ್ದ ಜೀವ ರಕ್ಷಕ ಕವಚಗಳನ್ನು ಗಮನಿಸಿದರೆ ಇವರೆಲ್ಲರೂ ಬಾರ್ಜ್‌ನಿಂದ ನಾಪತ್ತೆಯಾದವರು ಎಂಬುದನ್ನು ಸೂಚಿಸುತ್ತದೆ ಎಂದು ಝಾಲಾ ತಿಳಿಸಿದ್ದಾರೆ.

ಬಾರ್ಜ್ ಮುಳುಗುವ ಸಂದರ್ಭದಲ್ಲಿ ಅದರಲ್ಲಿ 261 ಜನರು ಇದ್ದರು. ಅವರ ಪೈಕಿ 186 ಮಂದಿಯನ್ನು ರಕ್ಷಿಸಲಾಗಿದೆ. 66 ಮೃತದೇಹಗಳು ಪತ್ತೆಯಾಗಿವೆ. ಒಂಬತ್ತು ಮಂದಿಗಾಗಿ ಶೋಧ ಮುಂದುವರಿದಿದೆ. ಆ್ಯಂಕರ್ ನಿರ್ವಹಣಾ ದೋಣಿ ವರಪ್ರದಾದಲ್ಲಿ ಇದ್ದ 11 ಮಂದಿಯೂ ನಾಪತ್ತೆಯಾಗಿದ್ದಾರೆ.

ವಿವಿಧ ಸಂಸ್ಥೆಗಳಿಗೆ ಮಾನವ ಹಕ್ಕು ಆಯೋಗದ ನೋಟಿಸ್

ಬಾರ್ಜ್ ಮುಳುಗಡೆಗೆ ಸಂಬಂಧಿಸಿ ವರದಿ ನೀಡುವಂತೆ ಸಂಬಂಧಪಟ್ಟ ವಿವಿಧ ಸಂಸ್ಥೆಗಳಿಗೆ ರಾಷ್ಟ್ರೀಯ ಮಾನವ ಹಕ್ಕು ಆಯೋಗವು ನೋಟಿಸ್ ನೀಡಿದೆ. ತೌತೆ ಚಂಡಮಾರುತದಿಂದ ಅಪಾಯ ಇದೆ ಎಂಬುದು ತಿಳಿದಿದ್ದರೂ ಬಾರ್ಜ್‌ನಲ್ಲಿದ್ದವರನ್ನು ರಕ್ಷಿಸುವ ಕೆಲಸ ಆಗಿಲ್ಲ ಎಂದು ಆಯೋಗವು ಅಸಮಾಧಾನ ವ್ಯಕ್ತಪಡಿಸಿದೆ.

ಚಂಡಮಾರುತ ಸೃಷ್ಟಿಯಾಗುತ್ತಿದ್ದ ಮತ್ತು ನಂತರದ ಅವಧಿಯಲ್ಲಿ ಎಲ್ಲ ಸುರಕ್ಷತಾ ನಿಯಮಗಳನ್ನು ಪಾಲಿಸಿದ್ದರೆ ಜೀವಹಾನಿಯನ್ನು ತಡೆಯುವ ಎಲ್ಲ ಅವಕಾಶಗಳೂ ಇದ್ದವು ಎಂದು ಆಯೋಗವು ಹೇಳಿದೆ.

ಎನ್‌ಕೌಂಟರ್: 8 ಉಗ್ರರ ಹತ್ಯೆ

ಗುವಾಹಟಿ (ಪಿಟಿಐ): ಅಸ್ಸಾಂನ ಪಶ್ಚಿಮ ಕಾರ್ಬಿ ಆಂಗ್ಲಾಂಗ್ ಜಿಲ್ಲೆಯಲ್ಲಿ ಪೊಲೀಸರು ಮತ್ತು ಭದ್ರತಾ ಪಡೆ ನಡೆಸಿದ ಎನ್‌ಕೌಂಟರ್‌ನಲ್ಲಿ ದಿಮ್ಸಾ ನ್ಯಾಷನಲ್ ಲಿಬರೇಷನ್ ಆರ್ಮಿ (ಡಿಎನ್‌ಎಲ್‌ಎ) ಸಂಘಟನೆಗೆ ಸೇರಿದ 8 ಉಗ್ರರು ಹತರಾಗಿದ್ದಾರೆ.

ನಾಗಾಲ್ಯಾಂಡ್ ಗಡಿಗೆ ಸಮೀಪದ ಕಾರ್ಬಿ ಆಂಗ್ಲಾಂಗ್‌ನ ಧಾನ್ಸಿರಿ ಪ್ರದೇಶದಲ್ಲಿ ಜಂಟಿ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ‘ಮೃತ ಉಗ್ರರಿಂದ 4 ಎಕೆ-47 ರೈಫಲ್ ಸಹಿತ ಅಪಾರ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಅಸ್ಸಾಂನ ವಿಶೇಷ ಪೊಲೀಸ್ ಮಹಾನಿರ್ದೇಶಕ ಜಿ.ಪಿ.ಸಿಂಗ್ ತಿಳಿಸಿದರು.

ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಶಂಕಿತ ಡಿಎನ್‌ಎಲ್‌ಎ ಉಗ್ರರಿಂದ ಇಬ್ಬರು ವ್ಯಾಪಾರಿಗಳ ಹತ್ಯೆಯಾದ ನಂತರ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ‘ಜಿಲ್ಲೆಯಲ್ಲಿ ಕೊಲೆ, ಸುಲಿಗೆ ಮಾಡುತ್ತಿದ್ದ ಡಿಎನ್‌ಎಲ್‌ಎ ಸಂಘಟನೆಯ ಉಗ್ರರನ್ನು ಬಂಧಿಸಲು ಕಾರ್ಯಾಚರಣೆ ಕೈಗೊಳ್ಳಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ, ಒಡಿಶಾ ಕರಾವಳಿಗೆ ಬುಧವಾರ ಚಂಡಮಾರುತ ಅಪ್ಪಳಿಸುವ ಮುನ್ನೆಚ್ಚರಿಕೆ

‘ಯಸ್’ ತೀವ್ರತೆ ಹೆಚ್ಚಳ ಸಾಧ್ಯತೆ

ನವದೆಹಲಿ (ಪಿಟಿಐ): ಬಂಗಾಳ ಕೊಲ್ಲಿಯಲ್ಲಿ ಸೃಷ್ಟಿಯಾಗಿರುವ ವಾಯುಭಾರ ಕುಸಿತವು ಸೋಮವಾರದ ಹೊತ್ತಿಗೆ ತೀವ್ರ ಚಂಡಮಾರುತವಾಗಿ ರೂಪುಗೊಳ್ಳಲಿದೆ. ಇದಕ್ಕೆ ‘ಯಸ್’ ಎಂದು ಹೆಸರು ಇರಿಸಲಾಗಿದೆ. ಇದು ಬುಧವಾರ ಒಡಿಶಾ ಮತ್ತು ಪಶ್ಚಿಮ ಬಂಗಾಳವನ್ನು ಹಾದುಹೋಗಲಿದೆ ಎಂದು ಹವಾಮಾನ ಇಲಾಖೆ ಭಾನುವಾರ ತಿಳಿಸಿದೆ.

ವಾಯುಭಾರ ಕುಸಿತ ಉತ್ತರ–ವಾಯವ್ಯ ದಿಕ್ಕಿಗೆ ಚಲಿಸುವ ನಿರೀಕ್ಷೆ ಇದೆ. ಸೋಮವಾರದ ನಂತರದ 24 ಗಂಟೆಗಳಲ್ಲಿ ಮತ್ತಷ್ಟು ಪ್ರಬಲವಾಗಿ ಬಂಗಾಳ ಕೊಲ್ಲಿಯ ಈಶಾನ್ಯ ದಿಕ್ಕಿಗೆ ಚಲಿಸಿ, ಬುಧವಾರ ಬೆಳಿಗ್ಗೆ ಪಶ್ಚಿಮ ಬಂಗಾಳ ಮತ್ತು ಒಡಿಶಾ ತಲುಪಲಿದೆ. ಅದೇ ದಿನ ಸಂಜೆ ಉತ್ತರ ಒಡಿಶಾ ಮತ್ತು ಪಶ್ಚಿಮ ಬಂಗಾಳ ನಡುವಿನ ಪಾರಾದೀಪ್ ಮತ್ತು ಸಾಗರ್ ದ್ವೀಪಗಳನ್ನು ಹಾದುಹೋಗಲಿದೆ. ಈ ಚಂಡಮಾರುತದ ವೇಗ ಗಂಟೆಗೆ 155ರಿಂದ 165 ಕಿ.ಮೀ. ಇರಲಿದೆ. ಕೆಲವೊಮ್ಮೆ ಇದು ಗಂಟೆಗೆ 185 ಕಿ.ಮೀ.ಗೂ ಹೆಚ್ಚಬಹುದು ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ತೀವ್ರಗೊಂಡ ಮುನ್ನೆಚ್ಚರಿಕಾ ಕ್ರಮಗಳು: ಈ ಚಂಡಮಾರುತದ ತೀವ್ರತೆ ಅಂದಾಜಿಸಿರುವುದಕ್ಕಿಂತ ಹೆಚ್ಚಿರುವ ಸಾಧ್ಯತೆ ಇದೆ. ಹಾನಿಯೂ ಹೆಚ್ಚಬಹುದು ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮುಖ್ಯಸ್ಥ ಎಸ್.ಎನ್. ಪ್ರಧಾನ್ ಹೇಳಿದ್ದಾರೆ. ಒಡಿಶಾ ಮತ್ತು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಗಳಿಗೆ ಭಾರಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ. ಇದು ಜೀವನ ಅಥವಾ ಮರಣದ ನಡುವಿನ ಆಯ್ಕೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿಸಿ, ಸ್ಥಳಾಂತರಕ್ಕೆ ಒಪ್ಪಿಸಬೇಕು ಎಂದು ಸಿಬ್ಬಂದಿಗೆ ಹೇಳಲಾಗಿದೆ.

ಕಡಿಮೆ ಅಪಾಯದ ಸ್ಥಳ ಎಂದು ಗುರುತಿಸಿರುವ ಪ್ರದೇಶಗಳ ಜನರನ್ನೂ ಸ್ಥಳಾಂತರಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ನಿಗದಿತ ಅವಧಿಗಿಂತ ಮುಂಚೆಯೇ ಜನರನ್ನು ಸುರಕ್ಷಿತ ಸ್ಥಳಗಳಿಗೆ ರವಾನೆ ಮಾಡುವುದರಿಂದ ಹಲವು ಜೀವ ಉಳಿಸಬಹುದು ಎಂದು ಪ್ರಧಾನ್ ಹೇಳಿದ್ದಾರೆ.

ತೌತೆ ಚಂಡಮಾರುತದ ಕಾರ್ಯಾಚರಣೆಗೆ ನಿಯೋಜಿತರಾಗಿದ್ದ ಎನ್‌ಡಿಆರ್‌ಎಫ್ ಸಿಬ್ಬಂದಿಗಳಲ್ಲಿ ಬಹುತೇಕರು ವಾಪಸ್ಸಾಗಿದ್ದಾರೆ. ಅವರಲ್ಲಿ ಕೆಲವರಿಗೆ ಕೊರೊನಾ ಸೋಂಕು ತಗುಲಿದೆ. ಪಶ್ಚಿಮ ಬಂಗಾಳದ ಕರಾವಳಿಯಲ್ಲಿ 12 ತಂಡಗಳನ್ನು ನಿಯೋಜಿಸಲಾಗಿದೆ. ಪ್ರತಿ ತಂಡದಲ್ಲೂ 47 ಸಿಬ್ಬಂದಿ ಇದ್ದಾರೆ ಎಂದು ಅವರು ಹೇಳಿದ್ದಾರೆ.



ಪೂರ್ವ ಕರಾವಳಿಯಲ್ಲಿ ಕರಾವಳಿ ಗಸ್ತು ಪಡೆಯ ನೌಕೆಗಳನ್ನು ಚಂಡಮಾರುತದ ಪರಿಣಾಮ ನಿರ್ವಹಣೆಗೆ ಸಜ್ಜಾಗಿ ಇರಿಸಲಾಗಿದೆ —ಪಿಟಿಐ ಚಿತ್ರ

ನೆರವಿಗೆ ವಾಯುಪಡೆ ಸನ್ನದ್ಧ

ಚಂಡಮಾರುತದಿಂದ ಎದುರಾಗಬಹುದಾದ ಸಂಕಷ್ಟಗಳನ್ನು ಎದುರಿಸುವಲ್ಲಿ ಸರ್ಕಾರಗಳಿಗೆ ನೆರವಾಗಲು ವಾಯುಪಡೆ ಕೂಡ ಸನ್ನದ್ಧವಾಗಿದೆ. ವಾಯುಪಡೆಯ 11 ಸಾರಿಗೆ ವಿಮಾನಗಳು ಮತ್ತು 25 ಹೆಲಿಕಾಪ್ಟರ್‌ಗಳನ್ನು ತುರ್ತು ಪರಿಸ್ಥಿತಿಯಲ್ಲಿ ಜನರ ನೆರವಿಗೆ ಬಳಸಲು ನಿಯೋಜಿಸಲಾಗಿದೆ. ಶುಕ್ರವಾರದಿಂದಲೇ ವಾಯುಪಡೆಯು ಈ ದಿಸೆಯಲ್ಲಿ ಕೆಲಸ ಆರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಸಿ–130 ವಿಮಾನಗಳನ್ನು ಬಳಸಿ ಕೋಲ್ಕತ್ತ ಮತ್ತು ಪೋರ್ಟ್‌ಬ್ಲೇರ್‌ಗೆ 21 ಟನ್ ಪರಿಹಾರ ಸಾಮಾಗ್ರಿಗಳನ್ನು ಮತ್ತು 334 ಎನ್‌ಡಿಆರ್‌ಎಫ್ ಸಿಬ್ಬಂದಿಯನ್ನು ರವಾನಿಸಿದೆ. ಈವರೆಗೂ ವಿವಿಧ ಸ್ಥಳಗಳಿಗೆ ಒಟ್ಟು 606 ಸಿಬ್ಬಂದಿ ಮತ್ತು 57 ಟನ್ ಸಾಮಾಗ್ರಿಗಳನ್ನು ರವಾನಿಸಲಾಗಿದೆ ಎಂದು ಅವರು ಹೇಳಿದ್ದಾರೆ. ನೌಕಾಪಡೆಯು ಪ್ರವಾಹ ನಿರ್ವಹಣೆಯ ಎಂಟು ತಂಡಗಳು ಮತ್ತು ಮುಳುಗು ತಜ್ಞರ ನಾಲ್ಕು ತಂಡಗಳನ್ನು ಒಡಿಶಾ ಮತ್ತು ಪಶ್ಚಿಮ ಬಂಗಳದಲ್ಲಿ ನಿಯೋಜಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಧಾನಿಯಿಂದ ಉನ್ನತ ಮಟ್ಟದ ಸಭೆ

ಪ್ರಧಾನಿ ನರೇಂದ್ರ ಮೋದಿ ಅವರು ಉನ್ನತ ಮಟ್ಟದ ಸಭೆ ನಡೆಸಿ, ರಾಜ್ಯ ಮತ್ತು ಕೇಂದ್ರೀಯ ಸಂಸ್ಥೆಗಳು ಚಂಡಮಾರುತದ ಪರಿಣಾಮ ಎದುರಿಸಲು ಮಾಡಿಕೊಂಡಿರುವ ತಯಾರಿ ಕುರಿತು ಭಾನುವಾರ ಪರಿಶೀಲನೆ ನಡೆಸಿದರು. ಜೊತೆಗೆ, ಅಪಾಯಕಾರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರನ್ನು ಸುರಕ್ಷಿತ ಸ್ಥಳಗಳಿಗೆ ಕೂಡಲೇ ಸ್ಥಳಾಂತರಿಸುವಂತೆ ಸೂಚಿಸಿದ್ದಾರೆ ಎಂದು ಪ್ರಧಾನಿ ಕಚೇರಿಯು ತಿಳಿಸಿದೆ.

ಹಾನಿಗೊಳಗಾದ ಪ್ರದೇಶಗಳಲ್ಲಿ ವಿದ್ಯುತ್ ಮತ್ತು ಸಂಪರ್ಕ ಜಾಲವನ್ನು ಕೂಡಲೇ ಪುನಃಸ್ಥಾಪಿಸಬೇಕು. ಚಂಡಮಾರುತದ ಕಾರಣ ಕೋವಿಡ್ ಚಿಕಿತ್ಸೆ ಮತ್ತು ಲಸಿಕೆ ಅಭಿಯಾನಕ್ಕೆ ಯಾವುದೇ ರೀತಿಯ ತೊಂದರೆ ಆಗದಂತೆ ರಾಜ್ಯ ಸರ್ಕಾರಗಳ ಜೊತೆ ಸೇರಿ ಕೆಲಸ ಮಾಡುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಈ ಕೆಲಸಗಳಿಗೆ ಕರಾವಳಿಯ ಸ್ಥಳೀಯರು ಮತ್ತು ಉದ್ಯಮಗಳ ನೆರವು ಪಡೆಯಲೂ ಹೇಳಿದ್ದಾರೆ. ಕಳೆದ ವರ್ಷ ಪಶ್ಚಿಮ ಬಂಗಾಳ ಮತ್ತು ಒಡಿಶಾ ಪ್ರಬಲ ಅಂಫನ್ ಚಂಡಮಾರುತದಿಂದ ತತ್ತರಿಸಿದ್ದವು.

ಸಂಕ್ಷಿಪ್ತ ಸುದ್ದಿ

ಆಕ್ಸಿಜನ್ ಎಕ್ಸ್‌ಪ್ರೆಸ್ ಮೂಲಕ 15 ಸಾವಿರ ಟನ್ ಪೂರೈಕೆ

ನವದೆಹಲಿ (ಪಿಟಿಐ): ‘ಆಕ್ಸಿಜನ್ ಎಕ್ಸ್‌ಪ್ರೆಸ್ ಸೇವೆ’ಯ ಮೂಲಕ ವಿವಿಧ ರಾಜ್ಯಗಳಿಗೆ ಇದುವರೆಗೆ 936 ಟ್ಯಾಂಕರ್‌ಗಳ ಮೂಲಕ ಒಟ್ಟು 15,284 ಟನ್‌ಗಳಷ್ಟು ಆಮ್ಲಜನಕ (ಲಿಕ್ವಿಡ್ ಮೆಡಿಕಲ್ ಆಕ್ಸಿಜನ್) ಅನ್ನು ಪೂರೈಸಲಾಗಿದೆ ಎಂದು ರೈಲ್ವೆ ಇಲಾಖೆಯು ಭಾನುವಾರ ತಿಳಿಸಿದೆ.

ಇದುವರೆಗೆ 234 ಆಕ್ಸಿಜನ್ ಎಕ್ಸ್‌ಪ್ರೆಸ್‌ಗಳು ತಮ್ಮ ಪ್ರಯಾಣವನ್ನು ಮುಕ್ತಾಯಗೊಳಿಸಿವೆ. ಪ್ರಸ್ತುತ 9 ಆಕ್ಸಿಜನ್ ಎಕ್ಸ್‌ಪ್ರೆಸ್‌ಗಳು 31 ಟ್ಯಾಂಕರ್‌ಗಳ ಮೂಲಕ 569 ಟನ್‌ಗಳಿಗೂ ಹೆಚ್ಚಿನ ಆಮ್ಲಜನಕವನ್ನು ಪೂರೈಸುವಲ್ಲಿ ನಿರತವಾಗಿವೆ ಎಂದು ಇಲಾಖೆಯು ಮಾಹಿತಿ ನೀಡಿದೆ.

ಮೌಂಟ್ ಎವರೆಸ್ಟ್: 100 ಮಂದಿಗೆ ಕೋವಿಡ್

ಕಠ್ಮಂಡು (ಎಪಿ): ‘ವಿಶ್ವದ ಅತಿ ಎತ್ತರದ ಪರ್ವತವಾದ ಮೌಂಟ್ ಎವರೆಸ್ಟ್‌ನಲ್ಲಿ ಸುಮಾರು 100 ಪರ್ವತಾರೋಹಿಗಳು ಮತ್ತು ಸಿಬ್ಬಂದಿಗೆ ಕೋವಿಡ್ ಸೋಂಕು ತಗುಲಿದೆ’ ಎಂದು ಪರ್ವತಾರೋಹಣದ ಮಾರ್ಗದರ್ಶಕರೊಬ್ಬರು ತಿಳಿಸಿದ್ದಾರೆ.

ಆದರೆ, ನೇಪಾಳದ ಅಧಿಕಾರಿಗಳು ಈ ವರದಿಯನ್ನು ಅಲ್ಲಗಳೆದಿದ್ದಾರೆ.

‘ನನ್ನ ಒಬ್ಬ ವಿದೇಶಿ ಮಾರ್ಗದರ್ಶಿ ಮತ್ತು ಆರು ನೇಪಾಳಿ ಶೆರ್ಪಾ ಮಾರ್ಗದರ್ಶಿಗಳಿಗೆ ಸೋಂಕು ತಗುಲಿದೆ’ ಎಂದು ಆಸ್ಟ್ರಿಯಾದ ಪರ್ವತಾರೋಹಿ ಲೂಕಾಸ್ ಫರ್ಟನ್‌ಬಾಕ್ ಅವರು ಹೇಳಿದರು. ಇವರು ಕಳೆದ ವಾರ ತಮ್ಮ ಮೌಂಟ್ ಎವರೆಸ್ಟ್ ಚಾರಣವನ್ನು ಸ್ಥಗಿತಗೊಳಿಸಿದ್ದರು.



ಮಂಜಿನ ಮುಸುಕು

ಮಂಜು ಮುಸುಕಿದ ವಾತಾವರಣದಲ್ಲಿ ಆಗ್ರಾದ ವಿಶ್ವಪ್ರಸಿದ್ಧ ತಾಜ್‌ಮಹಲ್ ಭಾನುವಾರ ಕಂಡಿದ್ದು ಹೀಗೆ –ಪಿಟಿಐ ಚಿತ್ರ

ಸಿವಿಲ್ ನ್ಯಾಯಾಧೀಶರಿಗೂ ನೇರ ನೇಮಕಾತಿಯಲ್ಲಿ ಅವಕಾಶ

2020ರ ತೀರ್ಪು ಮರುಪರಿಶೀಲನೆಗೆ ‘ಸುಪ್ರೀಂ’ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಿಲ್ಲಾ ನ್ಯಾಯಾಧೀಶರ ಹುದ್ದೆಗೆ ನಡೆಯುವ ನೇರ ನೇಮಕಾತಿಯಲ್ಲಿ ಸ್ಪರ್ಧಿಸಲು ಸಿವಿಲ್ ನ್ಯಾಯಾಧೀಶರಿಗೆ ಅವಕಾಶ ಇಲ್ಲ ಎಂದು 2020ರಲ್ಲಿ ನೀಡಿದ್ದ ತೀರ್ಪನ್ನು ಮರುಪರಿಶೀಲಿಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್, ವಿನೀತ್ ಶರಣ್ ಮತ್ತು ಎಸ್. ರವೀಂದ್ರ ಭಟ್ ಅವರ ಪೀಠವು ಮರುಪರಿಶೀಲನೆ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಲಿದೆ. ಕರ್ನಾಟಕದ ರಹೀಮಲಿ ಎಂ. ನದಾಫ್ ಮತ್ತು ಇತರರು ಹಾಗೂ ಮಧ್ಯ ಪ್ರದೇಶ, ಉತ್ತರ ಪ್ರದೇಶ ರಾಜಸ್ಥಾನದ ಕೆಲವರು ಅರ್ಜಿ ಸಲ್ಲಿಸಿದ್ದಾರೆ.

ಉನ್ನತ ನ್ಯಾಯಾಂಗ ಸೇವಾ ಪರೀಕ್ಷೆಗಳ ಮೂಲಕ ಜಿಲ್ಲಾ ನ್ಯಾಯಾಧೀಶರ ನೇಮಕಾತಿ ನಡೆಸುವ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಮತ್ತು ಕರ್ನಾಟಕ ಸರ್ಕಾರಕ್ಕೆ ಈಗಾಗಲೇ ನೋಟಿಸ್ ನೀಡಲಾಗಿದೆ. ಮಧ್ಯ ಪ್ರದೇಶ, ಉತ್ತರ ಪ್ರದೇಶ ಮತ್ತು ರಾಜಸ್ಥಾನ ಹೈಕೋರ್ಟ್‌ಗೂ ನೋಟಿಸ್ ಕೊಡಲಾಗಿದೆ.

ಜಿಲ್ಲಾ ನ್ಯಾಯಾಲಯಗಳ ಶೇ 25ರಷ್ಟು ಹುದ್ದೆಗಳಿಗೆ ನಡೆಯುವ ನೇರ ನೇಮಕಾತಿಯು ಸತತ ಏಳು ವರ್ಷ ವಕೀಲಿ ವೃತ್ತಿ ನಡೆಸಿದವರಿಗೆ ಮೀಸಲು. ಹಾಗಾಗಿ, ನ್ಯಾಯಾಧೀಶರಾಗಿ ಕೆಲಸ ಮಾಡುತ್ತಿರುವವರು ನೇರ ನೇಮಕಾತಿಯಲ್ಲಿ ಸ್ಪರ್ಧಿಸುವಂತಿಲ್ಲ ಎಂದು 2020ರ ಫೆಬ್ರುವರಿ 19ರಂದು ನೀಡಿದ್ದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು.

ನೇರ ನೇಮಕಾತಿ ಎಂಬುದು ವಕೀಲರಿಗೆ ಸೀಮಿತ ಎಂದು ವ್ಯಾಖ್ಯಾನಿಸಬಾರದು. ಸೇವೆಯಲ್ಲಿ ಇರುವ ನ್ಯಾಯಾಧೀಶರು ಬೇರೆ ಅರ್ಹತೆಗಳನ್ನು ಪೂರೈಸಿದ್ದರೆ ಅವರಿಗೂ ನೇರ ನೇಮಕಾತಿಯಲ್ಲಿ ಅವಕಾಶ ಕೊಡಬೇಕು. ಸಿವಿಲ್ ನ್ಯಾಯಾಧೀಶರು ನೇರ ನೇಮಕಾತಿ ಮೂಲಕ ಜಿಲ್ಲಾ ನ್ಯಾಯಾಧೀಶರಾಗುವುದನ್ನು ತಡೆಯುವುದು ಸಮಾನತೆಯ ತತ್ವಕ್ಕೆ ವಿರುದ್ಧ ಎಂದು ಕರ್ನಾಟಕದ ಅರ್ಜಿದಾರರು ವಾದಿಸಿದ್ದಾರೆ.

ದೆಹಲಿಯಲ್ಲಿ ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದ ಇಬ್ಬರಲ್ಲಿ ಪ್ರಕರಣ

ಕರುಳಿನಲ್ಲೂ ಕಪ್ಪು ಶಿಲೀಂಧ್ರ ಪತ್ತೆ!

ದೆಹಲಿ (ಪಿಟಿಐ): ದೆಹಲಿಯ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಯೊಂದರಲ್ಲಿ ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದ ಇಬ್ಬರು ರೋಗಿಗಳಿಗೆ ಕಪ್ಪು ಶಿಲೀಂಧ್ರ ಸೋಂಕು ಉಂಟಾಗಿದೆ. ಈ ಇಬ್ಬರ ಸಣ್ಣ ಕರುಳಿನಲ್ಲಿ ಕಪ್ಪು ಶಿಲೀಂಧ್ರ ಪತ್ತೆಯಾಗಿದೆ. ಇದು ಅಪರೂಪದಲ್ಲಿ ಅಪರೂಪದ ಪ್ರಕರಣ ಎಂದು ವೈದ್ಯರು ಹೇಳಿದ್ದಾರೆ.

ಕಪ್ಪು ಶಿಲೀಂಧ್ರ ರೋಗ ಅಥವಾ ಮ್ಯೂಕರ್‌ಮೈಕೊಸಿಸ್ ಸಾಮಾನ್ಯವಾಗಿ ಮೂಗು, ಬಾಯಿ, ಕಣ್ಣು, ಮಿದುಳು ಮತ್ತು ಶ್ವಾಸಕೋಶಕ್ಕೆ ತಗುಲುವ ಸೋಂಕಾಗಿದೆ. ಆದರೆ, ಜಿಐ (ಗ್ಯಾಸ್ಟ್ರೋ-ಇಂಟಸ್ಟೈನಲ್) ಮ್ಯೂಕರ್‌ಮೈಕೊಸಿಸ್ ಬಹಳ ಅಪರೂಪದ ಕಾಯಿಲೆಯಾಗಿದೆ.

ಹೊಟ್ಟೆ ಅಥವಾ ದೊಡ್ಡ ಕರುಳಿನಲ್ಲಿ ಸೋಂಕು ಕಾಣಿಸಿಕೊಳ್ಳುತ್ತದೆ ಎಂದು ಗಂಗಾ ರಾಮ್ ಆಸ್ಪತ್ರೆಯ ವೈದ್ಯರು ಹೇಳಿದ್ದಾರೆ.

56 ವರ್ಷದ ದೆಹಲಿ ನಿವಾಸಿ, ತಮ್ಮ ಪತ್ನಿ ಸೇರಿದಂತೆ ಕುಟುಂಬದ ಮೂವರನ್ನು ಕೋವಿಡ್‌ನಿಂದಾಗಿ ಕಳೆದುಕೊಂಡಿದ್ದಾರೆ. ಅವರೂ ಕೂಡ ಕೊರೊನಾ ವೈರಸ್ ಸೋಂಕಿಗೆ ಗುರಿಯಾಗಿದ್ದು, ಆರಂಭದಲ್ಲಿ ಅವರ ರೋಗದ ಲಕ್ಷಣಗಳು ಕಡಿಮೆ ಇದ್ದವು. ಹೊಟ್ಟೆಯಲ್ಲಿ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರು ತಮ್ಮ ಪತ್ನಿಯ ಅಂತಿಮ ವಿಧಿವಿಧಾನಗಳಲ್ಲಿ ಪಾಲ್ಗೊಂಡಿರಲಿಲ್ಲ.

ಅವರ ಹೊಟ್ಟೆ ನೋವನ್ನು ಆರಂಭದಲ್ಲಿ ಗ್ಯಾಸ್ಟ್ರಿಕ್ ಸಮಸ್ಯೆ ಎಂದು ಪರಿಗಣಿಸಲಾಗಿತ್ತು. ಹೀಗಾಗಿ ಚಿಕಿತ್ಸೆ ಮೂರು ದಿನ ವಿಳಂಬವಾಗಿದೆ. ನಂತರ ಅವರನ್ನು ಗ್ಯಾಸ್ಟ್ರೋಎಂಟರಾಲಜಿ (ಉದರ) ವಿಭಾಗದ ತಜ್ಞರು ಪರಿಶೀಲಿಸಿದ್ದಾರೆ. ಸಿಟಿ ಸ್ಕ್ಯಾನ್ ಮಾಡಿದಾಗ ಅವರ ಸಣ್ಣ ಕರುಳಿನ ಮುಂಭಾಗದಲ್ಲಿ ರಂಧ್ರವಾಗಿರುವುದು ಗೋಚರಿಸಿದೆ. ಅವರಿಗೆ ಶಸ್ತ್ರಚಿಕಿತ್ಸೆಯನ್ನೂ ಮಾಡಲಾಗಿದೆ. ಇದೇ ವೇಳೆ, ಕೋವಿಡ್‌ನಿಂದಾಗಿ ಅವರ ಸ್ಥಿತಿ ಗಂಭೀರವಾಗಿದ್ದು, ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆಸ್ಪತ್ರೆ ತಿಳಿಸಿದೆ.

ರೋಗಿಗೆ ಬ್ಯಾಕ್ಟೀರಿಯಾ ನಿರೋಧಕ ಚಿಕಿತ್ಸೆ ಆರಂಭಿಸಲಾಗಿದೆ. ಕರುಳಿನ ಭಾಗವನ್ನು ಬಯಾಪ್ಸಿ ಪರೀಕ್ಷೆಗೂ ಕಳುಹಿಸಲಾಗಿದೆ.

ಮತ್ತೊಂದು ಪ್ರಕರಣ: ಕೋವಿಡ್‌ಗೆ ಗುರಿಯಾಗಿ, ಸ್ಟಿರಾಯ್ಡ್ ಚಿಕಿತ್ಸೆ ಪಡೆಯುತ್ತಿದ್ದ 68 ವರ್ಷದ ವ್ಯಕ್ತಿಗೆ ಹೊಟ್ಟೆಯಲ್ಲಿ ಸಣ್ಣ ಪ್ರಮಾಣದ ನೋವು ಕಾಣಿಸಿಕೊಂಡಿತ್ತು. ಸಿ.ಟಿ ಸ್ಕ್ಯಾನ್ ಮಾಡಿದಾಗ ಇವರ ಕರುಳಿನಲ್ಲೂ ಸಣ್ಣ ರಂಧ್ರವೊಂದು ಕಾಣಿಸಿಕೊಂಡಿದೆ.

ಆತಂಕ ಮೂಡಿಸಿದ ಬಯಾಪ್ಸಿ ವರದಿ

ಇಬ್ಬರ ಕರುಳಿನ ಮಾದರಿಯನ್ನೂ ಬಯಾಪ್ಸಿ ಪರೀಕ್ಷೆಗೆ ರವಾನಿಸಲಾಗಿತ್ತು. ಕರುಳಿನಲ್ಲಿ ಕಪ್ಪು ಶಿಲೀಂಧ್ರ- ಮ್ಯೂಕರ್‌ಮೈಕೋಸಿಸ್ ಸೋಂಕು ಪತ್ತೆಯಾಗಿದೆ. ಇಬ್ಬರೂ ಕೋವಿಡ್ ರೋಗಿಗಳಾಗಿದ್ದು, ಅವರಿಗೆ ಮಧುಮೇಹ ಇತ್ತು. ಇವರಲ್ಲಿ ಒಬ್ಬರು ಮಾತ್ರ ಆಕ್ಸಿಜನ್ ಪಡೆದುಕೊಂಡಿದ್ದರು ಎಂದು ವೈದ್ಯರು ತಿಳಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕ ನಿಯಂತ್ರಣ– ಹಲವು ತಜ್ಞರ ಅಭಿಪ್ರಾಯ

ಹೆರಿಗೆಯ ಬಳಿಕ ಲಸಿಕೆ ಪಡೆಯಬಹುದು

ನವದೆಹಲಿ (ಪಿಟಿಐ): ‘ಗರ್ಭಿಣಿಯರು ಮಗುವಿಗೆ ಜನ್ಮ ನೀಡಿದ (ಹೆರಿಗೆ) ಬಳಿಕ ಯಾವುದೇ ಸಮಯದಲ್ಲಿ ಕೋವಿಡ್–19 ಲಸಿಕೆಯನ್ನು ಪಡೆಯಬಹುದು’ ಎಂದು ಆರೋಗ್ಯ ತಜ್ಞರು ತಿಳಿಸಿದ್ದಾರೆ.

‘ಕೊರೊನಾ ಸೋಂಕಿನಿಂದ ರಕ್ಷಣೆ ಪಡೆಯಲು ಗರ್ಭಿಣಿಯರಿಗೂ ಲಸಿಕೆ ಹಾಕಲು ಅನುಮತಿ ನೀಡಬೇಕು’ ಎಂದೂ ತಜ್ಞರು ಪ್ರತಿಪಾದಿಸಿದ್ದಾರೆ. ಸರ್ಕಾರ ಇತ್ತೀಚೆಗಷ್ಟೇ ಹಾಲೂಡಿಸುವ ತಾಯಂದಿರಿಗೆ ಲಸಿಕೆ ಪಡೆಯಲು ಅವಕಾಶ ಕಲ್ಪಿಸಿದೆ.

‘ಹೆರಿಗೆಯ ಬಳಿಕ ಲಸಿಕೆ ಪಡೆದವರು ನಂತರ ತಮ್ಮ ಮಕ್ಕಳಿಗೆ ಎದೆ ಹಾಲುಣಿಸಲು ಯಾವುದೇ ಸಮಸ್ಯೆ ಇಲ್ಲ. ಲಸಿಕೆಯ ಬಳಿಕ ಒಂದು ಗಂಟೆಯೊಳಗೆ ಹಾಲೂಡಿಸುವುದನ್ನೂ ತಡೆಯಬೇಕಿಲ್ಲ’ ಎಂದು ನೀತಿ ಆಯೋಗದ (ಆರೋಗ್ಯ) ಸದಸ್ಯರೊಬ್ಬರು ತಿಳಿಸಿದ್ದಾರೆ.

‘ಹೆರಿಗೆಯ ಬಳಿಕ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವುದರಿಂದ ತಾಯಿಗಾಗಲೀ, ಶಿಶುವಿಗಾಗಲೀ ಯಾವುದೇ ತೊಂದರೆಯಿಲ್ಲ’ ಎಂದು ದೆಹಲಿಯ ಜಿಟಿಬಿ ಆಸ್ಪತ್ರೆ ಹಾಗೂ ಯುನಿವರ್ಸಿಟಿ ಆಫ್ ಮೆಡಿಕಲ್ ಸೈನ್ಸಸ್‌ನ ಸಮುದಾಯ ಔಷಧ ವಿಭಾಗದ ಪ್ರೊಫೆಸರ್ ಡಾ.ಖಾನ್ ಅಮೀರ್ ಮರೂಫ್ ಹೇಳಿದ್ದಾರೆ.

‘ಮಾಸಿಕ ಋತುಸ್ರಾವದ ಯಾವುದೇ ಸಮಯದಲ್ಲೂ ಮಹಿಳೆಯರು ಕೋವಿಡ್ ಲಸಿಕೆ ಪಡೆಯಬಹುದು’ ಎಂದು ರೋಸ್‌ವಾಕ್ ಆಸ್ಪತ್ರೆ, ಅಪೊಲೋ ಕ್ರೆಡಲ್ ರಾಯಲ್, ಪೋರ್ಟಿಸ್ ಲಾ ಫೆಮ್ಮೆ ಆಸ್ಪತ್ರೆಯ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ ಡಾ.ಲವ್ಲೀನಾ ನಾದಿರ್ ತಿಳಿಸಿದ್ದಾರೆ.

‘ಕೋವಿಡ್–19 ಇರುವ ಕಾರಣಕ್ಕಾಗಿಯೇ ಸಿಸೇರಿಯನ್ (ಶಸ್ತ್ರಚಿಕಿತ್ಸೆ) ಹೆರಿಗೆ ಮಾಡಿಸುವ ಅಗತ್ಯವಿಲ್ಲ. ಆದರೆ, ಕೋವಿಡ್ ಸೋಂಕಿನಿಂದಾಗಿ ತಾಯಂದಿರಲ್ಲಿ ಉಂಟಾದ ಕಾಯಿಲೆಗಳ ಕಾರಣಕ್ಕಾಗಿ ಅವಧಿಪೂರ್ಣ ಶಿಶು ಜನನ ಇಲ್ಲವೇ ಸಿಸೇರಿಯನ್ ಹೆರಿಗೆಯ ಸಂಖ್ಯೆಗಳು ಹೆಚ್ಚಾಗುತ್ತಿವೆ. ಕೋವಿಡ್‌ನಿಂದ ಚೇತರಿಸಿಕೊಂಡ ಗರ್ಭಿಣಿಯರು ಮೂರು ತಿಂಗಳ ಬಳಿಕ ಲಸಿಕೆ ಹಾಕಿಸಿಕೊಳ್ಳುವುದು ಸೂಕ್ತ’ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

‘ಒಂದು ವೇಳೆ ಮಹಿಳೆಯರು ಮೊದಲ ಡೋಸ್ ಪಡೆದ ನಂತರ ಗರ್ಭಿಣಿಯರಾಗಿದ್ದರೆ ಅಂಥವರು ಗರ್ಭಾವಸ್ಥೆಯನ್ನು ಮುಂದುವರಿಸಬಹುದು’ ಎಂದು ಸಲಹೆ ನೀಡಿದ್ದಾರೆ.

‘ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಿಗೆ ಲಸಿಕೆ ನೀಡಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಮಾರ್ಗಸೂಚಿಗಳು ತಿಳಿಸಿವೆ. ಆದರೆ, ಭಾರತದಲ್ಲಿ ಗರ್ಭಿಣಿಯರಿಗೆ ಲಸಿಕೆ ನೀಡುವ ಹಾಗೂ ರೋಗನಿರೋಧಕ ಶಕ್ತಿಯ ಕುರಿತು ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿ ಚರ್ಚೆ ನಡೆಸುತ್ತಿದೆ’ ಎಂದು ನವದೆಹಲಿಯ ಆಹಾರ ಮತ್ತು ಪೋಷಣೆ ಭದ್ರತಾ ಒಕ್ಕೂಟದ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಸುಜೀತ್ ರಂಜನ್ ಹೇಳಿದ್ದಾರೆ.



ಪ್ರಾತಿನಿಧಿಕ ಚಿತ್ರ

ಇಬ್ಬರು ಬಾಲಕಿಯರ ಅನುಮಾನಾಸ್ಪದ ಸಾವು

ಒಂದನೇ ಪುಟದಿಂದ

ಪ್ರಕರಣದ ತನಿಖೆ ನಡೆಸಿ ವರದಿ ನೀಡುವಂತೆ ಕರ್ನಾಟಕ ಅನುಸೂಚಿತ ಜಾತಿ ಮತ್ತು ಬುಡಕಟ್ಟು ಆಯೋಗವು ವಿಜಯಪುರ ಜಿಲ್ಲಾಧಿಕಾರಿಗಳಿಗೆ ಸೂಚಿಸಿತ್ತು.

ಮೂವರ ಬಂಧನ: ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಿಕೊಂಡಿದ್ದ ಪೊಲೀಸರು, ಶನಿವಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಿದ್ದಾರೆ.

ಬಂಧಿತ ಆರೋಪಿಗಳಿಂದ ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅನುಪಮ್ ಅಗರವಾಲ್ ತಿಳಿಸಿದ್ದಾರೆ.

ಪರಿಹಾರ ವಿತರಣೆ: ಜಿಲ್ಲಾಡಳಿತ, ಸಮಾಜ ಕಲ್ಯಾಣ ಇಲಾಖೆಯಿಂದ ಸಂತ್ರಸ್ತರ ಕುಟುಂಬದವರಿಗೆ ತಲಾ ₹ 4,12,250 ಮೊತ್ತದ ಚೆಕ್ ಅನ್ನು ಈಗಾಗಲೇ ವಿತರಿಸಲಾಗಿದೆ.

> **ಆತ್ಮಹತ್ಯೆ ಪ್ರಕರಣ ಎಂದು ಮರಣೋತ್ತರ ಪರೀಕ್ಷೆಯಿಂದ ತಿಳಿದುಬಂದಿದೆ. ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಮೂವರನ್ನು ಬಂಧಿಸಲಾಗಿದೆ**
>
> **ಅನುಪಮ್ ಅಗರವಾಲ್,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ವಿಜಯಪುರ

‘ಎಲ್ಲಾ ಆರೋಪಿಗಳನ್ನು ಬಂಧಿಸಿ’

ಒಂದನೇ ಪುಟದಿಂದ

‘ದೆಹಲಿಯ ನಿರ್ಭಯ ಪ್ರಕರಣದ ಮಾದರಿಯಲ್ಲಿ ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆಯಾಗಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ಮಾದಾರ ಚನ್ನಯ್ಯ ಗುರುಪೀಠವು ಸಂತ್ರಸ್ತ ಬಾಲಕಿಯರ ಪೋಷಕರ ಜೊತೆಗಿದೆ. ಕೃತ್ಯ ನಡೆದು ವಾರ ಕಳೆದರೂ ಪೊಲೀಸ್ ಇಲಾಖೆ ನಿಧಾನಗತಿಯಲ್ಲಿ ತನಿಖೆ ನಡೆಸುತ್ತಿರುವುದು ಖಂಡನೀಯ. ವಿಜಯಪುರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕು’ ಎಂದು ಹೇಳಿದ್ದಾರೆ.

ರೈತರ ಜೊತೆ ಮಾತುಕತೆಗೆ ಪ್ರತಿಪಕ್ಷಗಳ ಆಗ್ರಹ

ನವದೆಹಲಿ: ಮೂರು ಕೃಷಿ ಕಾಯ್ದೆಗಳ ವಿರುದ್ಧ ಕಳೆದ ಆರು ತಿಂಗಳಿನಿಂದ ಚಳವಳಿ ಹಮ್ಮಿಕೊಂಡಿರುವ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಇದೇ 26ರಂದು (ಬುಧವಾರ) ದೇಶವ್ಯಾಪಿ ಕರೆನೀಡಿರುವ ಪ್ರತಿಭಟನೆಗೆ 12 ರಾಜಕೀಯ ಪಕ್ಷಗಳು ಬೆಂಬಲ ಸೂಚಿಸಿವೆ.

ಪ್ರತಿಭಟನನಿರತ ರೈತರ ಜೊತೆ ಮತ್ತೆ ಮಾತುಕತೆ ಶುರು ಮಾಡುವಂತೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಮುಖ್ಯಮಂತ್ರಿಗಳಾದ ಮಮತಾ ಬ್ಯಾನರ್ಜಿ, ಉದ್ಧವ್ ಠಾಕ್ರೆ, ಹೇಮಂತ್ ಸೊರೇನ್ ಮತ್ತು ಎಂ.ಕೆ. ಸ್ಟಾಲಿನ್ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಮೂರು ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವುದು ಮತ್ತು ಕನಿಷ್ಠ ಬೆಂಬಲ ಬೆಲೆಗೆ ಖಾತರಿ ಕೊಡುವಂತೆ ರೈತರು ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ.

‘ಸ್ವಾಮಿನಾಥನ್ ಸಮಿತಿ ಶಿಫಾರಸು ಮಾಡಿರುವ ರೀತಿಯಲ್ಲಿ ಕನಿಷ್ಠ ಬೆಂಬಲ ಬೆಲೆ ನೀಡುವುದು ಹಾಗೂ ತಕ್ಷಣ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವಂತೆ ನಾವು ಆಗ್ರಹಿಸುತ್ತೇವೆ. ಹಟ ಹಿಡಿಯದೇ ರೈತರ ಜೊತೆ ಮಾತುಕತೆಗೆ ಮುಂದಾಗಬೇಕು’ ಎಂದು ಪ್ರತಿಪಕ್ಷಗಳ ನಾಯಕರು ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಜೆಡಿಎಸ್ ಮುಖ್ಯಸ್ಥ ಎಚ್.ಡಿ. ದೇವೇಗೌಡ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ, ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್, ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್, ಸಿಪಿಐನ ಡಿ.ರಾಜಾ ಮತ್ತು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯಚೂರಿ ಅವರೂ ಕೇಂದ್ರಕ್ಕೆ ಬರೆದ ಪತ್ರಕ್ಕೆ ಸಹಿ ಹಾಕಿದ್ದಾರೆ.

ದೇಶದ ನಾನಾ ಕಡೆಗಳಿಂದ ಬಂದಿರುವ ರೈತರು ದೆಹಲಿಯ ಗಡಿಗಳಲ್ಲಿ ಸುದೀರ್ಘ ಅವಧಿಯಿಂದ ಬೀಡುಬಿಟ್ಟಿದ್ದಾರೆ.

ಯುವಕನ ಕಪಾಳಕ್ಕೆ ಹೊಡೆದ ಐಎಎಸ್ ಅಧಿಕಾರಿ ಎತ್ತಂಗಡಿಗೆ ಸೂಚನೆ

ನವದೆಹಲಿ (ಪಿಟಿಐ): ಲಾಕ್‌ಡೌನ್ ಸಮಯದಲ್ಲಿ ರಸ್ತೆಗಿಳಿದ ಯುವಕನ ಕಪಾಳಕ್ಕೆ ಹೊಡೆದ ಸೂರಜ್‌ಪುರ್ ಜಿಲ್ಲಾಧಿಕಾರಿಯನ್ನು ಸ್ಥಾನದಿಂದ ಬಿಡುಗಡೆ ಮಾಡುವಂತೆ ಛತ್ತೀಸ್‌ಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಭಾನುವಾರ ಸೂಚಿಸಿದ್ದಾರೆ.

ಕೋವಿಡ್–19 ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಯುವಕನೊಬ್ಬನಿಗೆ ಹಿರಿಯ ಜಿಲ್ಲಾಧಿಕಾರಿ ರಣಬೀರ್ ಶರ್ಮಾ ಕಪಾಳಕ್ಕೆ ಹೊಡೆದಿದ್ದರು. ಅದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿ ಚರ್ಚೆಗೆ ಗ್ರಾಸವಾಗಿದೆ.

ಇದಕ್ಕೆ ತೀವ್ರ ಟೀಕೆ ವ್ಯಕ್ತವಾದ ಬೆನ್ನಲ್ಲೇ ಜಿಲ್ಲಾಧಿಕಾರಿ ರಣಬೀರ್ ಶರ್ಮಾ ಕ್ಷಮೆ ಕೇಳಿದ್ದಾರೆ.

ಅದರ ಬೆನ್ನಲ್ಲೇ ‘ಈ ಘಟನೆಯು ದುರದೃಷ್ಟಕರ ಮತ್ತು ಖಂಡನೀಯವಾದುದು. ಛತ್ತೀಸ್‌ಗಢದಲ್ಲಿ ಇಂಥದ್ದನ್ನು ಸಹಿಸಲು ಸಾಧ್ಯವಿಲ್ಲ. ತಕ್ಷಣದಿಂದಲೇ ಜಿಲ್ಲಾಧಿಕಾರಿ ರಣಬೀರ್ ಅವರನ್ನು ಸ್ಥಾನದಿಂದ ತೆರವುಗೊಳಿಸಲು ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ಭೂಪೇಶ್ ಬಘೇಲ್ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಯುವಕನಿಗೆ ಹೊಸ ಮೊಬೈಲ್ ತೆಗೆಸಿಕೊಡಲು ಸಹ ಅವರು ಸೂಚಿಸಿದ್ದಾರೆ.

ಪರಮಾಣು ಶಕ್ತಿ ಆಯೋಗದ ಮಾಜಿ ಅಧ್ಯಕ್ಷ ಶ್ರೀಕುಮಾರ್ ಬ್ಯಾನರ್ಜಿ ನಿಧನ



ಮುಂಬೈ (ಪಿಟಿಐ): ಪರಮಾಣು ಶಕ್ತಿ ಆಯೋಗದ ಮಾಜಿ ಅಧ್ಯಕ್ಷ ಶ್ರೀಕುಮಾರ್ ಬ್ಯಾನರ್ಜಿ (70) ಅವರು ನವಿ ಮುಂಬೈನ ಸ್ವಗೃಹದಲ್ಲಿ ಭಾನುವಾರ ಹೃದಯಾಘಾತದಿಂದ ನಿಧನರಾದರು.

ಬ್ಯಾನರ್ಜಿ ಅವರು ಕಳೆದ ತಿಂಗಳಷ್ಟೇ ಕೋವಿಡ್–19ನಿಂದ ಗುಣಮುಖರಾಗಿದ್ದರು. 2012ರಲ್ಲಿ ಅವರು ಪರಮಾಣು ಶಕ್ತಿ ಆಯೋಗದ ಅಧ್ಯಕ್ಷ ಸ್ಥಾನ ಹಾಗೂ ಪರಮಾಣು ಶಕ್ತಿ ಇಲಾಖೆಯ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತಿ ಹೊಂದಿದ್ದರು.

2010ರ ತನಕ ಒಟ್ಟು ಆರು ವರ್ಷಗಳ ಕಾಲ ಬ್ಯಾನರ್ಜಿ ಅವರು ಭಾಭಾ ಪರಮಾಣು ಸಂಶೋಧನಾ ಕೇಂದ್ರದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು.

ಕಾನ್ಪುರದ ಐಐಟಿಯಿಂದ ಮೆಟಲರ್ಜಿ ಎಂಜಿನಿಯರ್ ಪದವಿ ಪಡೆದಿದ್ದ ಬ್ಯಾನರ್ಜಿ ಅವರು, ಬಿ.ಟೆಕ್ ಮುಗಿದ ಬಳಿಕ ಭಾಭಾ ಪರಮಾಣು ಸಂಶೋಧನಾ ಕೇಂದ್ರದ ಕೆಲಸಕ್ಕೆ ಸೇರಿದ್ದರು. ಅವರಿಗೆ 1989ರಲ್ಲಿ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ ಮತ್ತು 2005ರಲ್ಲಿ ‘ಪದ್ಮಶ್ರೀ’ ಪುರಸ್ಕಾರ ಲಭಿಸಿತ್ತು.

ಜಾರ್ಖಂಡ್‌ನ ಪಹರಿಯಾ ಬುಡಕಟ್ಟು ಸಮುದಾಯದ ದೀಪಕ್

13 ವರ್ಷಗಳ ಬಳಿಕ ಕುಟುಂಬ ಸೇರಿದ ಯುವಕ

ಡುಮ್ಕಾ (ಪಿಟಿಐ): ಐದು ವರ್ಷದ ಬಾಲಕನಾಗಿದ್ದಾಗ ಮನೆಯಿಂದ ದೂರವಾಗಿದ್ದ ಆತ 13 ವರ್ಷಗಳ ಸುದೀರ್ಘ ಅವಧಿಯ ಬಳಿಕ ಕುಟುಂಬದವರನ್ನು ಸೇರಿರುವ ಘಟನೆ ಜಾರ್ಖಂಡ್‌ನಲ್ಲಿ ನಡೆದಿದೆ.

ದೀಪಕ್ ದೆಹ್ರಿ(18) ಐದು ವರ್ಷದ ಬಾಲಕನಾಗಿದ್ದಾಗ ತನ್ನ ಕುಟುಂದವರಿಂದ ಬೇರ್ಪಟ್ಟಿದ್ದ. ಆದರೆ ವಿಡಿಯೊ ಕರೆಯ ಸಹಾಯದಿಂದ ತನ್ನ ಗ್ರಾಮವನ್ನು ದೀಪಕ್ ಪತ್ತೆ ಮಾಡಿದ್ದಾನೆ.

‘ಜಾರ್ಖಂಡ್‌ನ ಪಹರಿಯಾ ಪ್ರಾಚೀನ ಬುಡಕಟ್ಟು ಸಮುದಾಯಕ್ಕೆ ಸೇರಿದ ದೀಪಕ್, ಐದನೇ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡಿದ್ದ. ಆ ಬಳಿಕ ತಾಯಿಯೂ ಅವನನ್ನು ತ್ಯಜಿಸಿದ್ದರು. ಆಗ ದೀಪಕ್‌ನ ಚಿಕ್ಕಮ್ಮ ಬಾಲಕನನ್ನು ಉತ್ತರ ಪ್ರದೇಶದ ಹರ್ದೋರಿಗೆ ಕರೆದುಕೊಂಡು ಹೋಗಿದ್ದರು. ಆ ವೇಳೆ ದೀಪಕ್ ಮನೆಗೆ ಹೋಗಲೆಂದು ಚಿಕ್ಕಮ್ಮನ ಕೈತಪ್ಪಿಸಿ ಓಡಿಹೋಗಿದ್ದ. ಆದರೆ, ಜಾರ್ಖಂಡ್ ಬದಲು ಆತ ರಾಜಸ್ಥಾನದ ಬಿಕಾನೇರ್‌ಗೆ ಹೋಗುವ ರೈಲಿಗೆ ಹತ್ತಿದ್ದ’ ಎಂದು ಮಸಂಜೂರು ಪೊಲೀಸ್ ಠಾಣೆಯ ಅಧಿಕಾರಿ ಚಂದ್ರಶೇಖರ್ ದುಬೆ ತಿಳಿಸಿದರು.

ಬಿಕಾನೇರ್‌ನ ಸಮಾಜ ಕಲ್ಯಾಣ ಇಲಾಖೆಯ ಬಾಲಮಂದಿರದಲ್ಲಿ ದೀಪಕ್ 13 ವರ್ಷಗಳನ್ನು ಕಳೆದಿದ್ದಾನೆ. ದೀಪಕ್ ಹಲವು ಬಾರಿ ಭಾವೋದ್ವೇಗಕ್ಕೆ ಒಳಗಾಗಿ ತನ್ನ ಬಾಲ್ಯದ ನೆನಪುಗಳನ್ನು ಹೇಳುತ್ತಿದ್ದ. ಜತೆಗೆ, ಗ್ರಾಮದ ವಿವರಗಳನ್ನು ನೀಡುತ್ತಿದ್ದ. ಈ ವಿವರಗಳ ಆಧಾರದ ಮೇಲೆ ಬಾಲಮಂದಿರದ ಅಧೀಕ್ಷಕ ಅರವಿಂದ್ ಆಚಾರ್ಯ ಅವರು, ಮಸಂಜೂರು ಪೊಲೀಸರನ್ನು ಸಂಪರ್ಕಿಸಿದ್ದಾರೆ. ಬಳಿಕ ವಿಡಿಯೊ ಕರೆಯ ಮೂಲಕ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳನ್ನು ದೀಪಕ್‌ಗೆ ತೋರಿಸಿದ್ದಾರೆ. ಈ ವೇಳೆ ತನ್ನ ಮನೆ ಬಳಿಯಿದ್ದ ಮಸ್ಸಾಂಜೊರ್ ಅಣೆಕಟ್ಟನ್ನು ದೀಪಕ್ ಗುರುತಿಸಿದ್ದಾನೆ.

ಬಳಿಕ ದೀಪಕ್‌ನನ್ನು ಪೊಲೀಸ್ ಅಧಿಕಾರಿಗಳ ಉಪಸ್ಥಿತಿಯಲ್ಲಿ ಬಿಕಾನೇರ್ ಪೊಲೀಸರು ದೀಪಕ್‌ನನ್ನು ಶುಕ್ರವಾರ ಆತನ ಕುಟುಂಬದವರಿಗೆ ಒಪ್ಪಿಸಿದರು.

‘ನನಗೆ ಅಪಾರ ಸಂತಸವಾಗಿದೆ. ನನ್ನ ಜನರ ನಡುವೆ ಬದುಕು ಸಾಗಿಸುತ್ತೇನೆ’ ಎಂದು ದೀಪಕ್ ಉತ್ಸಾಹದಿಂದ ಹೇಳಿದರು.

ಮುಖ್ಯಾಂಶಗಳು

- ವಿಡಿಯೊ ಕರೆಯಿಂದ ಗ್ರಾಮವನ್ನು ಗುರುತಿಸಿದ ಯುವಕ
- ಬಾಲಮಂದಿರದಲ್ಲಿ 13 ವರ್ಷ ಕಳೆದಿರುವ ದೀಪಕ್

ಕೊಲೆ ಆರೋಪ: ಒಲಿಂಪಿಕ್ಸ್ ಪದಕ ವಿಜೇತ ಕುಸ್ತಿಪಟು ಬಂಧನ

19 ದಿನದಿಂದ ತಲೆಮರೆಸಿಕೊಂಡಿದ್ದ ಸುಶೀಲ್

ನವದೆಹಲಿ (ಪಿಟಿಐ): ದೆಹಲಿ ಪೊಲೀಸರಿಗೆ 19 ದಿನಗಳಿಂದ ಚಳ್ಳೇಹಣ್ಣು ತಿನ್ನಿಸಿದ, ಕೊಲೆ ಆರೋಪ ಎದುರಿಸುತ್ತಿರುವ ಒಲಿಂಪಿಯನ್ ಕುಸ್ತಿಪಟು ಸುಶೀಲ್ ಕುಮಾರ್ ಸಿಕ್ಕಿಬಿದ್ದಿದ್ದಾರೆ.

ಮೇ 4ರಂದು ರಾತ್ರಿ ಛತ್ರಸಾಲ ಕ್ರೀಡಾಂಗಣದಲ್ಲಿ ನಡೆದಿದ್ದ ಜಗಳದಲ್ಲಿ ಯುವ ಕುಸ್ತಿಪಟು ಸಾಗರ್ ಧನಕರ್ ಮೇಲೆ ಸುಶೀಲ್ ಮತ್ತು ಸಂಗಡಿಗರು ಹಲ್ಲೆ ಮಾಡಿದ್ದರೆನ್ನಲಾಗಿದೆ. ತೀವ್ರವಾಗಿ ಗಾಯಗೊಂಡಿದ್ದ ಸಾಗರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೇ ಕೊನೆಯುಸಿರೆಳೆದಿದ್ದರು. ಆಗಿನಿಂದಲೂ ಸುಶೀಲ್ ನಾಪತ್ತೆಯಾಗಿದ್ದರು.

ಭಾನುವಾರ ಸುಶೀಲ್ (38) ಹಾಗೂ ಅವರ ಸಹಚರ ಅಜಯ್ ಕುಮಾರ್ ಅಲಿಯಾಸ್ ಸುನಿಲ್ ಎಂಬುವವರನ್ನು ಮುಂಡ್ಕಾದಲ್ಲಿ ಬಂಧಿಸಲಾಗಿದೆ ಎಂದು ಉಪ ಪೊಲೀಸ್ ಆಯುಕ್ತ ಪಿ.ಎಸ್. ಕುಶ್ವಾಹ ತಿಳಿಸಿದ್ದಾರೆ.



ಪೊಲೀಸರ ಬಂಧನದಲ್ಲಿ ಸುಶೀಲ್ ಕುಮಾರ್– ಎಎಫ್‌ಪಿ ಚಿತ್ರ

ನಂತರ ಅವರನ್ನು ಪೊಲೀಸರು ಕೋರ್ಟ್‌ಗೆ ಹಾಜರುಪಡಿಸಿದ್ದಾರೆ. ಸುಶೀಲ್ ಕುಮಾರ್ ಅವರನ್ನು 12 ದಿನಗಳ ಪೊಲೀಸ್ ಕಸ್ಟಡಿಗೆ ನೀಡುವಂತೆಯೂ ಮನವಿ ಮಾಡಿಕೊಂಡಿದ್ದಾರೆ.

‘ಕ್ರೀಡಾಂಗಣದಲ್ಲಿದ್ದ ಸಿಸಿ ಕ್ಯಾಮೆರಾವನ್ನು ಜಖಂ ಮಾಡಲಾಗಿದೆ. ಅದರ ಡಿಡಿಆರ್ ಅನ್ನೂ ಸುಶೀಲ್ ತೆಗೆದುಕೊಂಡು ಹೋಗಿದ್ದಾರೆ. ಅವರಿಂದ ಅದನ್ನು ವಶಪಡಿಸಿಕೊಳ್ಳಬೇಕಿದೆ. ಅಲ್ಲದೇ ಸಾಗರ್ ಮೇಲೆ ಹಲ್ಲೆ ಮಾಡಿದ ಕಾರಣವನ್ನೂ ತಿಳಿಯಬೇಕಿದೆ. ಆದ್ದರಿಂದ ಸುಶೀಲ್ ಅವರನ್ನು 12 ದಿನಗಳ ಪೊಲೀಸ್ ಕಸ್ಟಡಿಗೆ ನೀಡಬೇಕು’ ಎಂದು ಹೆಚ್ಚುವರಿ ಸರ್ಕಾರಿ ಅಭಿಯೋಜಕ ಅತುಲ್ ಶ್ರೀವಾಸ್ತವ ಮನವಿ ಮಾಡಿದರು.

ಘಟನೆ ನಡೆದ ನಂತರ ತಲೆಮರೆಸಿಕೊಂಡಿದ್ದ ಸುಶೀಲ್ ಕುಮಾರ್ ಅವರ ಕುರಿತು ಮಾಹಿತಿ ನೀಡಿದವರಿಗೆ ದೆಹಲಿ ಪೊಲೀಸರು ₹ 1ಲಕ್ಷ ಬಹುಮಾನ ಘೋಷಿಸಿದ್ದರು. ಅಜಯ್ ಕುಮಾರ್‌ನನ್ನು ಹುಡುಕಿಕೊಟ್ಟವರಿಗೂ ₹ 50 ಸಾವಿರ ನೀಡಲಾಗುವುದೆಂದು ಪೊಲೀಸರು ಹೇಳಿದ್ದರು.

ಸುಶೀಲ್ ಕುಮಾರ್ ಅವರ ಪತ್ತೆಗೆ ಲುಕ್ ಔಟ್ ನೋಟಿಸ್ ಹೊರಡಿಸಲಾಗಿತ್ತು. ಆರೋಪಿಗಳ ವಿರುದ್ಧ ಜಾಮೀನುರಹಿತ ವಾರಂಟ್ ಕೂಡ ಇತ್ತು. ಈ ನಡುವೆ ಬಂಧನಕ್ಕೆ ಹೆದರಿ ಸುಶೀಲ್ ಕುಮಾರ್ ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು.

2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗಳಿಸುವುದರೊಂದಿಗೆ ಕುಸ್ತಿಯಲ್ಲಿ ಪದಕ ಗೆಲ್ಲುವ 56 ವರ್ಷಗಳ ಭಾರತದ ಕನಸನ್ನು ಸುಶೀಲ್ ಕುಮಾರ್ ನನಸು ಮಾಡಿದ್ದರು. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

ಆಘಾತ ವ್ಯಕ್ತಪಡಿಸಿದ ಕ್ರೀಡಾ ವಲಯ

ಶ್ರೇಷ್ಠ ಒಲಿಂಪಿಯನ್‌ಗಳಲ್ಲಿ ಒಬ್ಬರಾಗಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾದ ಸುಶೀಲ್ ಕುಮಾರ್ ಅವರ ಕುರಿತು ದೇಶದ ಕ್ರೀಡಾ ವಲಯದಲ್ಲಿ ಆಘಾತ ವ್ಯಕ್ತವಾಗಿದೆ.

ವಿಪರ್ಯಾಸವೆಂದರೆ ವಿಶ್ವ ಕುಸ್ತಿ ದಿನದಂದೇ (ಮೇ 23) ಅವರ ಬಂಧನವಾಗಿದೆ. ಘಟನೆಯ ಕುರಿತು ಪ್ರಮುಖ ಕ್ರೀಡಾಪಟುಗಳು ಆಘಾತ ವ್ಯಕ್ತಪಡಿಸಿದ್ದಾರೆ.

‘ಭಾರತದ ಕ್ರೀಡಾಕ್ಷೇತ್ರಕ್ಕೆ ಸುಶೀಲ್ ನೀಡಿದ ಕೊಡುಗೆ ಕಡೆಗಣಿಸುವಂತಹದ್ದಲ್ಲ. ನಾನು ಇಷ್ಟೇ ಹೇಳಬಯಸುವೆ. ವಿಷಯಗಳೆಲ್ಲ ಸ್ಪಷ್ಟವಾಗಲಿ’ ಎಂದು ಬಾಕ್ಸರ್ ವಿಜೇಂದರ್ ಸಿಂಗ್ ಹೇಳಿದ್ದಾರೆ.

‘ಈ ಘಟನೆ ನಿಜಕ್ಕೂ ದುರದೃಷ್ಟಕರ. ಕುಸ್ತಿ ಮಾತ್ರವಲ್ಲ ದೇಶದ ಕ್ರೀಡಾ ಕ್ಷೇತ್ರದ ಮೇಲೆಯೇ ಇದು ಕೆಟ್ಟ ಪರಿಣಾಮ ಬೀರಿದೆ’ ಎಂದು ಟೇಬಲ್ ಟೆನಿಸ್ ಆಟಗಾರ ಅಚಂತ ಶರತ್ ಕಮಲ್ ನುಡಿದಿದ್ದಾರೆ.

‘ಇದು ನಾಚಿಕೆಗೇಡಿನ ವಿಷಯ ಮತ್ತು ದುರದೃಷ್ಟಕರ. ಕ್ರೀಡಾಪಟುಗಳಿಗೆ ಮಾದರಿಯಾಗಬೇಕಾಗಿದ್ದ ಸುಶೀಲ್ ಕುಮಾರ್ ಇಂತಹ ಪ್ರಕರಣದಲ್ಲಿ ಭಾಗಿಯಾಗಬಾರದಿತ್ತು. ಕ್ರೀಡೆಯಿಂದ ಹಣ, ಪ್ರಸಿದ್ಧಿ ಎಲ್ಲವನ್ನೂ ಅವರು ಪಡೆದಿದ್ದರು’ ಎಂದು ಭಾರತ ಹಾಕಿ ತಂಡದ ಮಾಜಿ ನಾಯಕ ಅಜಿತ್ ಪಾಲ್ ಅವರು ಹೇಳಿದ್ದಾರೆ.

ಅಮಿತ್, ಮೇರಿ ಮೇಲೆ ನಿರೀಕ್ಷೆ

ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಇಂದಿನಿಂದ

ದುಬೈ (ಪಿಟಿಐ): ಒಲಿಂಪಿಕ್ಸ್‌ಗೆ ಸಜ್ಜಾಗುತ್ತಿರುವ ಭಾರತದ ಬಾಕ್ಸರ್‌ಗಳಿಗೆ ಏಷ್ಯನ್ ಚಾಂಪಿಯನ್‌ಷಿಪ್ ಉತ್ತಮ ವೇದಿಕೆಯಾಗಿದ್ದು, ಸೋಮವಾರ ಇಲ್ಲಿ ಆರಂಭವಾಗಲಿದೆ. ಕಳೆದ ಆವೃತ್ತಿಗಿಂತ ಈ ಬಾರಿ ಉತ್ತಮ ಸಾಮರ್ಥ್ಯ ತೋರುವ ನಿರೀಕ್ಷೆಯಲ್ಲಿ ಭಾರತದ ಬಾಕ್ಸರ್‌ಗಳಿದ್ದಾರೆ.

ಭಾರತದ 19 ಮಂದಿ (ಒಂಬತ್ತು ಮಹಿಳೆಯರು, 10 ಪುರುಷರು) ಸ್ಪರ್ಧೆಯಲ್ಲಿದ್ದು, ಪದಕಗಳನ್ನು ಬಾಚಿಕೊಳ್ಳಲು ಸಿದ್ಧವಾಗಿದ್ದಾರೆ. ಬಹುಮಾನ ಮೊತ್ತದೊಂದಿಗೆ ಬೋನಸ್ ಕೂಡ ಈ ಆವೃತ್ತಿಯಲ್ಲಿ ಬಾಕ್ಸರ್‌ಗಳ ಕೈ ಸೇರಲಿದೆ.

ಭಾರತದ ಬಾಕ್ಸರ್‌ಗಳ ತಂಡವು ಶನಿವಾರ ಇಲ್ಲಿ ಬಂದು ತಲುಪಿದೆ.

ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿರುವ, ಹಾಲಿ ಚಾಂಪಿಯನ್ ಅಮಿತ್ ಪಂಘಲ್ (52 ಕೆಜಿ ವಿಭಾಗ), ಕಳೆದ ಆವೃತ್ತಿಯ ಬೆಳ್ಳಿ ಪದಕ ವಿಜೇತ ಆಶಿಶ್ ಕುಮಾರ್ (75 ಕೆಜಿ), ವಿಕಾಸ್ ಕೃಷ್ಣನ್ (69 ಕೆಜಿ) ಮತ್ತು ಶಿವ ಥಾಪಾ (64 ಕೆಜಿ) ಅವರು ಪುರುಷರ ವಿಭಾಗದಲ್ಲಿ ನಿರೀಕ್ಷೆ ಮೂಡಿಸಿದ್ದಾರೆ. ದಕ್ಷಿಣ ಏಷ್ಯಾ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ವಿನೋದ್ ತನ್ವರ್ (49 ಕೆಜಿ ವಿಭಾಗ) ಅವರಿಗೆ ಕೋವಿಡ್ ಖಚಿತಪಟ್ಟಿದ್ದರಿಂದ ಅವರನ್ನು ತಂಡದಿಂದ ಕೈ ಬಿಡಲಾಗಿದೆ.



ಅಮಿತ್ ಪಂಘಲ್



ಶಿವ ಥಾಪಾ– ಪಿಟಿಐ ಚಿತ್ರ

ಸೆಮಿಗೆ ಮಹಿಳೆಯರು: ಸೋಮವಾರ ಮಹಿಳೆಯರ ಡ್ರಾ ಪ್ರಕಟಿಸಲಾಗಿದ್ದು, ಕಡಿಮೆ ಸ್ಪರ್ಧಿಗಳಿದ್ದ ಹಿನ್ನೆಲೆಯಲ್ಲಿ ಆರು ಬಾರಿಯ ವಿಶ್ವ ಚಾಂಪಿಯನ್ ಎಂ.ಸಿ.ಮೇರಿ ಕೋಮ್ (51 ಕೆಜಿ ವಿಭಾಗ), ಸಿಮ್ರನ್‌ಜೀತ್ ಕೌರ್ (60 ಕೆಜಿ), ಲವ್ಲಿನಾ ಬೊರ್ಗೊಹೈನ್ (69 ಕೆಜಿ), ಅನುಪಮಾ (81+ ಕೆಜಿ), ಲಾಲ್‌ಬುತ್ಸೈಹಿ (64 ಕೆಜಿ), ಮೋನಿಕಾ (48 ಕೆಜಿ) ಮತ್ತು ಪೂಜಾ ರಾಣಿ (75 ಕೆಜಿ) ಅವರು ನೇರವಾಗಿ ಸೆಮಿಫೈನಲ್ ತಲುಪಿದರು.

ಭಾರತದಲ್ಲಿ ನಿಗದಿಯಾಗಿದ್ದ ಈ ಟೂರ್ನಿಯನ್ನು ಕೋವಿಡ್ ಹಿನ್ನೆಲೆಯಲ್ಲಿ ದುಬೈಗೆ ಸ್ಥಳಾಂತರ ಮಾಡಲಾಗಿದೆ. ಟೂರ್ನಿಯಲ್ಲಿ ಚಿನ್ನ ಗೆದ್ದವರಿಗೆ ₹ 7 ಲಕ್ಷ, ಬೆಳ್ಳಿ ಪದಕ ಗೆದ್ದವರಿಗೆ ಮೂರೂವರೆ ಲಕ್ಷ ಮತ್ತು ಕಂಚಿನ ಪದಕ ವಿಜೇತರಿಗೆ ₹ 1ಲಕ್ಷ 80 ಸಾವಿರ ನೀಡಲಾಗುತ್ತದೆ.

17 ದೇಶಗಳ ಬಾಕ್ಸರ್‌ಗಳು ಟೂರ್ನಿಯಲ್ಲಿ ಭಾಗವಹಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಟೆನಿಸ್: ಸಿಟ್ಸಿಪಾಸ್‌ಗೆ ಪ್ರಶಸ್ತಿ ಗರಿ

ಲಿಯೊನ್, ಫ್ರಾನ್ಸ್ (ರಾಯಿಟರ್ಸ್): ಗ್ರೀಸ್‌ನ ಸ್ಟೆಫನೋಸ್ ಸಿಟ್ಸಿಪಾಸ್ ಅವರು ಬ್ರಿಟನ್‌ನ ಕ್ಯಾಮರೂನ್ ನೊರಿ ಅವರ ಸವಾಲು ಮೀರಿ ಲಿಯೊನ್ ಓಪನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.



ಸ್ಟೆಫನೋಸ್ ಸಿಟ್ಸಿಪಾಸ್

ಭಾನುವಾರ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಸಿಟ್ಸಿಪಾಸ್ 6-3, 6-3ರಿಂದ ಎದುರಾಳಿಗೆ ಸೋಲುಣಿಸಿದರು. ಗ್ರೀಸ್ ಆಟಗಾರನಿಗೆ ಒಲಿದ ಏಳನೇ ಎಟಿಪಿ ಪ್ರಶಸ್ತಿ ಇದು.

ಶ್ರೀಲಂಕಾದ ಇಬ್ಬರು ಕ್ರಿಕೆಟಿಗರಿಗೆ ಕೋವಿಡ್

ಢಾಕಾ (ಎಎಫ್‌ಪಿ): ಶ್ರೀಲಂಕಾ ತಂಡದ ಇಬ್ಬರು ಆಟಗಾರರಿಗೆ ಮತ್ತು ಬೌಲಿಂಗ್ ಕೋಚ್‌ಗೆ ಕೋವಿಡ್ ದೃಢಪಟ್ಟಿದೆ.

ಇದರ ಹೊರತಾಗಿಯೂ ಬಾಂಗ್ಲಾದೇಶ ಮತ್ತು ಶ್ರೀಲಂಕಾ ನಡುವಣ ಮೊದಲ ಏಕದಿನ ಕ್ರಿಕೆಟ್ ಪಂದ್ಯ ನಿಗದಿಯಂತೆ ಭಾನುವಾರ ನಡೆಯಿತು.

ಇಸುರು ಉಡಾನ ಮತ್ತು ಶಿರಾನ್ ಫೆರ್ನಾಂಡೊ ಜೊತೆಗೆ ಬೌಲಿಂಗ್ ಕೋಚ್ ಚಮಿಂಡಾ ವಾಸ್ ಅವರಿಗೂ ಸೋಂಕು ತಗುಲಿರುವುದು ಶನಿವಾರ ನಡೆಸಿದ ಪರೀಕ್ಷೆಯಲ್ಲಿ ಖಚಿತವಾಗಿದೆ ಎಂದು ಶ್ರೀಲಂಕಾ ಕ್ರಿಕೆಟ್ ಮಂಡಳಿ ಭಾನುವಾರ ತಿಳಿಸಿದೆ.

‘ಭಾನುವಾರ ಅವರನ್ನು ಎರಡನೇ ಬಾರಿ ಪರೀಕ್ಷೆಗೊಳಪಡಿಸಲಾಗಿದೆ. ಫಲಿತಾಂಶ ಎದುರುನೋಡಲಾಗಿದೆ’ ಎಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ನಿರ್ದೇಶಕ ಜಲಾಲ್ ಯೂನಸ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಅವರಿಗೆ ಸೋಂಕು ದೃಢಪಟ್ಟರೆ, ಏಕಾಂತವಾಸಕ್ಕೆ ವ್ಯವಸ್ಥೆ ಮಾಡಲಾಗುವುದು’ ಎಂದರು.

ಬಾಂಗ್ಲಾಗೆ ಜಯ: ಭಾನುವಾರ ನಡೆದ ಶ್ರೀಲಂಕಾ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವು 33 ರನ್‌ಗಳಿಂದ ಜಯ ಸಾಧಿಸಿತು. ಬಾಂಗ್ಲಾ ತಂಡದ ಮುಷ್ಫಿಕುರ್ ರಹೀಂ (84) ಬ್ಯಾಟಿಂಗ್‌ನಲ್ಲಿ, ಮೆಹಿದಿ ಹಸನ್ (30ಕ್ಕೆ 4) ಬೌಲಿಂಗ್ ಮಿಂಚಿದರು.


ಒಲಿಂಪಿಕ್ಸ್‌ಗೆ ಶೂಟರ್‌ಗಳ ಅಭ್ಯಾಸ

ಇಂದಿನಿಂದ ಯೂರೋಪಿಯನ್ ಚಾಂಪಿಯನ್‌ಷಿಪ್

ಒಸಿಜೆಕ್, ಕ್ರೊವೇಷ್ಯಾ (ಪಿಟಿಐ): ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವವರು ಸೇರಿದಂತೆ ಭಾರತದ ಶೂಟರ್‌ಗಳು ಯೂರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧೆಗೆ ಸಜ್ಜಾಗಿದ್ದಾರೆ.

ಸೋಮವಾರ ಇಲ್ಲಿ ಟೂರ್ನಿ ಆರಂಭವಾಗಲಿದ್ದು, ಭಾರತದ ಶೂಟರ್‌ಗಳು ಅತಿಥಿ ಅಥ್ಲೀಟ್‌ಗಳಾಗಿ ಆಹ್ವಾನಿತರಾಗಿದ್ದಾರೆ. ಆದಾಗ್ಯೂ ಕನಿಷ್ಠ ಅರ್ಹತಾ ಸ್ಕೋರ್ (ಎಂಕ್ಯೂಎಸ್) ವಿಭಾಗದಲ್ಲಿ ಸ್ಪರ್ಧಿಸುವ ಅವಕಾಶ ಪಡೆದಿದ್ದಾರೆ. ಇಲ್ಲಿ ಅವರು ಗಳಿಸುವ ಪಾಯಿಂಟ್‌ಗಳನ್ನು ಫೈನಲ್ಸ್ ಅರ್ಹತೆಗೆ ಪರಿಗಣಿಸಲಾಗುವುದಿಲ್ಲ. ಆದರೆ ಟೋಕಿಯೊ ಒಲಿಂಪಿಕ್ಸ್‌ಗೆ ಪೂರ್ವಸಿದ್ಧತೆಯಾಗಿ ಈ ಚಾಂಪಿಯನ್‌ಷಿಪ್ ಭಾರತದ ಶೂಟರ್‌ಗಳಿಗೆ ಉತ್ತಮ ವೇದಿಕೆಯಾಗಿದೆ.

ಪುರುಷರ 10 ಮೀಟರ್ ಏರ್ ರೈಫಲ್ ಎಂಕ್ಯೂಎಸ್ ವಿಭಾಗದಲ್ಲಿ ಭಾರತದ ದೀಪಕ್ ಕುಮಾರ್, ದಿವ್ಯಾಂಶ್ ಸಿಂಗ್ ಪನ್ವರ್ ಹಾಗೂ ಐಶ್ವರಿಪ್ರತಾಪ್ ಸಿಂಗ್ ತೋಮರ್ ಕಣಕ್ಕಿಳಿಯಲಿದ್ದಾರೆ. ಅಪೂರ್ವಿ ಚಾಂಡೇಲ ಹಾಗೂ ಇಳವೆನ್ನಿಲ ವಾಳರಿವನ್ ಅವರು ಇದೇ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಪಾಲ್ಗೊಳ್ಳುವರು.



ದಿವ್ಯಾಂಶ್ ಸಿಂಗ್ ಪನ್ವರ್



ಅಪೂರ್ವಿ ಚಾಂಡೇಲ—ಪಿಟಿಐ ಚಿತ್ರ

ಅಭಿಷೇಕ್ ವರ್ಮಾ ಹಾಗೂ ಸೌರಭ್ ಚೌಧರಿ ಅವರು ಪುರುಷರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಮತ್ತು ಮನು ಭಾಕರ್ ಹಾಗೂ ಯಶಸ್ವಿನಿ ಸಿಂಗ್ ದೇಸ್ವಾಲ್ ಅವರು ಇದೇ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಅದೃಷ್ಟ ಪರೀಕ್ಷಿಸಲಿದ್ದಾರೆ.

ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಭಾರತದ 13 ಮಂದಿಯ ತಂಡವು ಸದ್ಯ ಕ್ರೊವೇಷ್ಯಾದ ರಾಜಧಾನಿ ಜಾಗ್ರೇಬ್‌ನಲ್ಲಿ ತಂಗಿದ್ದು, ಸ್ಪರ್ಧೆಗಾಗಿ ಶನಿವಾರ ಒಸಿಜೆಕ್‌ಗೆ ಆಗಮಿಸಿದೆ.

ಯೂರೋಪಿಯನ್ ಚಾಂಪಿಯನ್‌ಷಿಪ್ ಬಳಿಕ ಜೂನ್ 22ರಿಂದ ವಿಶ್ವಕಪ್ ಶೂಟಿಂಗ್ ಟೂರ್ನಿಗೂ ಒಸಿಜೆಕ್ ಆತಿಥ್ಯ ವಹಿಸಲಿದೆ.

‘ಮಹಿಳಾ ಕ್ರಿಕೆಟ್: ಬಹುಮಾನ ಮೊತ್ತ ಶೀಘ್ರ ಪಾವತಿ’

ನವದೆಹಲಿ (ಪಿಟಿಐ): ಹೋದ ವರ್ಷ ಮಹಿಳೆಯರ ವಿಶ್ವ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದ ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿಯರ ಸಂಭಾವನೆಯ ಬಾಕಿ ಮೊತ್ತವನ್ನು ಈ ವಾರ ನೀಡಲಾಗುವುದು ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

‘ಕಳೆದ ವರ್ಷದ ಫೆಬ್ರವರಿ-ಮಾರ್ಚ್‌ನಲ್ಲಿ ನಡೆದ ವಿಶ್ವಕಪ್ ಟೂರ್ನಿಯ ರನ್ನರ್ ಅಪ್ ಬಹುಮಾನದ ಹಣವನ್ನು ಬಿಸಿಸಿಐ ಇನ್ನೂ ವಿತರಿಸಬೇಕಾಗಿದೆ’ ಎಂದು ಅಂತರರಾಷ್ಟ್ರೀಯ ಕ್ರಿಕೆಟಿಗರ ಸಂಘದ ಒಕ್ಕೂಟದ (ಎಫ್‌ಐಸಿಎ) ಅಧಿಕಾರಿಯೊಬ್ಬರು ಹೇಳಿದ್ದನ್ನು ಉಲ್ಲೇಖಿಸಿ ಇಂಗ್ಲೆಂಡ್ ‘ಟೆಲಿಗ್ರಾಫ್’ ಪತ್ರಿಕೆ ವರದಿ ಮಾಡಿತ್ತು. ಹೀಗಾಗಿ ಈ ವಿಷಯ ಬೆಳಕಿಗೆ ಬಂದಿತ್ತು.

ಆ ಟೂರ್ನಿಯ ಫೈನಲ್‌ನಲ್ಲಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತದ ಮಹಿಳೆಯರು ಆಸ್ಟ್ರೇಲಿಯಾ ತಂಡಕ್ಕೆ ಸೋತಿದ್ದರು.

ಜಿಂಬಾಬ್ವೆ ಕ್ರಿಕೆಟಿಗ ರಯಾನ್ ಮೊರೆಗೆ ಸ್ಪಂದಿಸಿದ ಪುಮಾ

ಹರಾರೆ(ಪಿಟಿಐ): ಜಿಂಬಾಬ್ವೆ ಕ್ರಿಕೆಟ್ ತಂಡದ ಬ್ಯಾಟ್ಸ್‌ಮನ್ ರಯಾನ್ ಬರ್ಲ್ ತಮ್ಮ ತಂಡದ ಹಣಕಾಸಿನ ಮುಗ್ಗಟ್ಟಿನ ಕುರಿತು ಮಾಡಿದ್ದ ಟ್ವೀಟ್ ಸಂದೇಶಕ್ಕೆ ಪುಮಾ ಕಂಪನಿಯು ಸ್ಪಂದಿಸಿದೆ.

ವಿಶ್ವ ದರ್ಜೆಯ ಕ್ರೀಡಾ ಸಲಕರಣೆಗಳ ಬ್ರ್ಯಾಂಡ್ ಆಗಿರುವ ಪುಮಾ ಜಿಂಬಾಬ್ವೆ ತಂಡಕ್ಕೆ ಕಿಟ್ ಪ್ರಾಯೋಜಕತ್ವ ನೀಡಲು ಮುಂದಾಗಿದೆ.

ರಯಾನ್ ಬರ್ಲ್ ಅವರು, ರಾಷ್ಟ್ರೀಯ ತಂಡಕ್ಕೆ ಪ್ರಾಯೋಜಕರು ಬೇಕೆಂದು ವಿನಂತಿ ಮಾಡಿದ್ದು, ತಮ್ಮ ದುಸ್ಥಿತಿ ಎತ್ತಿತೋರಿಸಲು ಪೂರ್ಣ ಸವೆದು ಹೋದ ಶೂಗಳ ಚಿತ್ರವನ್ನು ಟ್ವೀಟ್ ಮಾಡಿದ್ದರು. 27 ವರ್ಷದ ಬರ್ಲ್ ಅವರು, ಸವೆದಿರುವ ಶೂ ಜೊತೆಗೆ ಅಂಟು, ಅಂಟಿದ ಜಾಗ ಒತ್ತಲು ಬಳಸುವ ಪರಿಕರದ ಚಿತ್ರವನ್ನೂ ಹಾಕಿದ್ದರು.

‘ಪ್ರತಿ ಸರಣಿಯ ನಂತರ ಮತ್ತೆ ಶೂಗಳಿಗೆ ಅಂಟು ಹಾಕುವ ದುಸ್ಥಿತಿ ತಪ್ಪಿಸಲು ನಮಗೆ ಪ್ರಾಯೋಜಕರು ಸಿಗುವ ಅವಕಾಶ ಏನಾದರೂ ಇದೆಯೇ’ ಎಂದು ಅವರು ದೈನ್ಯದಿಂದ ಕೇಳಿದ್ದಾರೆ. ಕೆಲವು ದೇಶಗಳ ಕ್ರಿಕೆಟ್ ಮಂಡಳಿಗಳು ಕೇವಲ ಪ್ರಾಯೋಜಕತ್ವ ಒಂದರಿಂದಲೇ ಕೋಟಿಗಟ್ಟಲೆ ಹಣ ಗಳಿಸುವ ಸಂದರ್ಭದಲ್ಲಿ ಅವರು ಈ ಟ್ವೀಟ್ ಪೋಸ್ಟ್ ಮಾಡಿದ್ದಾರೆ.

ಟಿ20: 2021ರ ಏಷ್ಯಾಕಪ್ 2023ಕ್ಕೆ

ದುಬೈ (ಪಿಟಿಐ): ಕೋವಿಡ್–19 ಕಾರಣ ವೇಳಾಪಟ್ಟಿಯನ್ನು ಹೊಂದಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಈ ವರ್ಷದ ಏಷ್ಯಾಕಪ್ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯನ್ನು 2023ಕ್ಕೆ ಮುಂದೂಡಲಾಗಿದೆ. ಈ ವಿಷಯವನ್ನು ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ತಿಳಿಸಿದೆ.

2021ರ ಟೂರ್ನಿಯನ್ನು ಪಾಕಿಸ್ತಾನದಿಂದ ಶ್ರೀಲಂಕಾಕ್ಕೆ ಸ್ಥಳಾಂತರ ಮಾಡಲಾಗಿತ್ತು. ಆದರೆ ದ್ವೀಪರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿರುವುದರಿಂದ ಈ ಬಾರಿಯ ಟೂರ್ನಿಯನ್ನು ರದ್ದು ಮಾಡಲು ನಿರ್ಧರಿಸಲಾಗಿತ್ತು.

ಏಷ್ಯಾದ ನಾಲ್ಕು ಪ್ರಮುಖ ರಾಷ್ಟ್ರಗಳಲ್ಲಿ ಈ ವರ್ಷಾಂತ್ಯದವರೆಗೆ ಕ್ರಿಕೆಟ್ ವೇಳಾಪಟ್ಟಿಯನ್ನು ಈಗಾಗಲೇ ನಿರ್ಧರಿಸಿರುವುದರಿಂದ ಏಷ್ಯಾಕಪ್ ಟೂರ್ನಿಗೆ ಸಮಯ ಹೊಂದಿಸುವುದು ಕಷ್ಟಕರವಾಗಿತ್ತು.

ಮ್ಯೂಚುವಲ್ ಫಂಡ್: ಹೂಡಿಕೆಯಲ್ಲಿ ವೈವಿಧ್ಯ ಹೇಗೆ?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಹೂಡಿಕೆಯಲ್ಲಿ ವೈವಿಧ್ಯ ಇರಬೇಕು ಎನ್ನುವ ಕಾರಣಕ್ಕೆ ನಾವು ಬೇರೆ ಬೇರೆ ಮ್ಯೂಚುವಲ್ ಫಂಡ್ ಯೋಜನೆಗಳಲ್ಲಿ ಹೂಡಿಕೆ ಮಾಡುತ್ತೇವೆ. ಆದರೆ ಆ ಬೇರೆ ಬೇರೆ ಮ್ಯೂಚುವಲ್ ಫಂಡ್ ಯೋಜನೆಗಳು ನಿಮ್ಮ ಹೂಡಿಕೆಯ ಹಣವನ್ನು ಒಂದೇ ರೀತಿಯ ಷೇರುಗಳಲ್ಲಿ ತೊಡಗಿಸುವ ಸಾಧ್ಯತೆ ಇರುತ್ತದೆ. ಇದನ್ನು ಮ್ಯೂಚುವಲ್ ಫಂಡ್ ಪರಿಭಾಷೆಯಲ್ಲಿ ‘ಓವರ್‌ಲ್ಯಾಪ್’ ಎಂದು ಕರೆಯುತ್ತಾರೆ. ಎರಡು ಯೋಜನೆಗಳ ಮೂಲಕ ಒಂದೇ ಬಗೆಯ ಹೂಡಿಕೆ ಆಗುವ ಪ್ರಕ್ರಿಯೆ ಇದು. ಹೀಗೆ ಆದಾಗ, ಹೂಡಿಕೆಯಲ್ಲಿ ವೈವಿಧ್ಯ ಸಾಧಿಸುವ ಉದ್ದೇಶ ಈಡೇರುವುದಿಲ್ಲ.

ವಿವರಣೆ: ಹೂಡಿಕೆಯಲ್ಲಿ ವೈವಿಧ್ಯ ಇರಬೇಕು ಎಂಬ ಉದ್ದೇಶದಿಂದ ಪಟ್ಟಿಯಲ್ಲಿ ಹೇಳಿರುವ ಎರಡು ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತೀರಿ ಎಂದು ಭಾವಿಸೋಣ. ಆದರೆ, ಗಮನಿಸಿ ಈ ಎರಡು ಫಂಡ್‌ಗಳ ಹೂಡಿಕೆಯಲ್ಲಿ ಒಂದಿಷ್ಟು ಸಾಮ್ಯತೆ ಕಂಡುಬರುತ್ತಿದೆ. ಎಕ್ಸಿಸ್ ಬ್ಲೂಚಿಪ್ ಫಂಡ್, ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ಶೇ 10.06ರಷ್ಟು ಹಣ ತೊಡಗಿಸಿದ್ದರೆ, ಕೆನರಾ ರೊಬೆಕೋ ಬ್ಲೂಚಿಪ್ ಎಚ್‌ಡಿಎಫ್‌ಸಿಯಲ್ಲಿ ಶೇ 8.48ರಷ್ಟು ಹೂಡಿಕೆ ಮಾಡಿದೆ. ಹೀಗೆ ಈ ಎರಡೂ ಫಂಡ್‌ಗಳು ಒಂದೇ ಕಂಪನಿಗಳಲ್ಲಿ ತುಸು ಬೇರೆ ಪ್ರಮಾಣದಲ್ಲಿ ಹಣ ಹೂಡಿಕೆ ಮಾಡಿವೆ. ಹೀಗಿರುವಾಗ, ಹೂಡಿಕೆಯಲ್ಲಿ ವೈವಿಧ್ಯ ತರುವ ಉದ್ದೇಶಕ್ಕಾಗಿ ನೀವು ಈ ಎರಡು ಫಂಡ್ ಗಳನ್ನು ಆಯ್ಕೆ ಮಾಡಿಕೊಂಡ ಉದ್ದೇಶ ಈಡೇರಿಲ್ಲ ಎಂದಾಯಿತು. ಒಂದೇ ರೀತಿಯ 27 ಕಂಪನಿಗಳಲ್ಲಿ ಎರಡೂ ಫಂಡ್‌ಗಳು ಹಣ ತೊಡಗಿಸಿವೆ. ಎಕ್ಸಿಸ್ 7 ಪ್ರತ್ಯೇಕ ಕಂಪನಿಗಳಲ್ಲಿ ಹೂಡಿದ್ದರೆ, ಕೆನರಾ 22 ಪ್ರತ್ಯೇಕ ಕಂಪನಿಗಳಲ್ಲಿ ಹೂಡಿಕೆ ಮಾಡಿದೆ. ಇಲ್ಲಿ ಹೂಡಿಕೆ ವೈವಿಧ್ಯ ಸಾಧಿಸಲು ಹೆಚ್ಚು ಅವಕಾಶ ಇಲ್ಲ.

‘ಓವರ್‌ಲ್ಯಾಪ್’ ತಿಳಿಯುವುದು ಹೇಗೆ?: ಹೂಡಿಕೆ ವೇಳೆ ಫಂಡ್‌ಗಳ ಆಯ್ಕೆಗೂ ಮುನ್ನ ‘ಓವರ್‌ಲ್ಯಾಪ್’ ಬಗ್ಗೆ ತಿಳಿದುಕೊಂಡು ಮುನ್ನಡೆಯುವುದು ಬಹಳ ಮುಖ್ಯ. ದಿ ಫಂಡೂ ಡಾಟ್ ಕಾಂ (www.thefundoo.com), ಅಡ್ವೈಸರ್ ಖೋಜ್ ಡಾಟ್ ಕಾಂ (www.advisorkhoj.com) ನಂತಹ ಜಾಲತಾಣಗಳಲ್ಲಿ ಮ್ಯೂಚುವಲ್ ಫಂಡ್ ಪೋರ್ಟ್‌ಫೋಲಿಯೋ ‘ಓವರ್‌ಲ್ಯಾಪ್’ ಬಗ್ಗೆ ತಿಳಿಯಬಹುದು. ಉದಾಹರಣೆಗೆ, ದಿ ಫಂಡೂ ವೆಬ್‌ಸೈಟ್‌ಗೆ ಭೇಟಿ ನೀಡಿ Tools ಎಂಬ ಹೈಪರ್‌ಲಿಂಕ್ ಮೇಲೆ ಕ್ಲಿಕ್ ಮಾಡಿದರೆ, ಅಲ್ಲಿ ಪೋರ್ಟ್‌ಫೋಲಿಯೊ ‘ಓವರ್‌ಲ್ಯಾಪ್’ ಐಕಾನ್ ಕಾಣಿಸುತ್ತದೆ. ಅದರ ಮೇಲೆ ಕ್ಲಿಕ್ ಮಾಡಿ, ಸ್ಕೀಮ್ ‘ಎ’ ಮತ್ತು ಸ್ಕೀಮ್ ‘ಬಿ’ ಫಂಡ್ ಆಯ್ಕೆ ಮಾಡಬೇಕು. ನಂತರ Go ಎನ್ನುವ ಕೊಂಡಿಯ ಮೇಲೆ ಕ್ಲಿಕ್ ಮಾಡಿದಾಗ ನಿಮಗೆ ನಿರ್ದಿಷ್ಟ ಎರಡು ಫಂಡ್‌ಗಳ ನಡುವೆ ಎಷ್ಟು ‘ಓವರ್‌ಲ್ಯಾಪ್’ ಇದೆ ಎನ್ನುವುದು ತಿಳಿಯುತ್ತದೆ. (**ಗಮನಿಸಿ:** ಹಣಕಾಸು ಶಿಕ್ಷಣದ ಉದ್ದೇಶಕ್ಕಾಗಿ ಮಾತ್ರ ಕೆಲವು ಕಂಪನಿಗಳ ಹೆಸರು ಮತ್ತು ವೆಬ್‌ಸೈಟ್‌ಗಳ ಹೆಸರು ಉಲ್ಲೇಖಿಸಲಾಗಿದೆ. ಇಲ್ಲಿ ಬರೆದಿರುವ ಹೆಸರುಗಳು ಹೂಡಿಕೆ ಶಿಫಾರಸು ಅಲ್ಲ.)

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

‘ಓವರ್ ಲ್ಯಾಪ್’ ಅರಿತು ಅದನ್ನು ತಡೆಯುವುದು ಹೇಗೆ ಎನ್ನುವುದನ್ನು ತಿಳಿಯೋಣ.

ಹೀಗೆ ಆಗುತ್ತೆ ನೋಡಿ ಪೋರ್ಟ್‌ಫೋಲಿಯೊ ‘ಓವರ್‌ಲ್ಯಾಪ್’

ಎಕ್ಸಿಸ್ ಬ್ಲೂಚಿಪ್ ಫಂಡ್		ಕೆನರಾ ರೊಬೆಕೋ ಬ್ಲೂಚಿಪ್ ಮ್ಯೂಚುವಲ್ ಫಂಡ್	
ಕಂಪನಿ	ಹೂಡಿಕೆ(%)	ಕಂಪನಿ	ಹೂಡಿಕೆ(%)
ಎಚ್‌ಡಿಎಫ್‌ಸಿ ಬ್ಯಾಂಕ್	10.06	ಎಚ್‌ಡಿಎಫ್‌ಸಿ ಬ್ಯಾಂಕ್	8.48
ಇನ್ಫೊಸಿಸ್	8.73	ಇನ್ಫೊಸಿಸ್	6.78
ರಿಲಯನ್ಸ್ ಇಂಡಸ್ಟ್ರೀಸ್	4.97	ರಿಲಯನ್ಸ್ ಇಂಡಸ್ಟ್ರೀಸ್	5.36
ಟಿಸಿಎಸ್	5.84	ಟಿಸಿಎಸ್	3.23
ಐಸಿಐಸಿಐ ಬ್ಯಾಂಕ್	6.64	ಐಸಿಐಸಿಐ ಬ್ಯಾಂಕ್	7.03
ಕೋಟಕ್ ಬ್ಯಾಂಕ್	6.82	ಎಕ್ಸಿಸ್ ಬ್ಯಾಂಕ್	3.17
ಎಚ್‌ಯುಎಲ್	2.50	ಎಲ್‌ಆ್ಯಂಡ್‌ಟಿ	3.39

- ಎರಡೂ ಕಂಪನಿಗಳು ಹೂಡಿಕೆ ಮಾಡಿರುವ ಕಂಪನಿಗಳ ಸಂಖ್ಯೆ 27
- ಎಕ್ಸಿಸ್ ಬ್ಲೂಚಿಪ್ ಮಾತ್ರ ಹೂಡಿಕೆ ಮಾಡಿರುವ ಕಂಪನಿಗಳ ಸಂಖ್ಯೆ 7
- ಕೆನರಾ ರೊಬೆಕೋ ಬ್ಲೂಚಿಪ್ ಮಾತ್ರ ಹೂಡಿಕೆ ಮಾಡಿರುವ ಕಂಪನಿಗಳ ಸಂಖ್ಯೆ 22

(ಸೂಚನೆ: ಪಟ್ಟಿಯಲ್ಲಿ ಕೆಲವು ಕಂಪನಿಗಳ ಹೆಸರನ್ನು ಮಾತ್ರ ಉದಾಹರಣೆಗಾಗಿ ನೀಡಲಾಗಿದೆ. ಇದು ಹೂಡಿಕೆ ಶಿಫಾರಸು ಅಲ್ಲ)



ಹೂಡಿಕೆದಾರರ ಉತ್ಸಾಹ

ಮೇ 21ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. 50,540 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 3.70ರಷ್ಟು ಗಳಿಕೆ ಕಂಡಿದೆ. 15,175 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 3.38ರಷ್ಟು ಜಿಗಿದಿದೆ. ಉತ್ತಮ ತ್ರೈಮಾಸಿಕ ಫಲಿತಾಂಶಗಳು, ದಿನದಿಂದ ದಿನಕ್ಕೆ ತಗ್ಗುತ್ತಿರುವ ಕೋವಿಡ್ ಪ್ರಕರಣಗಳು, ಕೆಲವೆಡೆ ಲಾಕ್‌ಡೌನ್ ಸಡಿಲ ಸೇರಿ ಕೆಲವು ಪ್ರಮುಖ ಕಾರಣಗಳಿಗಳಿಂದ ಮಾರುಕಟ್ಟೆಯಲ್ಲಿ ಸಕಾರಾತ್ಮಕತೆ ಇದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 7.5ರಷ್ಟು ಗಳಿಕೆ ಕಂಡಿದೆ. ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 7ರಷ್ಟು ಮತ್ತು ನಿಫ್ಟಿ ರಿಯಲ್ ಎಸ್ಟೇಟ್ ಶೇ 6.7ರಷ್ಟು ಹೆಚ್ಚಳ ಕಂಡಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,753.9 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಹೂಡಿಕೆದಾರರು ₹ 1,318.52 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಈ ವಾರ ಇಂಡಸ್ ಇಂಡ್ ಬ್ಯಾಂಕ್ ಶೇ 14ರಷ್ಟು, ಎಸ್‌ಬಿಐ ಶೇ 12ರಷ್ಟು, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 11ರಷ್ಟು, ಎಚ್‌ಡಿಎಫ್‌ಸಿ ಶೇ 8ರಷ್ಟು ಮತ್ತು ಬಜಾಜ್ ಫೈನಾನ್ಸ್ ಶೇ 7ರಷ್ಟು ಗಳಿಕೆ ಕಂಡಿವೆ. ಏರ್‌ಟೆಲ್ ಶೇ 6ರಷ್ಟು, ಬ್ರಿಟಾನಿಯಾ ಶೇ 5ರಷ್ಟು ಮತ್ತು ಟಾಟಾ ಸ್ಟೀಲ್ ಶೇ 2ರಷ್ಟು ಕುಸಿದಿವೆ.

ಮುನ್ನೋಟ: 15,175 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಸಾರ್ವಕಾಲಿಕ ದಾಖಲೆ ಮಟ್ಟವನ್ನು ಮೀರಿ ಮುನ್ನಡೆಯಲು ಇನ್ನು 250 ಅಂಶಗಳನ್ನಷ್ಟೇ ದಾಟಬೇಕಿದೆ. ಕೋವಿಡ್ ಪ್ರಕರಣಗಳು ಇಳಿಮುಖವಾಗುತ್ತಿರುವುದು ಹೂಡಿಕೆದಾರರ ಉತ್ಸಾಹಕ್ಕೆ ಕಾರಣವಾಗಿದೆ. ಆದರೆ ಲಸಿಕೆ ನೀಡುವಲ್ಲಿ ಆಗುತ್ತಿರುವ ವಿಳಂಬ ಮಾರುಕಟ್ಟೆ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಇದಲ್ಲದೆ ಕೋವಿಡ್ ಪ್ರಕರಣಗಳು ಮತ್ತೆ ಏರುಗತಿಯತ್ತ ಮುಖ ಮಾಡಿದರೂ ಸೂಚ್ಯಂಕಗಳು ಹಿನ್ನಡೆ ಅನುಭವಿಸುವ ಸಂಭವವಿದೆ.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ದರವನ್ನು ಭಾನುವಾರ ಲೀಟರಿಗೆ 17 ಪೈಸೆ ಮತ್ತು ಡೀಸೆಲ್ ದರವನ್ನು ಲೀಟರಿಗೆ 29 ಪೈಸೆ ಹೆಚ್ಚಿಸಿವೆ. ಇದರಿಂದಾಗಿ, ಈ ತಿಂಗಳಿನಲ್ಲಿ ನಾಲ್ಕನೆಯ ತಾರೀಕಿನಿಂದ ಇಲ್ಲಿಯವರೆಗೆ 12 ಬಾರಿ ದರ ಹೆಚ್ಚಳ ಆದಂತಾಗಿದೆ.

ಈ ಅವಧಿಯಲ್ಲಿ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 2.64 ಮತ್ತು ಡೀಸೆಲ್ ದರ ₹ 3.25ರಷ್ಟು ಹೆಚ್ಚಾಗಿದೆ. ಭಾನುವಾರದ ಏರಿಕೆ ಪರಿಣಾಮ ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 96.31 ಮತ್ತು ಡೀಸೆಲ್ ದರ ₹ 89.12 ಆಗಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 93.21 ಮತ್ತು ಡೀಸೆಲ್ ದರ ಲೀಟರಿಗೆ ₹ 84.07ಕ್ಕೆ ತಲುಪಿದೆ. ರಾಜಸ್ಥಾನ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ಹಲವು ನಗರಗಳಲ್ಲಿ ಪೆಟ್ರೋಲ್ ದರವು ಈಗಾಗಲೇ ಲೀಟರಿಗೆ ₹ 100ರ ಗಡಿ ದಾಟಿದೆ. ಮುಂಬೈನಲ್ಲಿಯೂ ₹ 100ರ ಸಮೀಪಕ್ಕೆ ಬಂದಿದೆ. ಭಾನುವಾರ ಪೆಟ್ರೋಲ್ ದರ ₹ 99.49ಕ್ಕೆ ತಲುಪಿದ್ದರೆ ಡೀಸೆಲ್ ದರ ₹ 91.30ಕ್ಕೆ ತಲುಪಿದೆ.

ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಪೆಟ್ರೋಲ್ ದರ ₹ 104.18ರಷ್ಟಿದ್ದು, ಇದು ದೇಶದಲ್ಲಿನ ಅತ್ಯಂತ ಗರಿಷ್ಠ ಮಟ್ಟವಾಗಿದೆ.

ಏಪ್ರಿಲ್‌ನಲ್ಲಿ ಚಿನ್ನದ ಉಳಿತಾಯ ನಿಧಿಗಳಲ್ಲಿ ₹ 864 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಚಿನ್ನದ ಉಳಿತಾಯ ನಿಧಿಗಳು ಮತ್ತು ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಏಪ್ರಿಲ್ ತಿಂಗಳಿನಲ್ಲಿ ಒಟ್ಟಾರೆ ₹ 864 ಕೋಟಿ ಬಂಡವಾಳ ಹೂಡಿಕೆ ಆಗಿದೆ. ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯು ಆರ್ಥಿಕ ಬೆಳವಣಿಗೆಯಲ್ಲಿ ಅನಿಶ್ಚಿತ ಸ್ಥಿತಿ ಸೃಷ್ಟಿಸಿದ್ದರೂ ಈ ಪ್ರಮಾಣದಲ್ಲಿ ಹೂಡಿಕೆ ಆಗಿದೆ.

ಏಪ್ರಿಲ್‌ನಲ್ಲಿ ಚಿನ್ನದ ಉಳಿತಾಯ ನಿಧಿಗಳಲ್ಲಿ ₹ 184 ಕೋಟಿ ಮತ್ತು ಚಿನ್ನದ ಇಟಿಎಫ್‌ನಲ್ಲಿ ₹ 680 ಕೋಟಿ ಹೂಡಿಕೆ ಆಗಿದೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾ ಮಾಹಿತಿ ನೀಡಿದೆ.

ಅನಿಶ್ಚಿತ ಸಂದರ್ಭಗಳಲ್ಲಿ ಚಿನ್ನವು ಹೂಡಿಕೆದಾರರ ಪ್ರಮುಖ ಆಯ್ಕೆಯಾಗಿ ಇರಲಿದೆ. ಹೀಗಾಗಿ 2021–22ನೇ ಹಣಕಾಸು ವರ್ಷದಲ್ಲಿ ಸಕಾರಾತ್ಮಕ ಹೂಡಿಕೆಯು ಮುಂದುವರಿಯುವ ನಿರೀಕ್ಷೆ ಮಾಡಲಾಗಿದೆ ಎಂದು ಕ್ವಾಂಟಮ್ ಮ್ಯೂಚುವಲ್ ಫಂಡ್‌ನ ಹಿರಿಯ ನಿಧಿ ನಿರ್ವಾಹಕ ಚಿರಾಗ್ ಮೆಹ್ತಾ ತಿಳಿಸಿದ್ದಾರೆ.

2020–21ರಲ್ಲಿ ಚಿನ್ನದ ನಿಧಿಗಳಲ್ಲಿ ಒಟ್ಟಾರೆ ₹ 3,200 ಕೋಟಿ ಹೂಡಿಕೆ ಆಗಿದೆ. ಚಿನ್ನದ ಇಟಿಎಫ್‌ಗಳಲ್ಲಿ ₹ 6,900 ಕೋಟಿ ಹೂಡಿಕೆ ಆಗಿದೆ.

ಈ ನಿಧಿಗಳು ಕಳೆದ ಮೂರು ವರ್ಷಗಳಲ್ಲಿ ವಾರ್ಷಿಕ ಸರಾಸರಿ ಶೇಕಡ 12ರಿಂದ ಶೇ 14ರಷ್ಟು ಲಾಭ ತಂದುಕೊಟ್ಟಿವೆ. ಐದು ವರ್ಷಗಳಲ್ಲಿ ಶೇ 8ಕ್ಕೂ ಹೆಚ್ಚಿನ ಲಾಭ ತಂದುಕೊಟ್ಟಿವೆ.

‘ಎಂಎಸ್‌ಎಂಇಗೆ ಪರಿಹಾರ ನೀಡಿ’

ಲಖನೌ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದಿಂದಾಗಿ ಕಿರು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆ (ಎಂಎಸ್‌ಎಂಇ) ವಲಯವು ಹೆಚ್ಚಿನ ಹಾನಿ ಅನುಭವಿಸಿದೆ. ಹಾಗಾಗಿ ಈ ವಲಯಕ್ಕೆ ಪರಿಹಾರದ ಪ್ಯಾಕೇಜ್ ನೀಡುವಂತೆ ಭಾರತೀಯ ವಾಣಿಜ್ಯೋದ್ಯಮ ಮಹಾಸಂಘವು (ಅಸೋಚಾಂ) ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಪರಿಹಾರ ಪ್ಯಾಕೇಜ್‌ನ ಅವಶ್ಯಕತೆ ಇದೆ. ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ಕೆಲವು ಯೋಜನೆ ರೂಪಿಸಬೇಕಿದೆ. ಇದರಿಂದಾಗಿ ನಾವು ಹೆಚ್ಚು ಅಗತ್ಯ ಇರುವವರಿಗೆ ಕೇಂದ್ರೀಕೃತ ಮತ್ತು ಸರಿಯಾದ ಪರಿಹಾರವನ್ನು ನೀಡ ಬಹುದಾಗಿದೆ ಎಂದು ಅಸೋಚಾಂ ಅಧ್ಯಕ್ಷ ವಿನೀತ್ ಅಗರ್‌ವಾಲ್ ಹೇಳಿದ್ದಾರೆ.

ಕೇಂದ್ರ ಸರ್ಕಾರದ ಮುಂದೆ ಕೆಲವು ಸಲಹೆಗಳನ್ನೂ ಅವರು ಇಟ್ಟಿದ್ದಾರೆ.

- ಬ್ಯಾಂಕುಗಳು ಎಂಎಸ್‌ಎಂಇಗಳಿಗೆ ನೀಡುವ ದುಡಿಯುವ ಬಂಡವಾಳದ ಪ್ರಮಾಣವನ್ನು ಶೇಕಡ 20ರಷ್ಟು ಹೆಚ್ಚಿಸಬೇಕು. ಆದರೆ ಇದಕ್ಕೆ ಯಾವುದೇ ಹೆಚ್ಚುವರಿ ಮೇಲಾಧಾರ ವಿಧಿಸಬಾರದು.
- ಎಂಎಸ್‌ಎಂಇಗಳ ವಸೂಲಾಗದ ಸಾಲದ (ಎನ್‌ಪಿಎ) ಮರು ವರ್ಗೀಕರಣ ಆಗಬೇಕು.
- ಬೀದಿ ಬದಿ ವ್ಯಾಪಾರಿಗಳು, ಸಣ್ಣ ಅಂಗಡಿ ನಡೆಸುವವರಿಗೂ ಕೆಲವು ಪರಿಹಾರ ಘೋಷಿಸಬೇಕು. ದುಡಿಯುವ ಬಂಡವಾಳದ ಸಾಲ ಹಾಗೂ ನೇರ ಪ್ರಯೋಜನಗಳನ್ನು ನೀಡಬೇಕು.
- ಕಳೆದ ಬಾರಿ ಗ್ರಾಮೀಣ ಭಾಗಕ್ಕೆ ಕೆಲವೊಂದು ಪರಿಹಾರ ಘೋಷಿಸಲಾಗಿತ್ತು. ಈ ಬಾರಿಯೂ ಅದೇ ರೀತಿಯ ಕೊಡುಗೆ ಘೋಷಿಸಬೇಕು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹540
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹542

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹247-325
ದ್ವಿತಳಿ (ಬಿ.ವಿ)
₹296-392